ಕರ್ಮವೀರ

ಹುಬ್ಬಳ್ಳಿ ತಾ. ೨—೪—

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ


ಸಂಪಾದಕರು:
ಪಾ. ವಾ. ಪ್ರಡೆಸಾಟಿ]

[ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ

ಮಹಾತ್ಮರ

ವಿಚಾರ ತರಂಗ

ಸತ್ಯದ ಸಾಕ್ಷಾತ್ಕಾರ ಹೊಂದ ಬೇಕಾದರೆ, ಜಗತ್ತಿನಲ್ಲಿಯ ಸಕಲ ಪ್ರಾಣಿಗಳಲ್ಲಿ ಅತ್ಯಂತ ಹೀನವಾದ ಜೀವಿಗಳನ್ನು ನಾವು ನಮ್ಮಂತೆಯೇ ಬಗೆಯಬೇಕು. ಇದನ್ನು ಹೊಂದ ಲಿಚ್ಛಿಸುವ ಯಾವ ವ್ಯಕ್ತಿಯೂ ತನ್ನ ಜೀವಮಾನದೊಳಗಿನ ಯಾವ ಚಟು ವಟಿಕೆಯಿಂದಲೂ ಅಲಿಪ್ತನಾಗಿರ ಲಾರನು. ಈ ನನ್ನ ಸತ್ಯದ ಆರಾಧನೆ ಯಿಂದಲೇ ನಾನು ರಾಜಕಾರಣದಲ್ಲಿ ಸೆಳೆಯಲ್ಪಟ್ಟಿರುವೆನು. ರಾಜ. ಕಾರಣಕ್ಕೂ ಧರ್ಮಕ್ಕೂ ಯಾವ ಸಂಬಂಧವಿಲ್ಲೆಂದು ಹಲವರು ಪ್ರತಿ. ಪಾದಿಸುವರು. ಇಂಥವರಿಗೆ ಧರ್ಮದ ಗಂಧವೇ ಇಲ್ಲ. ಈ ಮಾತನ್ನು ನಾನು ನಿಃಸಂದೇಹವಾಗಿಯೂ ಅತ್ಯಂತ ನಮ್ರತೆಯಿಂದಲೂ ಹೇಳು ತ್ತೇನೆ. ಈ ಭೂಮಿಯ ಮೇಲಿನ ನಶ್ವರ ರಾಜ್ಯದ ತೃಷ್ಣೆ ನನಗಿಲ್ಲ. ರಾಮರಾಜ್ಯವನ್ನು ಪ್ರಸ್ಥಾಪಿಸಲು ನಾನು ಹೆಣಗುತ್ತಿದ್ದೇನೆ. ಸಕಲ ಜೀವಧಾರಿಗಳೊಡನೆ ನಾನು ಸಮರಸ ನಾಗಬೇಕೆಂಬುದೇ ನನ್ನ ಹಂಬಲ. ಭಗವದ್ಗೀತೆಯ ಭಾಷೆಯಲ್ಲಿ ಹೇಳು ವದಾದರೆ, ನಾನು ಶತ್ರುಮಿತ್ರರೆಂದು ಯಾರನ್ನೂ ಭಾವಿಸುವದಿಲ್ಲ. ಎಲ್ಲ ರೊಡನೆಯೂ, ಸುಖಶಾಂತಿಯಿಂದ ಬಾಳಬಯಸುತ್ತೇನೆ. ಧರ್ಮವಿರಹಿತ ವಾದ ರಾಜಕಾರಣವನ್ನು ನಾನರಿಯೆ. ಅವು ಒಂದನ್ನೊಂದು ಆಶ್ರಯಿಸಿವೆ. ಧರ್ಮವಿರಹಿತವಾದ ರಾಜಕಾರಣವು ಮರಣದ ಉರುಲು. ಯಾಕೆಂದರೆ ಅದರಿಂದ ಅಂತರಾತ್ಮನ ನಾಶ ವಾಗುವದು.



ಶ್ರೀ. ವಿ. ನರಹರಿರಾಯರು

ಹಿಂದುಸ್ಥಾನ ಸರಕಾರದ ಹಣಕಾಸಿನ ಖಾತೆಯ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ನರಹರಿರಾಯರು, ಭಾರತದ ಆಡಿಟರ ಜನರಲ್ಲರಾಗಿ ನೇಮಕ ಹೊಂದುವ ರೆಂದು ತಿಳಿಯುತ್ತದೆ. ಶ್ರೀ. ನರಹರಿರಾಯರು ಮೈಸೂರಿನವರು.

ಜೇಬು ಝಣಝಣ. ಹೊಟ್ಟೆ ಭಣಭಣ

— ಪುಟ ೫

ಸುಳ್ಳು ಹೇಳುವ ಅವಶ್ಯಕತೆ (ಹರಟೆ) ಪುಟ ೨



KARMAVEER

“ ಅಸತ್ಯಂ ವದ! ”

ಲೇ:–ಶ್ರೀ ನಾ. ರಾ.

“ ಸತ್ಯದಿಂದಲೇ ಸಾವು. ಸುಳ್ಳಿನಿಂದಲೇ ಸುಖ” ಎಂದು ನಾನು ಹೇಳುವೆ. ಹೆದರಬೇಡಿ ಅಥವಾ ಸಿಟ್ಟಿಗೇಳಬೇಡಿ—ಪೂರ್ವದಲ್ಲಿ ಎಷ್ಟೋ ಧರ್ಮಗುರುಗಳ, ನೀತಿಬೋಧಕರ, ಉಕ್ತಿಗೆ ವಿರುದ್ಧವಾದದ್ದನ್ನು ಹೇಳುತ್ತೇನೆ ಎಂದು. ಇಲ್ಲಿ ಪೂರ್ವಕಾಲದಿಂದ ಗೌಪ್ಯವಾಗಿ ಹೇಳಿದ್ದನ್ನು ನಾನು ಬಹಿರಂಗವಾಗಿ ಹೇಳುತ್ತಿದ್ದೇನೆ ಇಷ್ಟೆ. ಮದ್ಯದನ್ನು ಮುಟ್ಟಬಾರದು ಎಂದು ಹೇಳುತ್ತಿದ್ದರು. ಆದರೆ ಮದ್ಯವಿಲ್ಲದೆ ಯಜ್ಞ ಮಾಡಬಾರದು ಮತ್ತು ಯಜ್ಞ ಮಾಡದವನು ಬ್ರಾಹ್ಮಣನಲ್ಲವೆಂತಲೂ ಪೂರ್ವಜರು ಹೇಳುತ್ತಿದ್ದರು. . ಅಂದರೆ ಅಪ್ರತ್ಯಕ್ಷವಾಗಿ ಮದ್ಯವನ್ನು ಮುಟ್ಟಿರೆಂದು ಬೋಧಿಸಿದಂತಿಲ್ಲವೇ? ಹಾಗೆಯೇ ಸತ್ಯಮಾತಾಡಿರಿ ಎಂದೂ ಅವರು ಬೋಧಿಸುತ್ತಿದ್ದುದು.

ಸತ್ಯವನ್ನು ಮಾತನಾಡಿದವರು, ಮಾತನಾಡುತ್ತಿರುವವರು, ಮಾತನಾಡುವವರು ಇಡೀ ವಿಶ್ವದಲ್ಲಿಯೆ ಇಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಇದು ದುಷ್ಟ ಧೈರ್ಯವಲ್ಲ. ನೀವು ಹಾಗೆ ಹೇಳಿದರೆ ನಮ್ಮ ಪುರಾಣಗಳೇ ಸುಳ್ಳೆಂದು ಹೇಳಿದಂತೆ. ಅಥವಾ ಪುರಾಣಗಳು ಸುಳ್ಳು ಎಂದು ನಂಬುತ್ತಿದ್ದರೆ ಇತಿಹಾಸದ ಉದಾಹರಣೆಗಳನ್ನು ತೆಗೆದುಕೊಳ್ಳಿರಿ. ಅದೂ ಸುಳ್ಳು ಎನಿಸಿದರೆ ನಿಮ್ಮ ಉದಾಹರಣೆಯನ್ನೇ ನೀವು ತೆಗೆದುಕೊಳ್ಳಿರಿ. “ನಾನು ಸತ್ಯವನ್ನೇ ಮಾತನಾಡುತ್ತೇನೆ” ಎಂದು ಯಾರಾದರೂ ಹೇಳಿದರೆ ಅವರು ಸುಳ್ಳನ್ನೇ ಹೇಳುತ್ತಿರುವರು ಅಥವಾ ಸಾಯುವದರಲ್ಲಿಯೇ ಇರುವರೆಂದು ತಿಳಿದುಕೊಳ್ಳಬೇಕು ಯಾಕಂದರೆ “ಸತ್ಯದಿಂದಲೇ ಸಾವು”.

* * *

ಪುರಾಣಕಾಲದಲ್ಲಿ ಯಾರು ಸತ್ಯ ಮಾತನಾಡಿದರೆಂದು ಹೇಳುವಿರಿ? ದೇವತೆಗಳೇ? ಅಸುರರೇ? ರಾಮನೇ? ಕೃಷ್ಣನೇ? ಧರ್ಮರಾಜನೇ? ಹೇಳಿರಿ ಯಾರು ಸತ್ಯ ಮಾತನಾಡಿದವರಿದ್ದಾರೆ? ಸಮುದ್ರಮಂಥನದ ಕಾಲಕ್ಕೆ ಉದ್ಭವಿಸಿದ ಅಮೃತವು ದೇವತೆಗಳ ಸ್ವಾಯತ್ತವಾದದ್ದು ಸತ್ಯದಿಂದೆಂದು ತಿಳಿದಿರುವಿರಾ! ಪಾಪ, ಸತ್ಯವನ್ನು ನಂಬಿದ ಅಸುರರು ಒಬ್ಬೊಬ್ಬರಾಗಿ ಸತ್ತುಹೋದರು. ಅದಕ್ಕೇ ಹೇಳುವದು “ಸತ್ಯದಿಂದ ಸಾವು, ಸುಳ್ಳಿನಿಂದ ಸುಖ” ವೆಂದು.

ರಾಮಾವತಾರದಲ್ಲಿ ಶೂರ್ಪನಖಿಗೆ ರಾಮನು ಸುಳ್ಳು ಹೇಳಿ ಲಕ್ಷ್ಮಣನು ನಿನ್ನನ್ನು ಲಗ್ನವಾಗುವನೆಂದು ಕಳಿಸಲಿಲ್ಲವೆ? ಇದನ್ನೇ ನಂಬಿಕೊಂಡು ಹೋದ ಶೂರ್ಪನಖಿ ಕಷ್ಟಕ್ಕೆ ಗುರಿಯಾದಳು.

ಶ್ರೀಕೃಷ್ಣನಂತೂ ಸುಳ್ಳು ಮಾತನಾಡುವರ ಅಧಿದೇವ. ಆ ಯುಗ ಸುಳ್ಳಿನಿಂದಾಗುವ ಲಾಭಗಳನ್ನು ಜಗತ್ತಿಗೆ ಸಾರುವಂತಿದೆ. ಕೃಷ್ಣನು ಸಾಧಿಸಿದ ಪ್ರತಿಯೊಂದು ಲೀಲೆಯೂ ಸುಳ್ಳುಮಾತಿನಿಂದಲೇ ಕೈಗೂಡಿತು.

ಸತ್ಯವನ್ನೇ ಮಾತಾಡುವವನೆಂದು ಹೆಸರಾಂತ ಧರ್ಮರಾಜನು ಸುಳ್ಳು ಮಾತನಾಡಲಿಲ್ಲವೇ? ದ್ರೋಣಾಚಾರ್ಯರು ಹೇಗೆ ಮೃತರಾದರೆಂದು ಕೇಳಿರುವಿರಿ, ಧರ್ಮರಾಜನು “ಅಶ್ವತ್ಥಾಮಾ ಹತಃ. . ನರೋ ವಾ ಕುಂಜರೋ ವಾ” ಎಂದು ಹೇಳಿದಾಗ್ಗೆ ಧರ್ಮರಾಜನಿಗೆ ನರನೋ ಕುಂಜರವೋ ಗೊತ್ತಿರಲಿಲ್ಲವೇ? ಈ ಸುಳ್ಳಿನಿಂದಲ್ಲವೇ ಅವನಿಗೆ ಮುಂದೆ ಸುಖ ದೊರೆತದ್ದು?

ಹೀಗೆ ಪುರಾಣ ಕಾಲದಿಂದಲೂ ಸುಳ್ಳು ಮಾತನಾಡುವದು ನಡೆದು ಬಂದಿದೆ.

* * *

ಇತಿಹಾಸ ಕಾಲದಲ್ಲಿ ಬೇಕಾದ ಆಳಿಕೆಯನ್ನು ತೆ[illegible]ಕೊಳ್ಳಿರಿ. ಪ್ರತಿಯೊಂದು ಆಳಿಕೆಯು ಸುಳ್ಳಿನಿಂದ ಸುಖ ದೊರೆತದ್ದನ್ನು ಸಾರಿ ಹೇಳುತ್ತದೆ. ಚಾಣಕ್ಯನೇನು ಸಾಮಾನ್ಯನೇ! ಅವನು ದ್ವಾಪರ ಯುಗದಲ್ಲಿಯ ಕೃಷ್ಣನ ಪಡಿನೆಳಲು. ರಾಜಕಾರಣದಲ್ಲಿ ಸತ್ಯಕ್ಕೆ ಎಂದೂ ಜಯವಿಲ್ಲವೆಂದು ಸಾರಿ ಹೇಳುತ್ತಿದೆ ಅವನ ಪ್ರತಿಯೊಂದು ಕಾರ್ಯ. ಮುಸಲ್ಮಾನರ ಆಳಿಕೆಯನ್ನು ತೆಗೆದುಕೊಳ್ಳಿರಿ. ಮರಾಠರ ಆಳಿಕೆಯನ್ನು ತೆಗೆದುಕೊಳ್ಳಿರಿ. ಎಲ್ಲೆಲ್ಲಿಯೂ ಇದೇ ಉದಾಹರಣೆ. ಬ್ರಿಟಿಶರ ಆಳಿಕೆಯಂತೂ ಇದಕ್ಕೆ ಹೆಸರಾದ ಆಳಿಕೆ.

ರಾಜರೇ ಈ ರೀತಿ ಸುಳ್ಳು ಮಾತನಾಡುವವರಿದ್ದರೆ ಪ್ರಜೆಗಳ ವಿಷಯಕ್ಕೆ ಹೇಳುವ ಕಾರಣವೇ ಇಲ್ಲ. ಏಕೆಂದರೆ “ಯಥಾ ರಾಜಾ ತಥಾ ಪ್ರಜಾಃ”

ನಮ್ಮ ಯುಗಕ್ಕಂತೂ ಕಲಿಯುಗವೆಂದು ಹೆಸರಿಟ್ಟಿರುವರಲ್ಲದೆ ಇದು ಸುಳ್ಳಿನ ಯುಗ” ವೆಂದು ಕಲಿಯುಗದ ಗುಣಧರ್ಮದಲ್ಲಿ ವಿವರಿಸಿಯೇ ಇರುವರು. ಆದರೆ ಯಾವ ಯುಗದಲ್ಲಿ ಸುಳ್ಳು ಇದ್ದಿಲ್ಲ? ಅಂದ ಮೇಲೆ ಇದು ಒಂದು ಪರಂಪರಾಗತವಾಗಿ ನಡೆದು ಬಂದ ಪದ್ಧತಿ. ಪೂರ್ವಜರು ನಮಗೆ ಇತ್ತ ದಿವ್ಯ ನಿಧಿ.

ಪೂರ್ವಕಾಲದಲ್ಲಿ ಸತ್ಯವನ್ನು ಮಾತನಾಡುತ್ತಿದ್ದಿಲ್ಲವೆಂದು ಹೇಳಲಿಕ್ಕೆ ಇನ್ನೂ ಆಧಾರ ಬೇಕೆ? ನೋಡಿರಿ, ಎಲ್ಲ ನೀತಿ ಬೋಧಕರು “ಸತ್ಯವನ್ನೇ ಮಾತನಾಡಿರಿ” ಎಂದು ಹೇಳುತ್ತಿದ್ದಿಲ್ಲವೇ? ಉಪನಿಷತ್ತಿನಲ್ಲಿ “ ಸತ್ಯಂ ವದ ” ಎಂದು ಉಪದೇಶಿಸಿಲ್ಲವೇ? ಇದಕ್ಕಿಂತ ಹೆಚ್ಚಿನ ಆಧಾರವೇಕೆ ಬೇಕು? ಸತ್ಯವನ್ನು ಮಾತಾಡುತ್ತಿದ್ದಿಲ್ಲವೆಂದಲ್ಲವೇ ಸತ್ಯಮಾತನಾಡಿರಿ ಎಂದು ಹೇಳುವದು? ಚಹವನ್ನು ಕುಡಿಯಬೇಡಿರೆಂದು ನೀವು ಚಹ ಕುಡಿಯುವವರಿಗೆ ಬೋಧಿಸುವಿರೋ ಅಥವಾ ಕುಡಿಯದವರಿಗೋ? ಅಂದ ಮೇಲೆ ಪೂರ್ವಕಾಲದಿಂದಲೂ ಅಸತ್ಯ ಮಾತನಾಡುವದು ರೂಢಿಯಲ್ಲಿ ಇತ್ತೆಂದು ಆಗಲಿಲ್ಲವೇ?

ಸತ್ಯ ಮಾತನಾಡಲು ಎಷ್ಟು ಕಠಿಣವಾಗುತ್ತದೆ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಪೂರ್ವಕಾಲದಲ್ಲಿಯೇ ನಮ್ಮ ಪೂರ್ವಜರು ಇದನ್ನು ಮನಗಂಡಿದ್ದರು. ಅದಕ್ಕಾಗಿಯೇ “ಕೆಲಕೆಲವು ವೇಳೆ ಸುಳ್ಳು ಮಾತನಾಡಿದರೆ ಪಾಪ ತಟ್ಟದು” ಎಂದು ಅವರು ಹೇಳಿರುವರು. ಅಂದರೆ ಆ ವೇಳೆಯಲ್ಲಿ ಸುಳ್ಳು ಮಾತನಾಡುವದು ಅನಿವಾರ್ಯವೆಂದು ಅವರಿಗೆ ಅನಿಸಿರಲೇಬೇಕು. ಅದಕ್ಕಾಗಿಯೇ “ನ ನರ್ಮಯುಕ್ತಂ ವಚನಂ ಹಿನಸ್ತಿ। ನ ಸ್ತ್ರೀಷು ರಾಜನ್ನ ವಿವಾಹಕಾಲೇ॥ ಪ್ರಾಣಾತ್ಯಯೇ ಸರ್ವಧನಾಪಹಾರೇ। ಪಂಚಾನೃತಾನ್ಯಾಹುರಪಾತಕಾನಿ ” ಎಂದು ಹೇಳಿಲ್ಲವೇ? “ಸತ್ಯಂಬ್ರೂಯಾತ್ ಪ್ರಿಯಂ ಬ್ರೂಯಾತ್ – –– ಪ್ರಿಯಂಚ ನಾನೃತಂ ಬ್ರೂಯಾತ್। ಏಷ ಧರ್ಮಃ ಸನಾತನಃ” ಸತ್ಯ ಹೇಳಬೇಕು, ಪ್ರಿಯವನ್ನೇ ಹೇಳಬೇಕು, ಪ್ರಿಯವಾಗಿದ್ದರೂ ಸುಳ್ಳು ಹೇಳಬಾರದು. ಇದು ಸನಾತನ ಧರ್ಮ ಎಂದಿದ್ದ ಸನಾತನ ಧರ್ಮದ ವಾಕ್ಯಕ್ಕೆ ಮೇಲಿನ ಅಮೆಂಡಮೆಂಟ ಜೋಡಿಸಿದರು. ಹೀಗೆ ನೂರುಪಟ್ಟು ಸಹಸ್ರಪಟ್ಟು ಬೆಳೆಯಹತ್ತಿತು. “ ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು. ” ಇದರಂತೆ ರಾಜನೀತಿಯಲ್ಲಿಯೂ ಸುಳ್ಳಿಗೆ ಪ್ರಾಧಾನ್ಯ ದೊರೆತು ರಾಜನೀತಿ, ಸುಳ್ಳು ಒಂದನ್ನೊಂದು ಬಲವಾಗಿ ಅಪ್ಪಿಕೊಂಡವು. ಅಂದ ಮೇಲೆ ಸಮಾಜದಲ್ಲಿ, ರಾಜಕಾರಣದಲ್ಲಿ ಎಲ್ಲಿಯೂ ಸತ್ಯಕ್ಕೆ ಜಯವಿಲ್ಲ. ಹೀಗಿರುವಾಗ ಸತ್ಯ ಮಾತನಾಡಬೇಕೇ ನೀವೇ ಹೇಳಿರಿ!

ಸುಳ್ಳು ಮಾತನಾಡಲು ಹಿಂದುಮುಂದು ನೋಡಬೇಡಿರಿ. ನೀವು ಮಾಡುವದಕ್ಕೆ ಶಾಸ್ತ್ರಾಧಾರವನ್ನು ಕೊಟ್ಟು ನಿಮ್ಮ ಕೃತಿಯನ್ನು ನೀವು ಸಮರ್ಥಿಸಿಕೊಳ್ಳಬಹುದು. ಪೂರ್ವಜರು ‘ ಎಂಥ ಕಠಿಣ ಪ್ರಸಂಗ ಬಂದರೂ ಸುಳ್ಳು ಮಾತನಾಡಬೇಡಿರಿ ’ ಎಂದು ಹೇಳಿದ್ದಾರೆ ನಿಜ. ಆದರೆ ‘ಪಂಚಾನೃತಾನ್ಯಾಹುರಪಾತಕಾನಿ ’ ಎಂದುಹೇಳಿದ್ದನ್ನು ಮರೆಯಬಹುದೋ! ನೀವು ಮಾತನಾಡಬೇಕಾದರೆ ಈ ಐದೇ ಪ್ರಸಂಗಗಳಲ್ಲಿ. ಈ ಐದು ಪ್ರಸಂಗಗಳನ್ನು ಬಿಟ್ಟರೆ ನಿಮಗೆ ಮಾತನಾಡುವ ಪ್ರಸಂಗಗಳೇ ಬಾರವು. ಅಂದರೆ ನೀವು ಸತ್ಯವನ್ನು ಆಡಬೇಡಿರೆಂಬುದನ್ನು ಬಳಸಿ ಹೇಳಿದಂತಾಗಲಿಲ್ಲವೇ. ?

ನಿಮ್ಮ ಹತ್ತಿರ ಒಂದೇ ಒಂದು ಸಿಗರೇಟು ಇದೆ ಎಂದು ತಿಳಿಯಿರಿ. ನಿಮ್ಮ ಮಿತ್ರನು ಸಿಗರೇಟು ಕೇಳಿದರೆ ನನ್ನ ಹತ್ತಿರ ಇಲ್ಲವೆಂದು ಸುಳ್ಳು ಹೇಳಿದರೆ ಅದು ಪಾಪವಾಗಲಾರದು. ಯಾಕಂದರೆ ಸಿಗರೇಟು ಸೇದುವ ವೇಳೆಯಾದ ಕೂಡಲೇ ಸೇದದಿದ್ದರೆ ಜೀವ ಹೋಗುವಷ್ಟು ಸಂಕಟವಾಗುತ್ತದೆ. ಅದ್ದರಿಂದ ಜೀವವನ್ನು ಉಳಿಸಿಕೊಳ್ಳಲು ನೀವು ಸುಳ್ಳು ಹೇಳಿದಂತಾಗುವದು. ಅದಕ್ಕೆ ಪಾಪವಿಲ್ಲ. ಇದರಂತೆಯೇ ನೀವು ಮಾತನಾಡುವ ಪ್ರತಿಯೊಂದು ಸುಳ್ಳನ್ನು ಸಮರ್ಥನೆ ಮಾಡಿಕೊಳ್ಳಬಹುದು. ಅದ್ದರಿಂದ ಸುಳ್ಳು ಆಡುವದಕ್ಕೆ ಹಿಂದೆಮುಂದೆ ನೋಡಬೇಡಿರಿ. ಯಥೇಚ್ಛವಾಗಿ ಸುಳ್ಳು ಮಾತನಾಡಿರಿ.

ಅಷ್ಟೇಕೆ, ಒಂದು ದಿವಸದಲ್ಲಿ ನೀವು ಮಾತನಾಡಿದ ಸುಳ್ಳುಗಳನ್ನೂ ಅವುಗಳಿಂದಾದ ಅನಿಷ್ಟಗಳನ್ನೂ ನೆನಪಿಗೆ ತಂದುಕೊಳ್ಳಿರಿ. ಅದರಲ್ಲಿ ಬಹುಶಃ ಯಾವ ನಷ್ಟವೂ ಆಗದಿದ್ದುದು ಕಂಡುಬರುವದು. ಇದರಂತೆ ಸತ್ಯ ಮಾತಿನಿಂದ ಆದ ಅನರ್ಥಗಳನ್ನು ನೀವು ನೋಡಿದರೆ ಯಾಕೆ ಸುಳ್ಳು ಮಾತನಾಡಬೇಕೆಂಬುದು ಗೊತ್ತಾಗುವದು.

° ° °

“ಸತ್ಯಕ್ಕೆ ಸಾಧ್ಯವಾಗದ್ದು ಸುಳ್ಳಿನಿಂದ ಸಾಧ್ಯವಾಗುವದು” ಈ ಮಾತಿನಲ್ಲಿ ಯಾವ ಅಲಂಕಾರವೂ ಇಲ್ಲ. ಸತ್ಯದಿಂದ ದ್ರೋಣಾಚಾರ್ಯರು ಸಾಯುವದಿಲ್ಲವೆಂದು ತಿಳಿದೇ ಅಲ್ಲವೇ ಧರ್ಮರಾಜನು ಸುಳ್ಳುಮಾತನಾಡಿದ್ದು? ಸರ್ವಸಾಧಾರಣ ಬಾಂಬಿಗೆ ಹಣಿಯಲಿಲ್ಲವೆಂದ ಮೇಲೆ ಅಣುಬಾಂಬು ಪ್ರಯೋಗ ಮಾಡುವದು. ಸತ್ಯವು ಒಂದು ಬಾಂಬು ಎಂದು ತಿಳಿದರೆ ಸುಳ್ಳು ಒಂದು ಅಟಂ ಬಾಂಬು. ಸತ್ಯದ ಶಕ್ತಿ ನಿಂತ ಮೇಲೆ ಧರ್ಮರಾಜನು ಸುಳ್ಳಿನ ಮೊರೆಹೊಕ್ಕನು. ಅದ್ದರಿಂದ ನಾವು ಮೊದಲೇ ಸುಳ್ಳಿನ ಮೊರೆಹೊಕ್ಕು ಬಿಡೋಣ. ಶ್ರೀಕೃಷ್ಣನು “ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ” ಎಂಬುದರ ಆಶಯವೂ ಇದೇ ಆಗಿರಬಹುದಲ್ಲವೇ?

ಬ್ರಿಟಿಶ ಸಾಮ್ರಾಜ್ಯದ ವಿಸ್ತಾರವಾದದ್ದು ಸುಳ್ಳು ಮಾತನಾಡುವದರಿಂದಲ್ಲವೇ? ಮೊನ್ನಿನ ಮಹಾಯುದ್ಧದಲ್ಲಿ “ವಿಶ್ವ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡುತ್ತೇವೆ” ಎಂದು ಮಿತ್ರರು ಘೋಷಿಸಿದರು. ಇದರಲ್ಲಿ ಎಷ್ಟು ಸತ್ಯಾಂಶವಿತ್ತು? ಆದರೂ ಸುಳ್ಳಿಗೆ ಜಯವಾದುದನ್ನು ಕಾಣಲಿಲ್ಲವೆ? ಅದ್ದರಿಂದ “ಅಸತ್ಯಮೇವ ಜಯತೇ” ಹೊರತು “ಸತ್ಯಮೇವ ಜಯತೇ” ಅಲ್ಲ.

ರಾಜಕಾರಣದ ಉದಾಹರಣೆಗಳೇಕೆ? ಸಾಧಾರಣ ನಮ್ಮ ನಿಮ್ಮ ಜೀವನದ ಉದಾಹರಣೆಗಳನ್ನೇ ತೆಗೆದುಕೊಳ್ಳಿರಿ. ನೀವು ನಿಮ್ಮ ವಿಷಯಕ್ಕೆ ಯಾರಿಗಾದರೂ ಹೇಳುವದಿದ್ದರೆ ಸುಳ್ಳು ಬೆರಸದೇ ಹೇಳುವಿರಾ? ಹಾಗೆ ಹೇಳಿದರೆ ಕೇಳಿದವನಿಗೂ ನಿಮ್ಮ ಸಲುವಾಗಿ ಹೆಮ್ಮೆ ಅಥವಾ ಹೆದರಿಕೆ ಹುಟ್ಟದು. ಹೇಳಿದವನಿಗೂ ಸಮಾಧಾನವಾಗದು. ಆದರೆ ಸ್ವಲ್ಪ ಸುಳ್ಳು ಬೆರಸಿದರೆ ಒಳ್ಳೇ ಪರಿಣಾಮವಾಗುವದು. ಮೊನ್ನೆ ನನ್ನ ಮಿತ್ರನೊಬ್ಬನು ಒಂದು ಹೆಗ್ಗಣವನ್ನು ಹೊಡೆದನಂತೆ. ಅದನ್ನು ಹೇಗೆ ಹೊಡೆದನೆಂಬದನ್ನು ಅವನ ಬಾಯಿಯಿಂದಲೇ ಕೇಳಬೇಕು. ಅಂದರೆ ಕೇಳಿದ್ದು ಸಾರ್ಥಕವಾಗುವದು. “ಆ ಹೆಗ್ಗಣ ಎಷ್ಟೋ ದಿವಸಗಳಿಂದ ಆ ಮನೆಯಲ್ಲಿ ಬಂದು ತ್ರಾಸು ಕೊಡುತ್ತಿತ್ತು. ಮನೆಯಲ್ಲಿ ಮಲಗಿಕೊಂಡವರನ್ನು ಬಹಳ ಹೆದರಿಸುತ್ತಿತ್ತು. ಅದನ್ನು ಕೊಲ್ಲಲು ಅವರು ಎಷ್ಟೋ ದಿವಸಗಳ ವರೆಗೆ ಪ್ರಯತ್ನ ಮಾಡುತ್ತಿದ್ದರಂತೆ. ಸಾಧ್ಯವೇ ಆಗಿರಲಿಲ್ಲ. ಅಷ್ಟು ಚಾಣಾಕ್ಷವಾದ ಹೆಗ್ಗಣ ಅದು. ಅಂಥದನ್ನು ನಾನು ಹೊಡೆದೆ” ಎಂಬುದು ಅವನು ಹೇಳಿದ್ದರ ಸಾರಾಂಶ. ಇದರಲ್ಲಿ ಎಷ್ಟು ಸತ್ಯವಿದೆ ಎಂಬುದು ನಿಮಗೆಗೊತ್ತಾಗದೆ ಇರದು. ಮತ್ತು ಆ ಹೆಗ್ಗಣವನ್ನು ಹೊಡೆಯುವಾಗಿನ ಸನ್ನಿವೇಶವನ್ನು ಕೇಳಿದರಂತೂ ನವರಸಗಳೂ ಉಕ್ಕುವವು. “ಎಲ್ಲ ಬಾಗಿಲುಗಳನ್ನೂ ಹಾಕಿ ನಾನೂ ನನ್ನ ಇನ್ನೊಬ್ಬ ಮಿತ್ರನೂ ಕಲಿಯುಗದ ಭೀಮಸೇನಾವತಾರವನ್ನು ತಾಳಿ ನಿಂತೆವು. ಉರಿಯುವ ಕಟ್ಟಿಗೆಯೇ ನಮ್ಮ ಗದೆಯಾಗಿತ್ತು. ಹೆಗ್ಗಣವನ್ನು ಹೊಡೆಯುವಾಗ ಅದು ಎಷ್ಟೋ ಸಲ ನಮ್ಮನ್ನು ತಪ್ಪಿಸಿತು. ಎಷ್ಟೋ ಸಲ ಗೋಡೆ ಏರಿತು. ಇದನ್ನೆಲ್ಲ ನೋಡಿದ ನನ್ನ ಇನ್ನೊಬ್ಬ ಮಿತ್ರನ ಪರಿಸ್ಥಿತಿ ಯುದ್ಧಕ್ಕೆ ಹೋದ ಉತ್ತರಕುಮಾರನದೇ ಆಗಿಹೋಗಿತ್ತು. ಒಂದು ಸಲ ಆ ಹೆಗ್ಗಣ ನನ್ನ ಮೇಲೆಯೇ ಹಾರಿಬಿಟ್ಟಿತು. ಆದರೆ ನಾನು ಧೈರ್ಯದಿಂದ [ಹೆದರಿ ಇದ್ದರೂ ಇರಬಹುದು] ನಿಂತ ಸ್ಥಳ ಬಿಟ್ಟು ಕದಲಲಿಲ್ಲ. ಕಡೆಗೆ ಗದೆಯಿಂದ ಒಂದು ಹೊಡೆದೆ. ಕೂಡಲೆ ಅದು ಗತಪ್ರಾಣವಾಯಿತು. ಆ ಮೇಲೆ ನೋಡಬೇಕು ನಮ್ಮ ಉತ್ತರ ಕುಮಾರ ಗೆಳೆಯನ ಪೌರುಷ! ಎರಡು ಮೂರು ಹೊಡೆತಗಳನ್ನು ಆ ನಿರ್ಜೀವ ಹೆಗ್ಗಣಕ್ಕೆ ಹೊಡೆದನು” ಎಂದು ನನ್ನ ಮಿತ್ರ ನನಗೆ ಹೇಳಿದನು. ಇದ್ದರಲ್ಲಿ ಎಷ್ಟು ಸತ್ಯಾಂಶವಿದೆ? ಆದರೆ ಇದನು ಕೇಳಿದರೆ ಒಂದು ತರಹದ ಆಶ್ಚರ್ಯ, ಸಂತೋಷ [ಏನೇ ಅನ್ನಿರಿ] ಆಗುವದಿಲ್ಲವೇ? ಹೇಳುವವನಂತೂ ಶ್ರೇಷ್ಠ ನಟನಾಗಿರುವನೋ ಎಂಬ ಕಲ್ಪನೆ ಬಾರದಿರದು. ಅಂದರೆ ಹೇಳಿದವನಿಗೂ ಕೇಳಿದವನಿಗೂ ಸುಖ, ಆನಂದ ಬಂದಂತಾಗಲಿಲ್ಲವೇ? ಬರಿ ಸತ್ಯವನ್ನಷ್ಟೇ ಹೇಳಿದ್ದರೆ ಇದಾವುದು ಆಗುತ್ತಿತ್ತು? ಸಾಹಿತ್ಯ ನಿರ್ಮಾಣವಾದರೂ ಇಂತಹ ಸುಳ್ಳು ಮಾತುಗಳಿಂದಲೇ ಆಗುವದು. ಆದ್ದರಿಂದ ಸಾಹಿತ್ಯ ನಿರ್ಮಾಣಕ್ಕೂ ಸುಳ್ಳು ಮಾತುಗಳೇ ಅಡಿಗಲ್ಲುಗಳು.

ವಿನೋದಕ್ಕಾದರೂ ಸುಳ್ಳೇ ಮೂಲಕಾರಣ. ಇದನ್ನು ಬೇರೆ ಹೇಳುವ ಕಾರಣವೇ ಇಲ್ಲ. ನೀವು ನಿಮ್ಮ ಮಿತ್ರರನ್ನು ಸುಳ್ಳಿನಿಂದ ಎಷ್ಟು ಸಲ ನಗೆಗಡಲಿನಲ್ಲಿ ತೇಲಿಸಿಲ್ಲ.

* *

ಮನುಷ್ಯನು ಹೊನ್ನು ಹೆಣ್ಣು ಮಣ್ಣುಗಳಿಗೆಲ್ಲವೇ ಹೆಣಗುವದು. ಇವೆಲ್ಲವೂ ಸುಳ್ಳಿನಿಂದಲೇ ಸಾಧ್ಯ. ಹೊನ್ನು ಮಣ್ಣುಗಳನ್ನು ಸುಳ್ಳು ಮಾತನಾಡಿ ಗಳಿಸಿಕೊಳ್ಳಲು ಅನುಕೂಲವಾಗಲೆಂದೇ ಕೋರ್ಟುಗಳನ್ನು ಸ್ಥಾಪಿಸಿರುವರು. ಅಲ್ಲಿ ಹೋಗುವದಕ್ಕೆ ಪೂರ್ವದಲ್ಲಿ ನಿಮಗೆ ಸುಳ್ಳನ್ನು ಕಲಿಸಲು ಈ ವಿದ್ಯೆ

–ಗಣಸೆಯ ಪುಟಕ್ಕೆ

* ಪ್ರಾಣಸುವಿರಾಸದಲ್ಲಿ; ಹೆಂಗಸರಲ್ಲಿ; ಮದುವೆಯಲ್ಲಿ ಪ್ರಾಣಾಪಾಯಕಾಲದಲ್ಲಿ ಮತ್ತು ಎಲ್ಲ ಸರ್ವಸ್ವವೂ ಕಳೆದು ಹೋಗುವಂಥ ಸಮಯದಲ್ಲಿ ಹೀಗೆ ಐದು ಪ್ರಸಂಗಗಳಲ್ಲಿ ಸುಳ್ಳು ಪಾತಕವಲ್ಲ.

ಸಹವಿದ್ಯಾಭ್ಯಾಸ

ಶ್ರೀ ಕೆ. ಎಂ. ಮುನಶಿಯವರು ಸಹ ವಿದ್ಯಾಭ್ಯಾಸದ ಪರವಾಗಿ ತಮ್ಮ ಮಗಳಾದ ಲತಿಕೆಗೆ ಬರೆದ ಕಾಗದದಲ್ಲಿ ಕೆಳಗಿನ ಸಮಂಜಸ ವಿಚಾರವನ್ನು ವಿವರಿಸಿದ್ದಾರೆ: ಸಹವಿದ್ಯಾಭ್ಯಾಸದಿಂದ ಹುಡುಗ ಹುಡುಗಿಯರು ಆತ್ಮಸಂಯಮವನ್ನು ಕಲಿಯುವರು. ವಿಯುಕ್ತ ವಿದ್ಯಾಭ್ಯಾಸದಿಂದ ಅವರಲ್ಲಿ ಕಾಮ ದೃಷ್ಟಿ ಕಂಡಗಳಿಗೆಗೆ ಏಳುವಂತಾಗುತ್ತದೆ. ಸಂಯುಕ್ತ ಪದ್ಧತಿಯಲ್ಲಿ ಅದು ಬೆಳೆಯಲಾರದು. ಇದರಿಂದ ಸ್ವಾತಂತ್ರ್ಯ ಮತ್ತು ಸಾಮ್ಯದ ಗೆಳೆತನ ಅವರಲ್ಲಿ ಮೂಡುತ್ತದೆ.

ಬಹುಸಂಖ್ಯಾಕ ಹುಡುಗರ ನಡುವೆ ಅಲ್ಪಸಂಖ್ಯಾಕ ಹುಡುಗಿಯರಿದ್ದಾಗ ಹುಡುಗರು ತೋರಿದ ಕೀಳುನಡತೆಗೆ ಅವರಿಗೆ ಹುಡುಗಿಯರನ್ನು ಸಮಾನಸ್ಕಂಧರೆಂದು ನಡೆಸಿಕೊಂಬ ಅಭ್ಯಾಸ ಇಲ್ಲದುದೇ ಕಾರಣ ಎನ್ನುತ್ತಾರೆ ಮುನಶಿಯವರು. ಈ ಕಾರಣದ ಜೊತೆಗೆ ಹುಡುಗಿಯರಿಗೂ ಹುಡುಗರೊಡನೆ ಸಮಾನಸ್ಕಂಧತೆಯ ಭಾವವನ್ನು ತಾಳುವ ಹೃದಯಶಕ್ತಿ, ಬುದ್ಧಿಶಕ್ತಿಗಳು ಬೆಳೆದು ಬಂದಿದ್ದಿಲ್ಲ ಎಂಬುದನ್ನೂ ಸೇರಿಸಿದರೆ ಸತ್ಯದ ಸಂಪೂರ್ಣ ಜ್ಞಾನವಾಗುವುದು. ಅವರ ಸಭ್ಯತೆಗೆ ಅನೇಕ ವೇಳೆ ಅವರ ಅಂಜಿಕೆಯಲ್ಲದೆ ನೀತಿಮತ್ತೆ ಕಾರಣವಲ್ಲ. ಅಂತೂ ಈ ವಿಧದ ದೂರಭಾವ ಹಾನಿಕರ ಎಂಬುದು ಅನುಭವ ಗಮ್ಯವೆನಿಸಿದೆ.

ಹೆಂಗಸು ಗಂಡಸಿನೊಡನೆ ಪ್ರಪಂಚದ ವ್ಯವಹಾರದಲ್ಲಿ ಸಮ ಪಾಲುಗಾರ್ತಿಯಾಗಲು ಪ್ರಯತ್ನಿಸಬೇಕೆಂಬಾಗ ಮುನಶಿಯವರು ಗಂಡಸು ಆಕ್ರಮಣಶೀಲ ಎಂದಿದ್ದಾರೆ. ಆತನು ಆಕ್ರಮಿಸುವುದು ಶರೀರಶಾಸ್ತ್ರ ಮನಃಶಾಸ್ತ್ರಗಳ ಪ್ರಕಾರ ಅವನಿಗೂ ಹೆಂಗಸಿಗೂ ಹಿತಕರವಾದುದಕ್ಕೆ ಇಂದಿನ ವರೆಗಿನ ಮಾನವ ಜೀವನವೇ ದೃಷ್ಟಾಂತ. ಅನ್ಯಾಯದ ಪಾಶವೀ ಆಕ್ರಮಣ ನಡೆದಲ್ಲಿ ಖಂಡನೀಯವೆನಿಸಿತ್ತಲ್ಲದೆ ಉಳಿದೆಡೆ ಹೆಂಗಸು ಅದನ್ನೇ ಬಯಸುವುದು ನಿಶ್ಚವೂ ಕಣ್ಣಿಗೆ ಕಾಣುತ್ತದೆ. ಅವಳು ಅದನ್ನು ಗೆಲ್ಲಬೇಕಾದರೆ ಗಂಡಸಿನಿಂದ ಕೆಲವು ಗುಣಗಳನ್ನು ಕಲಿತು, ಅವನನ್ನು ಮುನಶಿಯವರು ಹೇಳುವಂತೆ ದೂರನಿಟ್ಟೊ, ಗೆಳೆತನ ಬೆಳೆಸಿಕೊಳ್ಳುವ ಅವ್ಯವಸ್ಥೆಗೆ ಹೋಗದೆ, ಈಗಿಗಿಂತ ಹೆಚ್ಚು ಸತ್ತಿರಕ್ಕೆ ಕರೆದುಕೊಳ್ಳುವ ಕರ್ತೃತ್ವವನ್ನು ಅಳವಡಿಸಿಕೊಂಡರೆ ಅವಳ ಮತ್ತು ಅವನ ಇಬ್ಬರ ಜೀವನವೂ ಸುಧಾರಿಸುವಂತಾಗುವದು. ಆಸ್ಕರೇ ಒಪ್ಪುವ ''ನಟಿ ಸತ್ಯಭಾಮೆ''ಯರ ಪುರುಷಾಕರ್ಷಣ ಪ್ರಯತ್ನವು ಅವರಿಗೆ ಒಂದು ವಿಧದಲ್ಲಿ ಗೆಲುವನ್ನು ಕೊಟ್ಟರೆ ಮತ್ತೊಂದು ವಿಧದಲ್ಲಿ ಸೋಲನ್ನು ತಂದು ಕೊಟ್ಟಿದೆ; ಪುರುಷನನ್ನು ತಾತ್ಕಾಲಿಕವಾಗಿ ಮರುಳ್ಗೊಳಿಸಿದರೂ ಕಡೆಗೆ ಅವನ ಗೊಂಬೆಯಾಗಿ ಬಾಳಬೇಕಾಯಿತು.

ನಮ್ಮ ಕಾಲೇಜು ಹುಡುಗಿಯರು ಅತಿಶಯವಾಗಿ ತಾವು 'ಕಾಮಿನಿ'ಯರೆಂಬ ಭಾವವನ್ನು ತಾಳಿರುತ್ತಾರೆ. ಇದರಿಂದ ಅವರಿಗೆ ತಾವು ಬಯಸಿದ ರೂಪವಾಸ್ಯತೆ ಮತ್ತು ಅದರ ಅನಿವಾರ್ಯವಾದ ಬೊಂಬೆತನ ಇವು ಲಭಿಸುತ್ತವೆ. ಅಪರಿಚಿತನೊಡನೆ ಮಾತಾಡಲು ಹಿಂಜರಿಯುವುದು, ಮಾತಿನಲ್ಲಿ ಭಯಗ್ರಸ್ತ ಮುಖಮುದ್ರಾ ಪ್ರದರ್ಶನ, ಸಂದರ್ಭವನ್ನು ನೋಡದೆ ನಾಚಿಕೆಯನ್ನು ಅನಾವಶ್ಯಕವಾಗಿ ಪ್ರಯತ್ನತಃ ತಂದುಕೊಳ್ಳುವುದು. ಈ ದೌರ್ಬಲ್ಯಗಳಿಂದ ಅವರು ಕೆಲವೊಮ್ಮೆ ಬೇಕೆಂದೇ ಮತ್ತೆ ಕೆಲವೊಮ್ಮೆ ತಿಳಿಯದೆ ಹುಡುಗರನ್ನು ಆಕರ್ಷಿಸಲು ಯತ್ನಿಸಿ ಮೊದಲು ಗೆದ್ದು ಕಡೆಗೆ ಸೋತು ಗಂಡಸು ಆಕ್ರಮಣಶೀಲ ಎಂದು ಹೊರಹೊರಗೆ ದೂರಿಕೊಳ್ಳುತ್ತಾರೆ!

ಹೆಂಗಸು ಗಂಡಸಿನ ಪಾಪಮಾರ್ಗವೆನಿಸಿಕೊಂಡೇ ಅವನೊಡನೆ ಅವನ ಕಾರ್ಯಗಳಲ್ಲಿ ಭಾಗವಹಿಸಲು ಕಲಿಯಬೇಕೆಂದು ಬರೆದುದು ಯೋಗ್ಯವಾದ ವಿಚಾರ. ಅಲ್ಲದಿದ್ದರೆ ಅವಳು ಗಂಡುತನದಲ್ಲಿ ಸ್ಪರ್ಧೆಗೆ ಬಂದರೆ ಗಂಡೂ ಅಲ್ಲ, ಹೆಣ್ಣೂ ಅಲ್ಲ ಆಗಬೇಕಾದ ಪ್ರಸಂಗ ಉಂಟಾಗುತ್ತದೆ; ಅಂಥವರು ಮಾನಸಿಕ ರೋಗಿಗಳಾಗಿ ಸಾಯುತ್ತಾರೆ. ಕಾಲೇಜಿನಲ್ಲಿ ಗೆಳೆಯನನ್ನು ಆರಿಸಿಕೊಂಡರೆ ಹುಡುಗರು ಸಹಿಸುವದಿಲ್ಲ, ಟೀಕೆಮಾಡುತ್ತಾರೆ ಎಂದು ಹೇಳುವುದರ ಜೊತೆಗೆ ಹುಡುಗಿಯರೂ ಅಂಥ ಹುಡುಗಿಯನ್ನು ಗೇಲಿ ಮಾಡುತ್ತಾರೆಂಬುದನ್ನು ಮರೆಯಕೂಡದು. ಇದಕ್ಕೆಲ್ಲ ಕುಸಂಸ್ಕಾರವೇ ಕಾರಣ.

ಕಾಲೇಜು ಹುಡುಗಿಯರಿಗೆ ಆತ್ಮ ವಿಶ್ವಾಸ ಮತ್ತು ಗಾಂಭೀರ್ಯ ಇವು ಇಲ್ಲವಾದುದೇ

—೧೨ ನೇಯ ಪುಟಕ್ಕೆ

ದೇಶಾಂತರಗಳಿಂದ

ಬಹಿಷ್ಕೃತ ಟಿಟೋ

ಯುಗೋಸ್ಲೇವಿಯದ ನೇತೃಗಳಾದ ಮಾರ್ಶಲ್ ಟಿಟೋರವರ ಮೇಲೆ ಅಂತಾರಾಷ್ಟ್ರೀಯ ಕಮ್ಯುನಿಸ್ಟ ಸಂಘವು ಬಹಿಷ್ಕಾರ ಹಾಕಿದ ಸಂದರ್ಭದಲ್ಲಿ ಕೆಲವು ಸಂಗತಿಗಳು ಈಗ ಹೊರಬಿದ್ದಿವೆ. ಟಿಟೋ ಅವರ ಮೇಲೆ ಮಾಡಿದ ಆರೋಪಗಳಲ್ಲಿ ರಶಿಯದ ವಿರುದ್ಧ ಅವರು ನಿಂತರೆಂಬುದು ಪ್ರಧಾನವಾದುದು. ಯುಗೋಸ್ಲೋವಿಯದ ಕಮ್ಯುನಿಸ್ಟ ಪಕ್ಷದಲ್ಲಿ ಕಮ್ಯುನಿಜಮ್ಮಿಗೆ ಅಗತ್ಯವಾದ ಅಂತರಿಕ ಪ್ರಜಾಸತ್ತೆ ಮತ್ತು ಸ್ವದೋಷಾವಿಷ್ಕಾರ ಇವು ಇಲ್ಲದಂತಾಗುವಂತೆ ಟಿಟೋ ಸರ್ವಾಧಿಕಾರವನ್ನು ಬಳಸಿ ಅಧಿಕಾರಲಾಲ ಮತ್ತು ರಾಷ್ಟ್ರೀಯತಾವಾದ ತೋರಿಸಿ ಕೊಟ್ಟು ಇಬ್ಬರು ಮಂತ್ರಿಗಳನ್ನು ಸೆರೆಮನೆಗಟ್ಟಿದ್ದು ಅವರ ಅಪರಾಧವೆಂದು ಮಾಸ್ಕೋದ ಮತ.



ಮಾರ್ಶಲ್ ಟಿಟೊ

ಮಾಸ್ಕೋದಿಂದ ಸ್ವತಂತ್ರರಾಗಿ ವರ್ತಿಸಲು ಹವಣಿಸಿ ಟಿಟೋ ಕಮ್ಯುನಿಸ್ಟ್ ತತ್ವ ಮತ್ತು ಸಂಘಟನೆಗೆ ಕೊಡಲಿಯ ಪೆಟ್ಟನ್ನು ಕೊಟ್ಟಿದ್ದಲ್ಲದೆ ರಶಿಯದ ಸೂಚನೆಯಂತೆ ಬಾಲ್ಕನ್ ಮಹಾ ಮಂಡಲದ ಸ್ಥಾಪನೆಗೆ ಬೆಂಬಲ ಕೊಡದುದು ಅವರು ಬಗೆದ ದ್ರೋಹವೆಂದು ಹೇಳಲಾಗಿದೆ. ಅವರ ಪಕ್ಷದವರನ್ನು ಒಲಿಸಿಕೊಂಡು ಅವರನ್ನು ಗದ್ದುಗೆಯಿಂದ ಉರುಳಿಸಲು ಮಾಸ್ಕೋ ಶಕ್ತವಾಗುವುದೋ ಇಲ್ಲವೆಂಬುದನ್ನು ಕಾಯ್ದು ನೋಡಬೇಕು.

ಡ್ಯೂಯಿ ಅಧ್ಯಕ್ಷರಾದರೆ...?

ಅಮೇರಿಕದ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಪದವಿಗೆ ಹುರಿಯಾಳಾಗಿನಿಂತ ಥಾಮಸ ಡ್ಯೂಯಿಯವರಿಗೆ ಚುನಾವಣೆಯಲ್ಲಿ ಜಯ ಲಭಿಸಿದರೆ ನಾಳೆ ಅಮೇರಿಕದ ಧೋರಣದಲ್ಲಿ ಏನೇನು ಬದಲಾವಣೆಗಳುಂಟಾಗಬಹುದೆಂಬುದು ಕುತೂಹಲ ಕೆರಳಿಸುವ ವಿಷಯ. ಡ್ಯೂಯಿಯವರು ನ್ಯೂಯಾರ್ಕಿನ ಗವರ್ನರರಾಗಿದ್ದು ಜನಪ್ರಿಯತೆಯನ್ನು ಸಂಪಾದಿಸಿದ್ದರೂ ಅಧ್ಯಕ್ಷತೆಗೆ ಹೋದರೆ ತಮ್ಮ ದೃಷ್ಟಿಯನ್ನೂ ತಮ್ಮ ಪಕ್ಷದ ದೃಷ್ಟಿಯನ್ನೂ ಹೊಂದಿಸಿಕೊಂಡು ರಾಜಕೀಯ ಧೋರಣವನ್ನು ರೂಪಿಸಬೇಕಾಗುತ್ತದೆ ಎಂಬುದು ಸ್ಪಷ್ಟವಿದೆ.

ಡ್ಯೂಯಿಯವರು ಅಧಿಕಾರಕ್ಕೆ ಬಂದರೆ ರೂಸ್ವೆಲ್ಟರ ಕಾಲದಿಂದ ನಡೆದು ಬಂದ ಅನೇಕ ಪದ್ಧತಿಗಳು ಬದಲಾಗಬಹುದು. ಮಾರ್ಶಲ್ ಯೋಜನೆಯ ಸ್ವರೂಪ ಬದಲಾಗಬಹುದು. ವ್ಯಾಪಾರ ಪ್ರಧಾನವಾದ ರಿಪಬ್ಲಿಕನ್ ಪಕ್ಷವು ಯುರೋಪಿಗೆ ಯೋಜನೆಯನ್ವಯ ಮಾಡುವ ಸಹಾಯದ ಪ್ರತಿಫಲವನ್ನು ಕೇವಲ ಮೈತ್ರಿ ಲಾಭ ಮತ್ತು ರಶಿಯನ್ನರ ಪ್ರಭಾವವನ್ನು ಯುರೋಪಿನಲ್ಲಿ ಕಡಿಮೆಮಾಡುವದು ಇಷ್ಟರಲ್ಲಿ ಕಂಡು ತೃಪ್ತಿ ಹೊಂದಲಾರದು. ಯುರೋಪನ್ನು ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡುವದರಿಂದ ತಮಗೆ ಸ್ಪರ್ಧಾಳುಗಳಾಗಿ ಐರೋಪ್ಯ ವರ್ತಕರು ನಿಂತಾರೆಂದು ಅವರು ಶಂಕಿಸಿ ಸಹಾಯಧನವನ್ನು ಸಲ್ಲಿಸುವದರಲ್ಲಿ ಹಿಂದೆ ಮುಂದೆ ನೋಡಬಹುದು ಎಂದು ಜಾನ್ ಸೀಡರನು ''ನ್ಯೂಸ್ಟೇಟ್ಸ್‌ಮನ್ ಎಂಡ್ ನೇಶನ್ನಿ''ನಲ್ಲಿ ಬರೆಯುತ್ತಾನೆ. ಇದರ ಮೇಲೆ ಡೆಮೊಕ್ರಾಟರ ಕಾಲದಲ್ಲಿ ಅಸ್ಪಷ್ಟವಾಗಿ ಉಳಿದ ಕೆಲ ಕೂಲಿಕಾರರು ಅವರಿಗೆ ಅನುಕೂಲವಾಗುವಂತೆ ಮಾಡಿದ ಕಾಯಿದೆ ಕಟ್ಟುಗಳಲ್ಲಿ ರಿಪಬ್ಲಿಕನ್ನರು ಕೈಹಾಕುವದನ್ನು ಕಂಡರೆ ಎಲ್ಲಿಯೂ ಒಕ್ಕಟ್ಟಾಗಿ ಹೋರಾಟಕ್ಕೇಳಬಹುದು. ಡ್ಯೂಯಿಯವರು ಯುರೋಪಿನಲ್ಲಿ ಅಮೇರಿಕದ ಸಾಮಾನುಗಳಿಗೆ ಸಾಕಷ್ಟು ಗಿರಾಕಿಗಳು ಸಿಗದಿದ್ದರೆ ಅದನ್ನು ಅಲಕ್ಷಿಸಿ ದೂರ ಪ್ರಾಚ್ಯದಲ್ಲಿ ಹೆಚ್ಚಾಗಿ ಆ ಸಕ್ತಿವಹಿಸಬಹುದಾಗಿದೆ. ಇದರಿಂದ ಯುರೋಪಿನ ೧೬ ರಾಷ್ಟ್ರಗಳಲ್ಲಿ ಬ್ರಿಟನ್ನಿಗೆ ಹೆಚ್ಚು ನಷ್ಟ ಸಂಭವಿಸಬಹುದೆಂದು ತರ್ಕಿಸಲಾಗಿದೆ. ನಾಡೊಳಗಿನ ಕಾರ್ಮಿಕರ ಅತೃಪ್ತಿ ಮತ್ತು ಆರ್ಥಿಕ ವೈಪರೀತ್ಯಗಳನ್ನೂ ಅಂತಾರಾಷ್ಟ್ರೀಯ ಪರಿಸ್ಥಿತಿಯನ್ನೂ ಅವರು ಹೇಗೆ ಎದುರಿಸುವರೆಂಬುದು ಸ್ಪಷ್ಟವಾಗಿಲ್ಲ. ಈ ಎಲ್ಲ ಕಾರಣಗಳಿಂದ ಯುರೋಪಿನ ಬಗ್ಗೆ ಅಮೇರಿಕದ ಧೋರಣದಲ್ಲಿ ಬಲವಾದ ಬದಲಾವಣೆಯಾದರೂ ಆಗಬಹುದೆಂದು ಯುರೋಪಿನ ರಾಷ್ಟ್ರಗಳು ಸಂಶಯಗ್ರಸ್ತವಾಗಿವೆ.

ವ್ಯಾಲೇಸರ ಹುರಿಯಾಳುತನ

ಅಮೇರಿಕದ ಅಧ್ಯಕ್ಷ ಸ್ಥಳಕ್ಕಾಗಿ ನಡೆವ ಚುನಾವಣೆಗಾಗಿ ಡೆಮಾಕ್ರಾಟಿಕ್ ಪಕ್ಷ ಟ್ರೂಮನ್ನರನ್ನೂ ರಿಪಬ್ಲಿಕನ್ ಪಕ್ಷ ಡ್ಯೂಯಿಯವರನ್ನೂ ಈಗ ಮೂರನೆಯದಾದ ಪ್ರಾಗತಿಕ ಪಕ್ಷ ಹೆನ್ರಿ ವ್ಯಾಲೇಸರನ್ನು ಅಧ್ಯಕ್ಷ ಪದಕ್ಕೆ ಹುರಿಯಾಳನ್ನಾಗಿ ನಿಲ್ಲಿಸಿದ ಸುದ್ದಿ ಬಂದಿದೆಯಷ್ಟೇ.

'' ಅಮೇರಿಕದಲ್ಲಿಯ ಕಮ್ಯುನಿಸ್ಟ ಮತ್ತು ಇತರ ರಾಜಕೀಯ ಪಂಗಡಗಳಿಗೆ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಕೊಡಿಸಲು ಈ ನಮ್ಮ ಪ್ರಾಗತಿಕ ಪಕ್ಷ ಹೆಣಗುವದು'' ಎಂದು ಪ್ರಾಗತಿಕರ ಚುನಾವಣೆಯ ಘೋಷಣೆ ಸಿನೇಟರ್ ಗ್ಲೇನ್ ಟೇಲರರನ್ನು ಉಪಾಧ್ಯಕ್ಷ ಪದಕ್ಕೆ ಹುರಿಯಾಳನ್ನಾಗಿ ನಿಲ್ಲಿಸಲಾಗಿದೆ.



ಹೆನ್ರಿ ವ್ಯಾಲೇಸ

ಈ ಪ್ರಾಗತಿಕ ಪಕ್ಷವು ಹಿಂದಿನ ಅಧ್ಯಕ್ಷರಾದ ರೂಸ್ವೆಲ್ಟರ ಧೋರಣವನ್ನೂ ವೆಂಡೆಲ್ ವಿಲ್ಕಿಯವರ ಆಕಾಂಕ್ಷೆಗಳನ್ನೂ ಈಡೇರಿಸಲು ಪ್ರಯತ್ನಿಸುವುದೆಂದು ಹೇಳಲಾಗಿದೆ.

ಬರ್ಲಿನ್ನಿನ ಜಗ್ಗಾಟ

ರಶಿಯನ್ನರ ವಶದಲ್ಲಿರುವ ಜರ್ಮನಿ ಮತ್ತು ಪಶ್ಚಿಮ ಯುರೋಪುಗಳ ಕೂಡ ನಡೆಯುತ್ತಿದ್ದ ಸಾರಿಗೆಯನ್ನೆಲ್ಲ ಬ್ರಿಟನ್ ಮತ್ತು ಅಮೇರಿಕಗಳು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದು ರಶಿಯನ್ನರ ದಿಗ್ಬಂಧನಕ್ಕೆ ಯೋಗ್ಯ ಉತ್ತರ ಎಂದು ಹೇಳಲಾಗಿದೆ

ಇದೇ ಕಾಲಕ್ಕೆ ಪಶ್ಚಿಮ ಜರ್ಮನಿಗೆ ಲಂಡನ್ನಿನಲ್ಲಿ ಪಶ್ಚಿಮ ಮಹಾ ಪ್ರಭುತ್ವ ಪ್ರಯಸ್ಥ ಮಿಲಿಟರಿ ಗವರ್ನರರು ತಮ್ಮ ಲಂಡನ್ ಯೋಜನೆಯನ್ನು ಅಮಲಿನಲ್ಲಿ ತರಲು ತಮ್ಮ ಮುಖ್ಯ ಮಂತ್ರಿಗಳಿಗೆ ಒಪ್ಪಿಸಿದ್ದಾರೆ. ರಶಿಯನ್- ಜರ್ಮನಿಗೆ ಸರಕುಗಳನ್ನು ಸಾಗಿಸಬಾರದೆಂದೂ ರೇಲ್ವೆಗಳ ಮೇಲೆ ನಿರ್ಬಂಧ ಹಾಕಲಾಗಿದೆ. ಈ ನಿರ್ಬಂಧಗಳು ರಶಿಯನ್ನರ ನಿರ್ಬಂಧಗಳು ಇರುವವರೆಗೂ ಇರುವವೆಂದು ಹೇಳಲಾಗಿದೆ.

ಪಶ್ಚಿಮ ಜರ್ಮನಿಯು ಪಟಿನಾ ಸಭೆಯನ್ನು ಕರೆಯುವ ಸಿದ್ಧತೆಗಳು ಪ್ರಾರಂಭಿಸಿವೆ.

ಲಂಡನ್ನಿನಲ್ಲಿ ಬೆವಿನ್ನರು ತಮ್ಮ ಮಾಸ್ಕೋ ರಾಯಭಾರಿಯೊಡನೆ ಅಮೇರಿಕದ ಜ. ಬಿಡೆಲ್‌ಸ್ಮಿಥ್, ಲೂಯಿಗಗರ್ ಚಾರ್ಲ್ಸ್ ಬೊಹನ್ನರನ್ನು ಕಂಡು ಮಾಸ್ಕೋಕ್ಕೆ ಕಳಿಸತಕ್ಕ ನಿಷೇಧ ಪತ್ರದ ವಿವರವನ್ನು ಚರ್ಚಿಸಿದರು.

ನಗೆಯ ಸೋರೆ

ಸಂತೋಷದ ಸವಾರಿ

ಒಂದೆಡೆ ಸ್ಕೇಟಿಂಗ್ [illegible] ಯೊರ್ಕ್‌ನಲ್ಲಿ ಒಬ್ಬನು [illegible] ಕರೆಯುತ್ತಿದ್ದ. [illegible] ಕೊಡುವುದು [illegible] ತ್ರಿಪುರ [illegible] ಸಾಮಾನುಗಳನ್ನು ಅಲ್ಲಿಗೆ [illegible] ಹೋದ ತಪ್ಪುಗಾಗಿ [illegible] ಬೇಕಾಯಿತು. [illegible] ಕಾತರ್ಗ್ರಸ್ತನಾಗಿತ್ತು. [illegible] ದವು, 'ಅವನ್ನ ಏನು ತಂದೆ?' [illegible] 'ಮೊದಲೇ [illegible] ಮತ್ತು [illegible] ಹೋಗಿತ್ತು ನಾನು ಹೋಗುವುದರೊಳಗೇ. ೧೦ ಶಿಲಿಂಗಿನ ಬೆಲೆಯ ಕಷ್ಟ ಸವಾರಿಯಿಂದಲೇ ನಾನು ತೃಪ್ತಿಹೊಂದಿ ಹಿಂದಿರುಗಬೇಕಾಯಿತು!'

ಜಾಮೀನು

ಗಂಡ ಹೆಂಡತಿ ಒಂದು ಹೊಟೇಲಲ್ಲಿ ಚೆನ್ನಾಗಿ ಭೋಜನ ಮಾಡಿದರು. ಕೊನೆಗೆ ಮುಗಿಸು ಬಂದ ಗಂಡ ಮತ್ತಿನ [illegible] ಹೊಟೇಲು ಒಡೆಯನಿಗೆ ಹೇಳಿದ— 'ನೋಡಿ ನನ್ನ ಹೆಂಡತಿ ಇಲ್ಲೇ ಇರುತ್ತಾಳೆ. ನಾನು ಮನೆಗೆ ಹೋಗಿ ದುಡ್ಡು ತರುತ್ತೇನೆ' ಎಂದು. ಅದಕ್ಕೆ ಅವನು 'ಅಲ್ಲಾ ಸ್ವಾಮಿ, ನಿಮ್ಮ ಹತ್ತಿರ ಒಂದು ವಾಚು, ಇಲ್ಲವೆ ಉಂಗುರ ಗಿಂಗರ ಇಲ್ಲವೆ? ಅದನ್ನಿಟ್ಟು ಆಮೇಲೆ ದುಡ್ಡು ಕೊಟ್ಟು ಒಯ್ಯರೆ ಆಗದೇ?' ಎಂದ. ಆಗ ಸಿಟ್ಟಿಗೆದ್ದ ಆ ಗೃಹಸ್ಥ— 'ಏನು, ನನ್ನ ಹೆಂಡತಿಗೆ ೩ ರೂ. ೧೦ ಆಣೆಗಳಷ್ಟು ಬೆಲೆಯಿಲ್ಲವೇನು?' ಎಂದ. ಆಗ ಆ ಹುಟೇಲ್ನವ ಒಡೆಯ ಮುಗುಳ್ನಗೆಯಿಂದ, 'ಹಾಗೆಂದು ನಾನು ತಿಳಿಯಲಿಲ್ಲ ರಾಯರೇ, ನನಗಾಗಲೇ ಒಬ್ಬಳು ಹೆಂಡತಿ ಇದ್ದಾಳಲ್ಲಾ ಅಂತ ಯೋಚನೆ ಮಾಡಿದೆ ಅಷ್ಟೆ' ಎಂದುಬಿಟ್ಟ!

ದೃಷ್ಟಿಕೋನ

ಇಬ್ಬರೂ ವಾಗ್ವಾದ ನಡೆಸಿದ್ದರು: ಗಂಡಸ ಹೆಚ್ಚು ನ್ಯಾಯಾನ್ಯಾಯ ಎಣಿಸುವವನೋ ಹೆಂಗಸೋ? ಎಂದು. ತನ್ನ ವಾದಕ್ಕೆ ಸಮರ್ಥನೆ ಕೊಡಲು ಗಂಡನು, 'ಇಂದಿನ ಪತ್ರಿಕೆ ನೋಡು, ಹೆಂಗಸರಲ್ಲಿ ನೂರಕ್ಕೆ ೭೫ ಮಂದಿ ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಾರೆ ಎಂದಿದೆ; ಸಾಲದೆ?' ಎಂದ. ಅದಕ್ಕೆ ಹೆಂಡತಿ, 'ಅದೇ ಹೇಳಿದೆ ನಾನು, ಗಂಡಸಿಗಿಂತ ಹೆಂಗಸು ಹೆಚ್ಚು ಮಿತವ್ಯಯದ ಬುದ್ಧಿಯುಳ್ಳವಳು ಎಂದು!'

ಎಣ್ಣೆ ಸುರಿಗೆ

"ಅಂತೂ ನೀನೂ ನಿನ್ನ ಹೆರೆಯುವನೂ ಮಾತಾಡುವುದನ್ನು ಬಿಟ್ಟಿರಿ ಎಂದಾಯಿತು, ಅಲ್ಲವೆ?"

"ಇಲ್ಲ. ಅವನು ನನ್ನ ಗಾಡಿಯ ಕೀಲಿಗೆಂದು ಒಂದಿಷ್ಟು ಎಣ್ಣೆ ಕಳಿಸಿದ, ಇಂದು ಬೆಳಿಗ್ಗೆ ನಾನು ಗಾಡಿ ತೊಳೆಯುತ್ತಿದ್ದಾಗ."

"ನೀನೇನು ಮಾಡಿದೆ ಆಗ?"

"ಅದನ್ನು ಅಲ್ಲಿಂದಲ್ಲೇ ತಿರುಗಿ ಕಳಿಸಿಬಿಟ್ಟೆ. ಬೇಕಾದರೆ ರಾತ್ರಿ ೧೧ ಆಯಿತೆಂದರೆ ದಾರಿ ತೆಗೆಯಲಿಕ್ಕೆ ಹತ್ತುವ ನಿನ್ನ ಹೆಂಡತಿಯ ನಾಲಿಗೆಗೆ ಹೊಯ್ ಎಂದು ಹೇಳಿ ಕಳಿಸಿದೆ."

ಚೀನದಲ್ಲಿ ಅತಿ ಪ್ರಸರಣ

ಚೀನೀ ಶಾಸನ ಸಭೆಯು ದೇಶದಲ್ಲಿ [illegible] ಹೆಚ್ಚಿರುವ ಅತಿ ಪ್ರಸರಣವನ್ನು ತಡೆಯುವ ತಕ್ಕ ಕಾರ್ಯಕ್ರಮವನ್ನು [illegible] ಮುಖ್ಯ ಮಂತ್ರಿ [illegible] ಮಂತ್ರಿ ಮಂಡಲವನ್ನು [illegible] ಗೊತ್ತುಪಡಿಸಿದ್ದಾಗ [illegible].

ಮುಂಗಡ ಪತ್ರಿಕೆಯು [illegible] ಸಭೆಯಲ್ಲಿ ಮೇಲಿನ ಗೊತ್ತುವಳಿ ರೂಪಿಸಲ್ಪಟ್ಟಿತು. [illegible] ಅದನ್ನು ಸಭೆಯ ಮುಂದೆ [illegible]. ಅವನು [illegible] ಶಾಸನ ಸಭೆ ಮತ್ತೆ ಸೇರುವುದರೊಳಗೆ ಮುಖ್ಯ ಮಂತ್ರಿಯು ಅತಿ ಪ್ರಸರಣವನ್ನು ನಿಲ್ಲಿಸಲು ಪರಿಣಾಮಕಾರಿ [illegible] ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಿ ಹೇಳಿದರು.

ಸನ್ಯದ ಮುಂಗಡ ಪತ್ರಿಕೆಯಲ್ಲಿ [illegible] ಚೀನೀ ರಾಜ್ಯಗಳಲ್ಲಿ [illegible] ಯನ್ನು ತೋರಿಸಲಾಗಿದೆ: [illegible] ತಕ್ಷಣವಾಯಿತು ಎಲ್ಲೋ [illegible] ಕಾರ್ಯಾಲಯಗಳನ್ನು ಮುಚ್ಚಿ [illegible] ಗಳೆಂದು ತಿಳಿದು ಬರ್ತದಾಯಿತು.

ಮಹಿಳಾ ಲೋಕ

★

ಸಂಗ್ರಹಕಾರ್ತಿ : "ಹಿರಿಯಕ್ಕ"

ಸ್ತ್ರೀಯರಿಗೆ ದೊರೆತ ಹೊಸ ಅಧಿಕಾರಗಳು

ಲೇಖಿಕೆ— ಶ್ರೀ. ಉಮಾಬಾಯಿ ಕುಂದಾಪುರ

ಅಮೇರಿಕೆ, ಇಂಗ್ಲಂಡದಂಥ ವಿಶೇಷ ಸುಧಾರಿಸಿದ ದೇಶಗಳಲ್ಲಿಯೂ ಪುರುಷರೊಡನೆ ಸ್ತ್ರೀಯರಿಗೆ ಸಮಾನ ಹಕ್ಕು ಸಿಗಬೇಕಾದರೆ, ಅಲ್ಲಿಯ ಮಹಿಳೆಯರು ಪ್ರತ್ಯಕ್ಷ ಹೋರಾಟ ನಡೆಸಬೇಕಾಯಿತು. ಮತಾಧಿಕಾರ ದೊರಕಿಸಲು ಸಹ ಅನೇಕ ಆಂಗ್ಲ ಭಗಿನಿಯರಿಗೆ ಸೆರೆಮನೆ ಕಾಣುವ ಪ್ರಸಂಗ ಬಂದಿತು. ಆ ದೃಷ್ಟಿಯಿಂದ ಹಿಂದೀ ಮಹಿಳೆಯರಿಗೆ ಕಳೆದ ೨೫—೩೦ ವರ್ಷಗಳಲ್ಲಿ ಸಿಕ್ಕಿರುವ ಅಧಿಕಾರವು ಅವರ ಸುದೈವವನ್ನೆ ಸೂಚಿಸುತ್ತಿದೆ. ಇದಕ್ಕೆ ಬಾಪೂಜಿಯವರು ಮಹಿಳೋದ್ಧಾರವನ್ನು ತಮ್ಮ ಅನೇಕ ಕಾರ್ಯಕ್ರಮಗಳಲ್ಲಿ ಒಂದು ಅಂಗವನ್ನಾಗಿ ಇಟ್ಟುಕೊಂಡದ್ದು ಕಾರಣವಾಗಿದೆಯೆಂಬುದು ಮರೆಯತಕ್ಕದ್ದಲ್ಲ. ಬಾಪೂಜಿಯವರಿಗೆ ನಾವು ಕೃತಜ್ಞತೆ ಸಲ್ಲಿಸಿದಷ್ಟೂ ಕಡಿಮೆಯೇ ಸರಿ.

ಶಿಕ್ಷಣ ಮುಂತಾದ ವಿಷಯಗಳಲ್ಲಿ ಸ್ತ್ರೀಯರು ಪುರುಷರಷ್ಟೆ ಅರ್ಹತೆಯುಳ್ಳವರಿದ್ದರೂ ಅವರಿಗೆ ಸ್ತ್ರೀಯರೆಂಬ ಒಂದೇ ಕಾರಣದಿಂದ ಅನೇಕ ಕ್ಷೇತ್ರಗಳಲ್ಲಿ ಮೊನ್ನೆ ಮೊನ್ನೆಯ ವರೆಗೆ ಪ್ರವೇಶವಿರಲಿಲ್ಲ. ಕಾಲು ಶತಮಾನದ ಪೂರ್ವದಲ್ಲಿ ರಶಿಯ, ತುರ್ಕಸ್ತಾನ ಮುಂತಾದ ದೇಶಗಳ ಮಹಿಳೆಯರು ವಿಮಾನ, ಹಡಗು, ಪೋಲೀಸ ಪಡೆ ಮುಂತಾದವುಗಳಲ್ಲಿ ಸಹ ಸೇರಿಸಿಕೊಳ್ಳಲ್ಪಟ್ಟರೆಂದು ನಮಗೆ ಗೊತ್ತಾದಾಗ ನಾವು ಅಚ್ಚರಿಪಟ್ಟೆವು. ಈಗ ಹಿಂದೀ ಮಹಿಳೆಯರಿಗೆ ಅಂಥ ಸಂಧಿ ಬಂದಿರುವದು. ಆದ್ದರಿಂದ ಬಹುತರ ಎಲ್ಲ ವಿಷಯಗಳಲ್ಲಿ ಅವರಿಗೆ ಪುರುಷರ ಸರಿಸಮಾನ ಕಾರ್ಯಮಾಡಲು ಆಸ್ಪದ ದೊರೆತಂತಾಯಿತು.

ಆದರೆ ಆಸ್ಪದ ಸಿಕ್ಕ ಮಾತ್ರಕ್ಕೆ ನಮ್ಮ ಹಿಂದೀ ಭಗಿನಿಯರು ದೊಡ್ಡ ಪ್ರಮಾಣದಲ್ಲಿ ಇದರ ಲಾಭಪಡೆಯಲು ಮುಂದೆಬರುವರೆಂದು ತಿಳಿಯುವದು ಸಾಧ್ಯವಿಲ್ಲ. ಬ್ರಿಟನ್ನದ ಸ್ತ್ರೀ ಜನಾಂಗಕ್ಕೆ ಮತಾಧಿಕಾರ ಲಭಿಸಿ ಸುಮಾರು ಒಂದು ಕಾಲು ಶತಮಾನವಾಗುತ್ತ ಬಂದಿರಬಹುದು. ಆದರೆ ಇಂದಿಗೂ ೬೦೦ಕ್ಕೆ ಮೇಲ್ಪಟ್ಟ ಪಾರ್ಲಮೆಂಟ ಸಭಾಸದರಲ್ಲಿ ಹತ್ತೆಂಟಕ್ಕಿಂತ ಹೆಚ್ಚು ಸ್ತ್ರೀಯರಿಲ್ಲ. ಈ ವಿಷಯಗಳಲ್ಲಿ ಮಹಿಳೆಯರು ಮುಂದುವರಿಯಲು ದೀರ್ಘಕಾಲಬೇಕು.

ಇಂದಿನ ಮಹಿಳೆಯ ನಿಜವಾದ ಸ್ಥಾನ ಮತ್ತು ಆದ್ಯ ಕರ್ತವ್ಯ ತಮ್ಮ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡುವದೇ ಇರುತ್ತದೆ. ಅವರಲ್ಲಿ ರಾಷ್ಟ್ರೀಯ ಶೀಲ (National character) ಹುಟ್ಟಿಸಿ ಅದನ್ನು ಬೆಳೆಸುವದೇ ಅವರಿಂದಾಗಬೇಕಾದ ಪ್ರಮುಖ ಕಾರ್ಯ. ಅಧಿಕಾರಪದದಲ್ಲಿರದೆ ಸೇವಾಭಾವನೆಯಿಂದ ಮತ್ತು ಸಹಿಷ್ಣುತೆಯಿಂದ ಕಾರ್ಯ ಮಾಡುತ್ತಿರುವದೇ ಹಿಂದೀ ಸ್ತ್ರೀಯರ ನೈಸರ್ಗಿಕ ಗುಣ. ಅವರು ಸಾಮಾನ್ಯವಾಗಿ ಸಾದಾ ಮತ್ತು ಭೋಳೆ ಸ್ವಭಾವದವರು. ನೌಕರಿಗಳಲ್ಲಾಗಲೀ, ಅಧಿಕಾರಿ ವರ್ಗದಲ್ಲಿಯಾಗಲೀ ಸೇರಿ ಸಾಹಸದಿಂದ ಅದನ್ನು ನಿರ್ವಹಿಸಲು ಬಲ್ಲವರ ಸಂಖ್ಯೆ ಬಹಳ ಕಡಿಮೆ. ಈಗ ಸೇರಬಹುದಾದವರು ಸಮಾನಾಧಿಕಾರದ ನಿದರ್ಶನ ಮಾತ್ರ ಆಗಬಲ್ಲರೆ ಹೊರತು ಅದರಿಂದ ಸ್ತ್ರೀ ಜನಾಂಗಕ್ಕೆ ಬಹು ದೊಡ್ಡ ಲಾಭವಾಯಿತೆಂದಲ್ಲ. ಅವರೂ ಅರ್ಹತೆಯುಳ್ಳವರು ಈ ಹೊಣೆಯ ಸ್ಥಾನಗಳನ್ನು ವಹಿಸಿ ಮುಂದಿನವರಿಗೂ ಮಾರ್ಗದರ್ಶಕರಾಗಬಹುದು.

ಕರಾಚಿಯ ಕಾಂಗ್ರೆಸದಲ್ಲಿ ಸಮಾನಾಧಿಕಾರದ ಬಗ್ಗೆ ಸ್ವೀಕೃತವಾದ ಪ್ರಸ್ತಾವವನ್ನು ಕೃತಿಯಲ್ಲಿ ಇಳಿಸುವ ತಮ್ಮ ಕರ್ತವ್ಯವನ್ನು ಸ್ವತಂತ್ರ ಹಿಂದುಸ್ತಾನದ ನೆಹರೂ ಸರಕಾರವು ಪಾಲಿಸಿದೆ. ಇದು ಪಂ. ಜವಾಹರಲಾಲರ ವಿಶಾಲ ದೃಷ್ಟಿ ಮತ್ತು ಉದಾರ ಮನೋವೃತ್ತಿಯನ್ನು ತೋರಿಸುತ್ತದೆ. ಅದಕ್ಕಾಗಿ ಅವರಿಗೆ ಮಹಿಳೆಯರು ಧನ್ಯವಾದಗಳನ್ನು ಅರ್ಪಿಸಬೇಕು.

ಸ್ತ್ರೀಯರಿಗೆ ಸೂಚನೆಗಳು

✲

೧) ಹಣ್ಣು ಮತ್ತು ಪಲ್ಲೆಕಾಯಿಯನ್ನು ಪೇಟೆಯಿಂದ ತಂದ ಕೂಡಲೆ ಉಪಯೋಗಿಸಬೇಕು. ಇಲ್ಲವಾದರೆ ಅವುಗಳನ್ನು ಮುಚ್ಚಿ ತಂಪಾದ ಸ್ಥಳದಲ್ಲಿ ಇಡಬೇಕು.

೨) ಪೇಟೆಯಿಂದ ತಂದ ಪಲ್ಲೆ ಕಾಯಿಯನ್ನು ಎರಡು ಮೂರು ಸಲ ಸ್ವಚ್ಛವಾಗಿ ತೊಳೆಯಬೇಕು.

೩) ಸಾಧ್ಯವಿದ್ದಷ್ಟು ಕಡಿಮೆ ನೀರಿನಲ್ಲಿ ಪಲ್ಲೆಕಾಯಿಯನ್ನು ಮೆತ್ತಗಾಗುವ ವರೆಗೆ ಬೇಯಿಸಬೇಕು. ಹೆಚ್ಚು ಬೇಯಿಸಬಾರದು.

೪) ಕಾಯಿಪಲ್ಲೆಯನ್ನು ಬೇಯಿಸುವಾಗ ಉಗಿಯು ಹೊರ ಹೋಗದಂತೆ ಮುಚ್ಚಳವನ್ನು ಬಿಗಿಯಾಗಿ ಮುಚ್ಚಬೇಕು.

೫) ಪಲ್ಲೆ ಬೇಯಿಸಿದ ನೀರನ್ನು ಸಾರಿಗೆ ಇಲ್ಲವೆ ರಸಬಿಟ್ಟು ಪಲ್ಲೆ ಮಾಡುವದಾದರೆ ಅದರಲ್ಲಿಯೆ ಹಾಕಬೇಕು.

೬) ಗಡ್ಡೆಗಳನ್ನು ಸಿಪ್ಪೆ ಸಹಿತವಾಗಿಯೆ ಬೇಯಿಸಬೇಕು. ಇದರಿಂದ ಜೀವಸತ್ವಗಳು ವ್ಯರ್ಥ ಹೋಗುವದಿಲ್ಲ.

೭) ಪಲ್ಲೆಕಾಯಿ ಬೇಯಿಸುವಾಗ ಎಂದಿಗೂ ಸೋಡಾ ಉಪಯೋಗಿಸಬಾರದು. ಇದರ ಉಪಯೋಗದಿಂದ ಜೀವನಸತ್ವಗಳು ನಾಶಹೊಂದುತ್ತವೆ.

೮) ಪಚಡಿ ಮುಂತಾದ ಹಸಿ ಪಲ್ಲೆಯನ್ನು ತಿನ್ನುವ ಸ್ವಲ್ಪ ಮೊದಲು ತಯಾರಿಸಬೇಕು.

ಹೈದರಾಬಾದದಲ್ಲಿ ದೀನದಾರರ ಅತ್ಯಾಚಾರ

ಹೈದರಾಬಾದ ಸಂಸ್ಥಾನದ ಉಧ್ವಸ್ತವಾಗಿರುವ ಅತ್ರಫಬಾಲ್ದಾ ಜಿಲ್ಹೆಗಳಲ್ಲಿ ಸಂಚರಿಸಿ ಬಂದ ಹೈ. ಕಾ. ಧುರೀಣರಾದ ಶ್ರೀ. ಬಿ. ರಾಮಕೃಷ್ಣರಾವ, ಶ್ರೀ. ಕಾಶೀನಾಥರಾವ ವೈದ್ಯ ಶ್ರೀ ಹರಿಶ್ಚಂದ್ರ ಹೆಡ್ಡಾ, ಶ್ರೀ ಗೋಪಾಲರೆಡ್ಡಿ, ಶ್ರೀಮತಿ ಜ್ಞಾನಕುಮಾರಿ ಹೆಡ್ಡಾ, ಇವರು ದೀನದಾರರ ಬಗ್ಗೆ ಒಂದು ಪ್ರಕಟನೆ ಹೊರಡಿಸಿ ಹೀಗೆ ಹೇಳಿದ್ದಾರೆ:—

ದೀನದಾರರೆಂಬ ಸುಲಿಗೆಗಾರರು ಹೈದರಾಬಾದ ಸಂಸ್ಥಾನದ ಒಳಭಾಗದಲ್ಲಿ ಅನನ್ವಿತ ಅತ್ಯಾಚಾರ ನಡೆಸಿದ್ದಾರೆ. ಇವರು ದುಷ್ಕೃತ್ಯ ಕಾರ್ಯಗಳಲ್ಲಿ ರಜಾಕಾರರನ್ನೂ ಮೀರಿಸಿದ್ದಾರೆ ದೀನದಾರರು ಹಿಂದೂ ಧರ್ಮದ ಜಾತಿಯೊಂದರ ಸಂಸ್ಥಾಪಕನ ಅವತಾರವೆಂದು ಹೇಳಿಕೊಳ್ಳುತ್ತಿರುವ ಸಿದ್ದೀಕನೆಂಬವನ ಶಿಷ್ಯರಾಗಿದ್ದಾರೆ. ಇವರು ಧರ್ಮದ ನಟನೆ ಹೂಡಿ ಹಿಂದುಗಳನ್ನು ಅದರಲ್ಲಿಯೂ ಲಿಂಗಾಯತರನ್ನು ಮೋಸಗೊಳಿಸಿ ಬಲತ್ಕಾರದಿಂದ ಮತಾಂತರಿಸುತ್ತಿದ್ದಾರೆ. ಈ ಮತಾಂತರಕ್ಕೆ ಹರಿಜನರೂ ವಿಶೇಷವಾಗಿ ಗುರಿಯಾಗಿದ್ದಾರೆ. ಬೀದರ ನಾಂದೇಡ ಜಿಲ್ಹೆಗಳಲ್ಲಿ ಧರ್ಮಾಂತರದ ಹಾವಳಿ ಹೆಚ್ಚು. ಇವರ ಅತ್ಯಾಚಾರಕ್ಕೆ ಉದಾಹರಣೆಯೆಂದು ಕೆಳಗಿನ ಒಂದು ಘಟನೆಯನ್ನು ನೋಡಬಹುದು.

ಜುಲೈ ೯ ನೇ ತಾ. ಸೋಮವಾರಿಗೆ ೧೭೫ ಸಶಸ್ತ್ರ ದೀನದಾರರು ಅತ್ರಫಬಾಲ್ದಾ ಜಿಲ್ಹೆಯ ಶಾಕರ್ ತಾಲೂಕಿನ ವೇಲಮಾಕನ್ನು ಮುತ್ತಿ ಈಗ ಗುಲಬುರ್ಗೆಯಲ್ಲಿ ಸ್ಥಾನಬದ್ಧತೆಯಲ್ಲಿರುವ ಆ ಹಳ್ಳಿಯ ಕಾಂಗ್ರೆಸಿಗನಾದ ಮಡ್ಡಿನಾರಾಯಣ ರೆಡ್ಡಿಯ ಬಂಗ್ಲೆಯನ್ನು ಆಕ್ರಮಿಸಿ ತಳ ಊರಿದರು. ಊರಲ್ಲಿಯ ೫೦೦ ಸ್ತ್ರೀಪುರುಷರನ್ನು ಹಿಡಿದುತಂದು ಪುರುಷರ ಕೂದಲು ಕತ್ತರಿಸಿ ಅವರೆಲ್ಲರಿಗೆ ಮುಸ್ಲಿಂ ಹೆಸರುಗಳನ್ನು ಕೊಟ್ಟರು. ಮಧ್ಯಾಹ್ನ ೪ ಕ್ಕೆ ನಮಾಜಿಗೆ ಬರಬೇಕೆಂದು ಹೇಳಿ ಬಿಟ್ಟಕೂಡಲೇ ಆ ಹಳ್ಳಿಗರು ಅಡವಿಬಿದ್ದು ಓಡಿಹೋದರು. ಆ ಮೇಲೆ ದೀನದಾರರು ಹಳ್ಳಿಯನ್ನು ಲೂಟಿ ಮಾಡಿದರು. ಇವರನ್ನು ಹಿಡಿಯ ಬಂದ ಪೋಲೀಸ ಅಧಿಕಾರಿಗೆ ನಮ್ಮ ಮುಖ್ಯಸ್ಥನಾದ ಸಿದ್ದಿಕಿಯ ಮಾತನ್ನಲ್ಲದೆ ಇನ್ನಾರ ಮಾತನ್ನೂ ಲೆಕ್ಕಿಸುವದಿಲ್ಲೆಂದು ಅಗ್ರಹಹಿಡಿದರು.

ರೈತರ ಲೋಕ

ಎಣ್ಣೆಯ ಉದ್ಯಮದಲ್ಲಿ ಸಹಕಾರಿ ಪ್ರಯತ್ನ

ಶ್ರೀ. ವಿ. ಜಿ. ಭಟ್ಟ, ಎಂ. ಎ., ಧಾರವಾಡ

ಎಣ್ಣೆ ತೆಗೆಯುವದು ಮುಂಬೈ ಪ್ರಾಂತದ ಒಂದು ಮುಖ್ಯವಾದ ಉದ್ಯಮ. ಇದನ್ನು ಗಿರಣಿಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೂ ಹಳ್ಳಿಗಳಲ್ಲಿ ಗಾಣಗಳಿಂದ ಸಣ್ಣ ಪ್ರಮಾಣದಲ್ಲಿಯೂ ನಡೆಸುತ್ತಾರೆ. ಗಿರಣಿಗಳಲ್ಲಿಯೂ 'ಉರುಳು ಗಾಣ' (Rotary ghanies) ಗಳಿಂದ ಸಣ್ಣ ಪ್ರಮಾಣದಲ್ಲಿ ನಡೆಸುವದುಂಟು. ಹೈಡ್ರೋಲಿಕ್ ಪ್ರೆಸ್, ಎಕ್ಸ್‌ಪೆಲ್ಲರ್, ರೋಟರಿ ಗಾಣ, ಹಳ್ಳಿಯ ಗಾಣ— ಇವೆಲ್ಲ ಎಣ್ಣೆ ತೆಗೆಯುವ ಬೇರೆ ಬೇರೆ ಯಂತ್ರಗಳು.

ಹಳ್ಳಿಯ ಗಾಣಗಳಿಂದ ತೆಗೆದ ಎಣ್ಣೆಯು ಅಲ್ಲೇ ಖರ್ಚಾಗುತ್ತದೆ. ಅಲ್ಲಿ ಎಣ್ಣೆಯನ್ನು ಕರಿಯಲಿಕ್ಕೆ, ತಿನ್ನಲಿಕ್ಕೆ ಮಾತ್ರ ಉಪಯೋಗಿಸಿದರೆ ಪಟ್ಟಣಗಳಲ್ಲಿ 'ವನಸ್ಪತಿ' (Vegetable-ghee) ಸಾಬೂನುಗಳ ತಯಾರಿಕೆಗಾಗಿ ಹೆಚ್ಚು ಉಪಯುಕ್ತವಾಗುತ್ತದೆ.

ಹಿಂಡಿಯನ್ನು ದನಕರುಗಳಿಗೆ ಹಾಕುತ್ತಾರೆ; ಗೊಬ್ಬರಕ್ಕೆ— ಹೆಚ್ಚಾಗಿ ಕಬ್ಬಿನ ಬೆಳೆಗೆ— ಉಪಯೋಗಿಸುತ್ತಾರೆ.

ಎಣ್ಣೆಯ ಕಾಳಿನ ಬೆಳೆಯ ೩೦% ದಷ್ಟು ಭಾರ ಹೊಟ್ಟು ಇರುತಿದ್ದು ಅದನ್ನು ಹೆಚ್ಚಾಗಿ ಉರುವಲಕ್ಕೆ ಉಪಯೋಗಿಸುತ್ತಾರೆ. ಮೇವು ಗೊಬ್ಬರಗಳಿಗಾಗಿ ಉಪಯೋಗವಾಗುವ ಹಿಂಡಿಯು ಎಣ್ಣೆಯ ಕಾಳಿನಲ್ಲಿ ೫೮% ದಷ್ಟು ಇರುತ್ತದೆ. ಒಟ್ಟಿನಲ್ಲಿ ಹೊರಡುವ ಎಣ್ಣೆಯು ಬೀಜದ ೪೦% ದಷ್ಟು. ನಿರ್ಯಾತಮಾಡುವಾಗ ಕಾಳನ್ನು (ಹೊಟ್ಟಿನೊಡನೆ) ಕಳಿಸುವುದಕ್ಕಿಂತ ಎಣ್ಣೆಯನ್ನೇ ಕಳುಹಿಸುವದು ಒಳಿತು. ಇದರಿಂದ ಭಾರವು ೧ ೩ ದಷ್ಟು ಕಡಿಮೆಯಾಗುತ್ತದೆ. ಇವನ್ನೆಲ್ಲ ತೂಗಿ ನೋಡಿದರೆ ಕಾಳು ಬೆಳೆಯುವಲ್ಲಿಯೇ ಎಣ್ಣೆ ತೆಗೆದು ಅಲ್ಲಿ ಬೇಕಾದಷ್ಟು ಎಣ್ಣೆ ಉಪಯೋಗಿಸಿ ಹೆಚ್ಚುಳಿದುದನ್ನು ಮಾತ್ರ ಹೊರಗೆ ಕಳಿಸುವದು ಲೇಸು.

ಗಾಣಿಗರ ಅವನತಿ

ನಮ್ಮ ಹಳ್ಳಿಗಳಲ್ಲಿ ಮೊದಲಿನಿಂದಲೂ ಗಾಣಿಗ ಮನೆತನಗಳು ನಡೆದುಕೊಂಡು ಬಂದಿವೆ. ಎಣ್ಣೆ ತೆಗೆಯುವದೇ ಅವರ ಧಂದೆಯಾಗಿತ್ತು. ೧೯೪೬ ರಲ್ಲಿ ಈ ಪ್ರಾಂತದಲ್ಲಿ ೮೦,೦೦೦ ಹಳ್ಳಿಯ ಗಾಣಗಳಿದ್ದು ಅವು ಎಣ್ಣೆಯ ಬೇಡಿಕೆಯನ್ನು ಪೂರೈಸುತ್ತಿದ್ದವು. ಗಿರಣಿಗಳು ಬಂದಂದಿನಿಂದ ಗಾಣಗಳು ಹಿಂದೆ ಬೀಳಹತ್ತಿದವು. ಹೀಗಾಗಿ ಗಾಣಿಗರು ಬೇರೆ ಬೇರೆ ದಂಧೆ ಹುಡುಕಬೇಕಾಯಿತು. ಕಳೆದ ಮಹಾಯುದ್ಧದ ಕಾಲದಲ್ಲಿ ಮಾತ್ರ ಹಳ್ಳಿಯ ಗಾಣಿಗರಿಗೆ ಮತ್ತೆ ತಲೆಯೆತ್ತಲು ಅನುವು ದೊರೆಯಿತು. ಈ ಸಂಬಂಧದಲ್ಲಿಯೇ ಅವರ ಅಗತ್ಯ ಮಹತ್ವಗಳನ್ನರಿತು ಈ ಉದ್ಯಮವನ್ನು ಬದುಕಿಸಬೇಕೆಂಬ ಭಾವನೆ ಮೂಡಿತು: ನಮ್ಮ ಸರಕಾರವು ಬಂದಂದಿನಿಂದ ಗ್ರಾಮೋದ್ಯೋಗಗಳಲ್ಲಿ ಒಂದಾದ ಇದಕ್ಕೆ ಜೀವಕಳೆ ಬರಹತ್ತಿದೆ.

ಈ ಉದ್ಯಮದ ಏಳ್ಗೆಗಾಗಿ ಹಲವರು ಹಲವು ಬಗೆಯಾಗಿ ವಿಚಾರಿಸಿದ್ದಾರೆ. ಹೆಚ್ಚಾಗಿ ಅವುಗಳೆಲ್ಲ ಅಂದಾಜು ಪತ್ರಿಕೆಯು ಭಾರೀ ಹಣವನ್ನು ತೋರಿಸುವರಿಂದ ಗಾಣಿಗರಿಗೆ ಆ ಯೋಜನೆಗಳೆಲ್ಲ ನಿಲುಕದ ಗಂಟಾಗಿವೆ. ಗ್ರಾಮೋದ್ಯೋಗ ಮತ್ತು ಸಹಕಾರಗಳ ತತ್ವಗಳಿಂದಲೇ ಇದರ ಬೆಳವಣಿಗೆ ಸಾಧ್ಯ. ಈ ಕೆಳಗಿನ ಎರಡರಲ್ಲಿ ಒಂದಲ್ಲ ಒಂದು ರೀತಿಯಿಂದ ಇದನ್ನು ಬೆಳೆಯಿಸಬಹುದು.

ಮೊದಲನೆಯದಾಗಿ ಹತ್ತು ಹದಿನೈದು ಗಾಣಿಗರು ಕೂಡಿ ತಮ್ಮಲ್ಲಿರುವ ಸೊತ್ತನ್ನು ಒಂದೆಡೆ ಸೇರಿಸಿ ಸುಗ್ಗಿಯಾದೊಡನೆಯೇ ಎಣ್ಣೆಯ ಕಾಳು ಕೊಂಡುಕೊಂಡು ಎಣ್ಣೆ ತೆಗೆದು ಲಾಭದಿಂದ ಅದೇ ಹಳ್ಳಿಯಲ್ಲಿ ಮಾರಬಹುದು. ಅಥವಾ ಎಣ್ಣೆ ಬೇಕಾದ ಗಿರಾಕಿಗಳೆಲ್ಲ ಸೇರಿ ಸಹಕಾರಿ ಸಂಘ ಕಟ್ಟಿಕೊಂಡು ತಾವು ಬೆಳೆದ ಕಾಳಿನಿಂದ ಎಣ್ಣೆ ತೆಗೆದುಕೊಡಲು ಗಾಣಿಗರನ್ನು ನೇಮಿಸಿಕೊಳ್ಳಬಹುದು. ಪ್ರತಿಯೊಬ್ಬನೂ ತನಗೆ ಬೇಕಾಗುವಷ್ಟು ಎಣ್ಣೆಗ್ಗಾಗಿ ಸಾಲುವಷ್ಟು ಕಾಳನ್ನು ಇಟ್ಟುಕೊಂಡು ಮಿಕ್ಕವನ್ನು ಮಾರಬಹುದು. ಕಾಳು ಬೆಳೆಯದವರು ಈ ಕಾಳನ್ನು ಕೊಂಡು ಸಂಘಕ್ಕೆ ಸೇರಿ ಅವರಂತೆ ಎಣ್ಣೆ ತೆಗೆಯಿಸಿಕೊಳ್ಳಬಹುದು. ಈ ಸದಸ್ಯ ಗಿರಾಕಿಗಳೆಲ್ಲ ತಮ್ಮ ಕಾಳನ್ನು ಸಂಘದ ಕಾರ್ಯದರ್ಶಿಗೆ ಒಪ್ಪಿಸಿ ಬೇಕುಬೇಕಾದಂತೆ ತಾಜಾ ಎಣ್ಣೆ ಪಡೆಯಬಹುದು. ಗಾಣಿಗರಿಗೆ ಸಂಬಳ ಕೊಡಬೇಕು. ಗಾಣ ಗುಡಾಣಗಳೆಲ್ಲ ಸಂಘದ ಸೊತ್ತಾಗಿರಬೇಕು.

ಬ್ಯಾಹಟ್ಟಿಯ ಪ್ರಯೋಗ

ಇದೇ ದೃಷ್ಟಿಯಿಂದ ಮುಂಬೈ ಗ್ರಾಮೋದ್ಯೋಗ ಸಮಿತಿ, ಕರ್ನಾಟಕ ಶಾಖೆ, ಧಾರವಾಡದವರು ಬ್ಯಾಹಟ್ಟಿಯೆಂಬ ಹಳ್ಳಿಯಲ್ಲಿ ಈ ಉದ್ಯಮ ಕೈಕೊಂಡು ಯಶಸ್ವಿಯಾಗಿ ನಡೆಯಿಸುತ್ತಿದ್ದಾರೆ. ಸಮಿತಿಯವರು ಎರಡು (ವರ್ಧಾ) ಗಾಣ (ರೂ. ೭೪೦) ಮತ್ತು ಒಂದು ಕುಸುಬಿ ಒಡೆಯುವ ಯಂತ್ರ (೫೦೦ ರೂ.) ಗಳಿಗಾಗಿ ಹಣ ಕೊಟ್ಟರು. ಸಂಘದವರು ಎರಡು ಎತ್ತು (೩೦೦ ರೂ.) ಮತ್ತಿತರ ಸಾಮಾನು (೧೦೦ ರೂ.) ಗಳನ್ನು ಕೊಂಡುಕೊಂಡರು. ಸಂಘಕ್ಕಾಗಿ ಹಳ್ಳಿಯವರೊಬ್ಬರು ಒಂದು ಛಾವಣಿ ಹಾಕಿಕೊಟ್ಟರು. ಅದಕ್ಕೆ ತಿಂಗಳಿಗೆ ೫ ರೂ. ಬಾಡಿಗೆ ಕೊಡುವದೆಂದು ಗೊತ್ತಾಯಿತು. ೧೦೦ ಹಳ್ಳಿಗರಿಂದ ೨೦೦ ಚೀಲ ಕುಸುಬಿ ಕೂಡಿತು. ಇವರ ಯೋಜನೆಯು ಏನಾಗುವದೋ ಎಂಬ ಭೀತಿಯಿಂದ ಎಲ್ಲ ಹಳ್ಳಿಗರು ಸೇರಲಿಲ್ಲ. ಪರಿಣಾಮವನ್ನು ನಿರೀಕ್ಷಿಸುತ್ತಿದ್ದರು. ಇಬ್ಬರು ಗಂಡಸರನ್ನೂ ಒಬ್ಬ ಹೆಂಗಸನ್ನೂ ಕೆಲಸಕ್ಕೆ ನೇಮಿಸಿಕೊಂಡಾಯಿತು. ಗಂಡಸಿಗೆ ೧—೪—೦ ಹೆಂಗಸಿಗೆ ೦—೧೨—೦ ದಿನಗೂಲಿ.

ತಮಗೆ ಎಣ್ಣೆ ತೆಗೆದುಕೊಟ್ಟುದಕ್ಕಾಗಿ ಸಂಘದ ಸದಸ್ಯರು ಕೂಲಿಯನ್ನೇನೂ ಕೊಡಬೇಕಾಗಿಲ್ಲ. ಅದರ ಬದಲಾಗಿ ಹಿಂಡಿ ಹೊಟ್ಟುಗಳನ್ನು ಸಂಘಕ್ಕೇ ಬಿಟ್ಟು ಬಿಡುತ್ತಾರೆ.

ಒಂದು ಚೀಲ ಕುಸುಬಿಗೆ ೪೦ ಪೌ. ಎಣ್ಣೆ, ೫೦ ಪೌ. ಹಿಂಡಿ ಮತ್ತು ೩೫ ಪೌ. ಹೊಟ್ಟು ಹುಟ್ಟುತ್ತದೆ. ೧೦ ಪೌಂಡಿನಷ್ಟು ಹೊಟ್ಟು ಎಣ್ಣೆಯನ್ನು ಕಾಸಲಿಕ್ಕೆ (ನೀರಿನ ಅಂಶ ಆರಿಸಲು) ಹೋಗುತ್ತದೆ.

ಒಬ್ಬ ಒಂದು ಗಾಣ ತಿರುಗಿಸುತ್ತ ದಿನಕ್ಕೆ ೭ ತಾಸು ದುಡಿದರೆ ೧॥ ಚೀಲ ಕುಸುಬಿ ಆಡಬರುತ್ತದೆ. ಇಷ್ಟು (೧॥ ಚೀಲ) ಕುಸುಬಿ ಒಡೆಯಲು ಒಂದು ಯಂತ್ರವು ೧॥ ತಾಸು ತೆಗೆದುಕೊಳ್ಳುತ್ತದೆ. ಎಣ್ಣೆ ತೆಗೆಯುವ ಮುಂಚೆ ಕುಸುಬಿ ಒಡೆದುಕೊಂಡು ಒಬ್ಬನೇ ಒಂದೇ ಎತ್ತಿನ ಸಹಾಯದಿಂದ ಎರಡೂ ಕೆಲಸ ಮಾಡಬರುತ್ತದೆ. ಅಂತೂ ಈ ಎರಡೂ ಕೆಲಸಗಳಿಗಾಗಿ ಒಬ್ಬನು ಒಂದು ಎತ್ತಿನೊಡನೆ ೮॥ ತಾಸು ದುಡಿಯಬೇಕು. ಗಾಣವನ್ನು ಏಳು ತಾಸೂ ಒಡೆಯುವ ಯಂತ್ರವನ್ನು ೩ ತಾಸೂ ದುಡಿಸಿದರೆ ದಿನವೊಂದಕ್ಕೆ (ಸದ್ಯದ ದರ ಹಿಡಿದು) ಈ ಕೆಳಗಿನಂತೆ ಆಯವ್ಯಯವಾಗುತ್ತದೆ.

ವ್ಯಯ:

ಕಚ್ಚಾ ಮಾಲಿನ—ಅಂದರೆ ೩ ಚೀಲ ಕುಸುಬಿಯ ಕ್ರಯ	೯೬—೦
ಇಬ್ಬರು ಗಂಡಸರು ಒಬ್ಬ ಹೆಂಗಸಿನ ಕೂಲಿ	೩—೪
ಎರಡು ಎತ್ತುಗಳ ಮೇವಿನ ಕ್ರಯ	೨—೮
ಎರಡು ಗಾಣಗಳ ದುರಸ್ತಿಗೆ	೦—೨
ಸವಕಳಿ . . . . ಎತ್ತುಗಳು	೦—೮
ಯಂತ್ರ ಸಾಮುಗ್ರಿ	೦—೬
ಬಡ್ಡಿ	೦—೪
ಬಾಡಿಗೆ	೦—೩
ಇತರ	೦—೫
ಒಟ್ಟು ರೂ.	೧೦೩—೮

ಆಯ:

೧೨೦ ಪೌಂ. ಎಣ್ಣೆ	೯೬—೦
೧೫೦ ಪೌಂ. ಹಿಂಡಿ	೧೫—೦
೧೦೫ ಪೌಂ. ಹೊಟ್ಟು (-೩೦ ಪೌ. ಎಣ್ಣೆ ಕಾಯಿಸಲಿಕ್ಕೆ)	೧—೨
"	೧೧೨—೨

ಈ ಲೆಕ್ಕದಂತೆ ತಿಂಗಳಿಗೆ ೩೦ ರೂ. ಗಳನ್ನು ಗಾಣ ಎತ್ತು ಮುಂತಾದವುಗಳ ಖರೀದಿಗಾಗಿ ಮಾಡಿದ ಸಾಲ ತೀರಿಸಲು ಉಪಯೋಗಿಸಿ ಕನಿಷ್ಠ ೬ ರೂ. ಪ್ರತಿ ನಿತ್ಯ ಉಳಿಸಬರುತ್ತದೆ. ಇನ್ನೊಂದು ಎತ್ತು ಇನ್ನೊಬ್ಬ ಮನುಷ್ಯರನ್ನು ನೇಮಿಸಿಕೊಂಡರೆ ಕುಸಬಿ ಒಡೆಯುವ ಯಂತ್ರವನ್ನು ಇದಕ್ಕೂ ಯೋಗ್ಯವಾಗಿ ಉಪಯೋಗಿಸಿಕೊಳ್ಳಬರುತ್ತದೆ.

[ಸೂಚನೆ:— ಈ ಲೇಖನ ಬರೆಯುವಾಗ ಶ್ರೀ ಎಸ್. ಕೆ. ಕೊಲ್ಹಾಪುರ ಬಿ. ಎ, ಎಲ್. ಎಲ್. ಬಿ. ಅವರು ಬರೆದ ಕೆಲವು ಪತ್ರ, ಲೇಖನಗಳನ್ನು ತುಂಬ ಉಪಯೋಗಿಸಿಕೊಳ್ಳಲಾಗಿದೆ——ಲೇ.]

ಜೇಬು... ಝಣ ಝಣ ಹೊಟ್ಟೆ..... ಭಣ ಭಣ!

ವೆನೆಜುವೇಲದ ವಿಚಿತ್ರ ಶ್ರೀಮಂತಿಕೆಯ ಕಥೆ

★

ಹಣವನ್ನು ತಿನ್ನಲಿಕ್ಕಾಗುವದಿಲ್ಲ. ಇದಕ್ಕೆ ಒಂದು ಉದಾಹರಣೆ ನಿಮಗೆ ಬೇಕಾಗಿದ್ದರೆ ದಕ್ಷಿಣ ಅಮೇರಿಕೆಯ ವೆನೆಜುವೇಲಾ ರಾಜ್ಯವನ್ನು ಎತ್ತಿ ತೋರಿಸಬಹುದು. ಔದ್ಯೋಗಿಕ ಪ್ರಗತಿಯಿಂದಲೇ ಹಿಂದುಳಿದ ರಾಜ್ಯಗಳ ಉದ್ಧಾರವೆಂದು ಗಂಟಲು ಒಡೆಯುವ ವರೆಗೆ ಅರಚಿಕೊಳ್ಳುವವರೂ ವೆನೆಜುವೇಲದ ಕಡೆ ಕಣ್ಣು ಹಾಯಿಸಿದರೆ ಅವರು ತಮ್ಮ ಸಿದ್ಧಾಂತವನ್ನು ತಿರುಗಿ ಆಲೋಚಿಸಬೇಕಾಗುವುದು.

ವೆನೆಜುವೇಲದಲ್ಲಿ ನಿಮಗೆ ಚಿನ್ನ, ವಜ್ರ, ಮುತ್ತುಗಳೂ ಶುದ್ಧ ಪೆಟ್ರೋಲೂ ಬೇಕಾದರೆ ಪುಕ್ಕಟೆ ಎನ್ನುವಷ್ಟು ಅಗ್ಗವಾಗಿ ದೊರೆಯುತ್ತವೆ. (ಪೆಟ್ರೋಲಿನ ಬೆಲೆ ಗ್ಯಾಲನ್ನಿಗೆ ೬ ಆಣೆ!)

ಆದರೆ ಒಂದು ಸಿಗರೇಟ ಡಬ್ಬಿಗೆ ೨॥ ರೂ., ಒಂದು ಜತೆ ಕೆಳದರ್ಜೆಯ ಬೂಟುಗಳಿಗೆ ೭೫ ರೂ., ಒಂದು ಡಜನ್ ತತ್ತಿಗೆ ೩॥ ರೂ. ಕೊಡಬೇಕಾಗುವದು.

ಎಣ್ಣೆಯೇ ಅಭಿಶಾಪ


ಹೀಗೆಂದ ಮಾತ್ರಕ್ಕೆ ವೆನೆಜುವೇಲಾದಲ್ಲಿ ಅತಿ ಪ್ರಸರಣವಿನಾಯೆಂದಾಗಲಿ ಏರಿದ ಬೆಲೆಗಳು ಯುದ್ಧದ ಪರಿಣಾಮವೆಂದಾಗಲಿ, ಭಾವಿಸಬೇಡಿರಿ. ಕಳೆದ ೩೦ ವರ್ಷಗಳಿಂದ ಅಲ್ಲಿ ಇದೇ ಹಾಡು.

ರೊಕ್ಕವನ್ನು ಏನು ಮಾಡಬೇಕೆಂದು ಬಗೆಹರಿಯದೆ ಅವರು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಎಣ್ಣೆ ಗಣಿಗಳ ಮೇಲೆ ಹೊರತು ಮತ್ತಾರ ಮೇಲೂ ಕರಗಳೇ ಬೀಳುವದಿಲ್ಲೆಂದರೂ ಅತಿಶಯೋಕ್ತಿಯಾಗದು. ಆ ರಾಷ್ಟ್ರದ ಸರಕಾರಕ್ಕೆ ಸಾಲವೇ ಇಲ್ಲ.

ಈ ವಿಚಿತ್ರ ಅವಸ್ಥೆಗೆ ಕಾರಣವೇನು? ಪ್ರಕೃತಿ ದೇವಿ ಎಷ್ಟು ಔದಾರ್ಯದಿಂದ ವೆನೆಜುವೇಲಕ್ಕೆ ವರಗಳನ್ನು ಕೊಟ್ಟಳೋ ಅಷ್ಟೇ ಔದಾರ್ಯದಿಂದ ಒಂದು ಶಾಪವನ್ನೂ ಕೊಟ್ಟಿದ್ದಾಳೆ. ಆ ಅಭಿಶಾಪವೆಂದರೆ ಎಣ್ಣೆ—ಕಲ್ಲೆಣ್ಣೆ.

೨೫ ವರ್ಷ ಕೆಳಗೆ ವೆನೆಜುವೇಲದಲ್ಲಿ ಎಣ್ಣೆ ಗಣಿಗಳಿರುವದು ಕಂಡುಬಂತು. ಅಮೇರಿಕೆ, ಹಾಲಂಡ್, ಬ್ರಿಟನ್ ಇವೆಲ್ಲ ಪ್ರಬಲ ರಾಷ್ಟ್ರಗಳು ಅಲ್ಲಿ ನುಗ್ಗಿದವು. ಎಣ್ಣೆಯ ಸವಲತ್ತುಗಳನ್ನು ಪಡೆದವು. ವೆನೆಜುವೇಲದ ನೆಲದಡಿಯಲ್ಲಿ ಎಣ್ಣೆಯ ಸಮುದ್ರವೇ ಇದೆ. ಎಣ್ಣೆಯ ಕಂಪನಿಗಳು ಸ್ಥಾಪಿಸಲ್ಪಟ್ಟವು. ಇಂದು ಅಲ್ಲಿ ಹುಟ್ಟುವಷ್ಟು ಎಣ್ಣೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಹೊರತು ಮತ್ತೆಲ್ಲಿಯೂ ಹುಟ್ಟುವದಿಲ್ಲ. ಯುದ್ಧ ಕಾಲದಲ್ಲಿ ಉತ್ಪಾದನೆ ಇಮ್ಮಡಿಯಾಗಿದೆ. ಅದು ಯಾವ ಆಕಾಶ ಬಾಣ ಬಾಂಬುಗಳಿಗೂ ನಿಲುಕದಷ್ಟು ದೂರ ಇರುವದರಿಂದ ವೆನೆಜುವೇಲದ ಎಣ್ಣೆಗೆ ಬಹಳ ಮಹತ್ವ ಬಂದಿದೆ.

ವೆನೆಜುವೇಲದ ಜನಸಂಖ್ಯೆ ಕೇವಲ ೩೮॥ ಲಕ್ಷ. ಆದುದರಿಂದ ಎಣ್ಣೆಗಣಿಗಳಲ್ಲಿ ಕೆಲಸ ಮಾಡಲು ಕೂಲಿಕಾರರೆಲ್ಲಿ? ಕೂಲಿಯ ದರ



ಈ ಮರಾಕೈಬೋ ಸರೋವರದಲ್ಲಿನ ಎಣ್ಣೆಯ ''ಬಾವಿ''ಗಳೇ ವೆನೆಜುವೇಲದ ಜೀವನಾಧಾರ

ಏರಿತು. ದಿನಕ್ಕೆ ೨೪ ರೂಪಾಯಿ ಕೂಲಿ ದೊರೆಯುತಿತ್ತು. ಕೇಳಬೇಕೆ? ರೈತರು ಹೊಲ ಬಿಟ್ಟರು, ಅಂಬಿಗರು ಮೀನು ಹಿಡಿಯುವದು ಬಿಟ್ಟರು, ಬೇರೆ ಕಾರಖಾನೆಗಳಲ್ಲಿದ್ದವರು ಅವನ್ನು ತೊರೆದರು—ಎಲ್ಲರೂ ಧಾವಿಸಿದರು ಎಣ್ಣೆಯ ಗಣಿಗಳಿಗೆ.

ಹೊಲಗಳು ಬಂಜರುಬಿದ್ದವು, ಕಾರಖಾನೆಗಳು ಹಾಳುಬಿದ್ದವು, ಮೀನುಗಳು ಹರಿದವು; ಹಳ್ಳಿಗಳು ಬರಿದಾದವು. ರಾಷ್ಟ್ರದ ಉತ್ಪನ್ನ ಬರಿ ಎಂಟು ವರ್ಷಗಳಲ್ಲಿ ನಾಲ್ಕುಪಟ್ಟು ಏರಿತು. ಇದನ್ನು ನೋಡಿ ಸರಕಾರ ಸಂತೋಷದಿಂದ ಉಬ್ಬಿತು. ಎಣ್ಣೆಯನ್ನು ಕುಡಿಯಲಾಗುವದಿಲ್ಲೆಂದು ಅದಕ್ಕೆ ಹೊಳೆಯಲಿಲ್ಲ. ಹಣವಿದ್ದ ಮೇಲೆ ಏನು ಭಯ? ಸಮೃದ್ಧವಾದ ಚಿಂತಿ ಪೆಟ್ಟಿಗೆಯು ಉದ್ದಿಮೆ ಹಾಳಾದರೇನು? ಸ್ವೀಡನ್ನಿನಿಂದ ಕಡ್ಡಿ ಪೆಟ್ಟಿಗೆ ತರಿಸಿದರಾಯಿತು. ಬಟಾಟೆಯನ್ನು ಹಾಲಂಡಿನಿಂದ, ಸಿಮೆಂಟನ್ನು ಪೋಲಂಡಿನಿಂದ, ತಿನ್ನುವ ಎಣ್ಣೆಗಳನ್ನು ಫಿಲಿಪೈನ್ಸಿನಿಂದ, ಅರಿವೆಯನ್ನು ಬ್ರೇಝಿಲ್ಲಿನಿಂದ ತರಿಸಿದರು. ಬೆಲೆಗಳೇನೋ ಬಹಳ ಏರಿದವು. ಆದರೆ ಅದರೊಡನೆ ಕೂಲಿ ದರವೂ ಏರಿತು.

ಕಣ್ಣು ತೆರೆಯಿತು

ಆದರೆ ಮನುಷ್ಯ ಹಣವನ್ನು ತಿನ್ನಲಾರನೆಂಬ ಸತ್ಯ ಅವರಿಗೆ ಹೊಳೆಯುವ ಕಾಲವೂ ಬಾರದಿರಲಿಲ್ಲ. ಯುದ್ಧ ಬಂತು. ವೆನೆಜುವೇಲಕ್ಕೆ ಸಾಮುಗ್ರಿಗಳನ್ನು ಪೂರೈಸುತ್ತಿದ್ದ ರಾಷ್ಟ್ರಗಳು ಅಗ್ನಿಕುಂಡದಲ್ಲಿ ಬಿದ್ದವು. ವೆನೆಜುವೇಲಕ್ಕೆ ಬಿಸಿ ಹತ್ತಿತು. ಇಷ್ಟು ಹಣವಿದ್ದೂ ಒಮ್ಮೊಮ್ಮೆ ಜನರು ಹಸಿದೇ ಇರಬೇಕಾಯಿತು ''ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ'', ''ಅಂಗಿ ಪಿಂಗಿ ರಾವುತ ಹೊಟ್ಟೆಗಿಲ್ಲದೆ ಸಾವುತ'' ಎಂದು ನಮ್ಮಲ್ಲಿ ಗಾದೆಗಳಿಲ್ಲವೆ? ಹಾಗೆ ಮೋಟಾರಿನಲ್ಲಿ ವಿಮಾನದಲ್ಲಿ ಓಡಾಡುವ ಶ್ರೀಮಂತರೂ ಹೊಟ್ಟೆಗೆ—ಬಟ್ಟೆಗೆ ಚಿಂತಿಸುವಂತಾಯಿತು.

ಇಷ್ಟೇ ಅಲ್ಲ. ಇದಕ್ಕಿಂತಲೂ ಹೆಚ್ಚು ಗಾಬರಿಗೆ ಕಾರಣವಾಗುವ ವಿದ್ಯಮಾನಗಳಿವೆ. ಅಣು ಶಕ್ತಿಯ ಉಪಯೋಗ ಉದ್ದಿಮೆಗಳಲ್ಲಿ ಪ್ರಚಾರಕ್ಕೆ ಬರಬಹುದಾದ ಕಾಲ ದೂರವಿಲ್ಲ. ಹಾಗಾದರೆ ಅಗ್ಗವಾದ ಅಣುಶಕ್ತಿಯನ್ನು ಬಿಟ್ಟು ಈ ಎಣ್ಣೆಯ ಬೆನ್ನುಬೀಳುವವರಾರು? ಪೆಟ್ರೋಲಿನ ಬೇಡಿಕೆ ಇಲ್ಲದಂತಾದರೆ ವೆನೆಜುವೇಲದ ಆರ್ಥಿಕ ಸ್ವಾತಂತ್ರ್ಯವಾದಂತೆಯೇ ಸರಿ. ಏಕೆಂದರೆ ಅದರ ಉತ್ಪನ್ನದಲ್ಲಿ ನೂರಕ್ಕೆ ೬೦ ರಷ್ಟು ಪೆಟ್ರೋಲಿನಿಂದಲೇ ಬರುತ್ತದೆ.

ಆದುದರಿಂದ ವೆನೆಜುವೇಲದ ಕಾದಂಬರಿಕಾರನಾದ ಹೊಸ ಅಧ್ಯಕ್ಷ ಇನ್ನು ಸ್ಥಿತಿಯನ್ನು ಹೀಗೆಯೇ ಇರಗೊಡಿಸಬಾರದೆಂದು ನಿರ್ಧರಿಸಿದ್ದಾನೆ. ಎಣ್ಣೆಯಿಂದ ದೊರೆತ ಹಣವನ್ನು ಇತರ ಉದ್ಯೋಗಗಳ, ಮುಖ್ಯವಾಗಿ ಆಹಾರ ವಸ್ತ್ರಗಳ ಉದ್ದಿಮೆಗಳ ಬೆಳವಣಿಗೆಗಾಗಿ ಉಪಯೋಗಿಸಿ ದೇಶವನ್ನು ಸ್ವಯಂಪೂರ್ಣವಾಗಿ ಮಾಡಲು ವೆನೆಜುವೇಲ ಈಗ ಟೊಂಕ ಕಟ್ಟಿದೆ. ೨॥ ಲಕ್ಷ ಎಕರೆ ಭೂಮಿಯಲ್ಲಿ ಸಾಗುವಳಿಯನ್ನು ಪ್ರಾರಂಭಿಸಬೇಕೆಂಬುದು ಸರ್ಕಾರದ ಯೋಜನೆಗಳಲ್ಲಿ ಒಂದು. ವೆನೆಜುವೇಲದ ಆರ್ಥಿಕ ಪ್ರಗತಿಯನ್ನು ಸಾಧಿಸಲು ಕೋಟ್ಯಂತರ ಡಾಲರುಗಳನ್ನು ಹಾಕಿ ಒಂದು ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ.

ಕಟ್ಟಕಡೆಗೆ ವೆನೆಜುವೇಲದ ಜನರಿಗೆ ಪ್ರಾಣವೆಂಬುದು ಅನ್ನಮಯವೆಂದು ತಿಳಿಯಿತು.

ಮೋಟಾರುಗಳಲ್ಲಿ ತಿರುಗುವವರೂ ಕೂಡ ''ಕೌಪೀನವಂತಃ ಖಲು ಭಾಗ್ಯವಂತಃ'' ಎನ್ನಲು ಬೇರೆ ಉದಾಹರಣೆ ಬೇಕೆ!



ವೆನೆಜುವೇಲದ ಹಡಬಿದ್ದ ಹೊಲಗಳು: ರೈತರೆಲ್ಲ ಓಡಿ ಎಣ್ಣೆಗಣಿ ಸೇರಿದ್ದರ ಫಲ ಇದು.



ಬಡ ಕೂಲಿಕಾರರು ಕೂಡ ಇಂಥ ಭವನಗಳಲ್ಲಿ ವಾಸಿಸುವರು. ಅವರ ಮನೆಯ ಮುಂದಿನ ಮೋಟಾರು ಕಾರುಗಳ ಸಾಲನ್ನು ನೋಡಿರಿ.

ವೆನೆಜುವೇಲಕ್ಕೆ ತೋರಿಸಿದಷ್ಟು ಮಮತೆಯನ್ನು ಭೂಮಿದೇವಿ ಮತ್ತಾವ ರಾಜ್ಯಕ್ಕೂ ತೋರಿಸಿರಲಿಕ್ಕಿಲ್ಲ. ಅಲ್ಲಿ ಬೆಳೆಯಲಾರದ ವಸ್ತು ಜಗತ್ತಿನಲ್ಲಿ ಬೇರೆಲ್ಲಿಯೂ ಬೆಳೆಯದೆಂದು ಒಬ್ಬ ಪ್ರೊಫೆಸರರು ಶಪಥ ತೊಟ್ಟರಂತೆ. ಅದರ ೧೭೫೦ ಮೈಲುದ್ದದ ಸಮುದ್ರ ತೀರದಲ್ಲಿ ಬೇಕಾದಷ್ಟು ಮೀನುಗಳು ಸಿಗುತ್ತವೆ. ಆದರೆ ಅಲ್ಲಿಯ ಜನರು ವಿದೇಶಗಳಿಂದ ಡಬ್ಬಿಯಲ್ಲಿ ಹಾಕಿದ ಮೀನು ತರಿಸಿ ತಿನ್ನುತ್ತಾರೆ. ಬಟಾಟೆ, ಹತ್ತಿ, ಹಣ್ಣು ಹಂಪಲ, ಕಬ್ಬು, ಗೋದಿ ಏನು ಬೇಕಾದ್ದು ಅಲ್ಲಿ ಬೆಳೆಯಬಲ್ಲದು. ಆದರೆ ಸರಕಾರಿ ಪ್ರಯೋಗ ಕ್ಷೇತ್ರಗಳಲ್ಲಿ ಹೊರತು ಈಗ ಬೇರೆಲ್ಲಿಯೂ ಗೋದಿ ಬೆಳೆಯುವದು ನಿಮಗೆ ಕಾಣಲಾರದು. ಕಾಫಿ, ಕೊಕ್ಕೊ ಇವುಗಳನ್ನು ಬಿಟ್ಟರೆ ಮತ್ತಾವ ಆಹಾರ ಸಾಮುಗ್ರಿಯನ್ನೂ ವೆನೆಜುವೇಲ ಸಾಕಷ್ಟು ಬೆಳೆಸುವದಿಲ್ಲ.

ವೆನೆಜುವೇಲದ ರಾಜಧಾನಿಯಾದ ಕಾರಾಕಾಸದಲ್ಲಿ ಕೂಲಿಕಾರರು ಅರಮನೆಗಳಂಥ ಮನೆಗಳಲ್ಲಿ ವಾಸಿಸುತ್ತಾರೆ. ಒಂದು ಮೋಟಾರು ಕಾರಿಗೆ ಸುಮಾರು ೩೮,೦೦೦ ರೂಪಾಯಿ ಬೆಲೆಯಾದರೂ ಕಾರಾಕಾಸದಲ್ಲಿ ಮೋಟಾರುಗಳು ಹಿಂಡು ಹಿಂಡಾಗಿ ಸಿಗುತ್ತವೆ. ಕೂಲಿಕಾರರ ಮನೆಗಳ ಮುಂದೆ ಅವರ ಹೊಸ ಹೊಸ ಬಗೆಯ ಮೋಟಾರು ಕಾರುಗಳು ನಿಂತಿರುವವು. ತಮ್ಮ

ಬಡತನಕ್ಕೆ ವಿಜ್ಞಾನವೇ ಮದ್ದು

ಪಂ. ಜವಾಹರಲಾಲರ ಉದ್ಗಾರ

ಕಲ್ಕತ್ತೆಯಲ್ಲಿ ಸ್ಥಾಪಿತವಾದ ಭೌತಿಕ ರಾಸಾಯನಿಕ ಸಂಶೋಧನ ಸಂಸ್ಥೆಯ ಅಡಿಗಲ್ಲನ್ನು ಇಡುತ್ತ ಜುಲೈ ೩ನೆ ತಾರೀಖಿನಂದು ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಹೀಗೆ ಉದ್ಗಾರ ತೆಗೆದರು:

ದೇಶದಲ್ಲಿದ್ದ ಬಡತನವನ್ನು ಓಡಿಸಲು ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ವಿಜ್ಞಾನ ಶಾಸ್ತ್ರದ ಸಂಪೂರ್ಣ ಉಪಯೋಗ ಮಾಡಿಕೊಳ್ಳಬೇಕೆಂದು ಹಿಂದುಸ್ಥಾನ ಸರಕಾರವು ನಿರ್ಧರಿಸಿದೆ. ದೇಶದ ಉನ್ನತಿಯು ಅಲ್ಲಿದ್ದ ಸೈನಿಕ ಶಕ್ತಿಯನ್ನು ಅವಲಂಬಿಸಿರದೆ ಅದರ ಉತ್ಪಾದಕ ಶಕ್ತಿಯನ್ನೂ ಜನರ ಸಂಸ್ಕೃತಿ ಮತ್ತು ಪ್ರಗತಿಪರ ಜೀವನವನ್ನೂ ಅವಲಂಬಿಸಿದೆ. ಇದನ್ನು ಸಾಧಿಸುವದೇ ಭಾರತ ಸರಕಾರದ ಗುರಿಯಾಗಿದೆ. ಈಗ ಜನರಿಗೆ ಅನ್ನ ನೀರು ಕೂಡ ನಿರಾತಂಕವಾಗಿ ಸಿಗದಾಗಿದೆ. ಈ ಭಾಗಕ್ಕೆ ಕುಡಿವ ನೀರಿನ ಕೊರತೆಯಿಂದು ಕೇಳಿಬಿದ್ದೇನೆ. ನಿರಾತಂಕವಾಗಿ ದೊರೆಕದಾಗಿದೆ. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಆದ್ಯ ಕರ್ತವ್ಯವೆಂದರೆ ಜೀವನಾವಶ್ಯಕ ಪದಾರ್ಥಗಳನ್ನು ಜನತೆಗೆ ಒದಗಿಸಿಕೊಡುವದು. ಆ ಮೇಲೆ ಇನ್ನುಳಿದ ಪದಾರ್ಥಗಳ ಮಾತು.

ವಿಜ್ಞಾನವನ್ನು ದಿನದ ಜೀವನದಲ್ಲಿ ಅಳವಡಿಸಿಕೊಳ್ಳುವದರಲ್ಲಿ ಮಾನವ ಕುಲಕ್ಕೆ ಅಪಾರ ಲಾಭವಿದೆ. ಅದರಂತೆ ಅಪಾರ ಹಾನಿಯ ಸಂಭವವೂ ಉಂಟು. ಜಾಣರಾದವರು ಅದರ ಪ್ರಯೋಜನ ಮಾತ್ರ ಪಡೆಯಬೇಕು. ಭಾರತ ಸರಕಾರದ ವಿಶಾಲ ಕಾರ್ಯಕ್ರಮದ ಅಂಗವಿದೆ. ನಾನು ಈ ಅಡಿಗಲ್ಲು ಇಡುತ್ತೇನೆ ಎಂದು ಮೊದಲಾಗಿ ಹೇಳಿದರು.

ಕಲ್ಕತ್ತೆಯ ಈ ವಿದ್ಯುತ್ ರಾಸಾಯನಿಕ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಲು ಡಾ. ಅಲಗಪ್ಪ ಚೆಟ್ಟಿಯಾರರು ಸಹಾಯ ನೀಡಿದ್ದು ಇದನ್ನು ಸರಕಾರವು ವಹಿಸಿಕೊಂಡಿದೆ. ಭಾರತದಲ್ಲಿ ಈ ಮಾದರಿಯ ಸಂಸ್ಥೆಯು ಇದೇ ಮೊದಲಿನದು. ಔದ್ಯೋಗಿಕ ಬೆಳವಣಿಗೆಯ, ಅದರಲ್ಲೂ ರಾಸಾಯನಿಕ ಸಂಶೋಧನದ ಕ್ಷೇತ್ರದಲ್ಲಿ ಕೆಲಸ ಮಾಡಲು ಇದು ಸಂಕಲ್ಪಿಸಿದೆ. ಈ ಸಂಸ್ಥೆಗೆ ಯುಶ ಕೋರಿ ಭಾರತ ಗವರ್ನರಜನರಲ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರೇ ಮೊದಲಾದವರಿಂದ ಸಂದೇಶಗಳು ಬಂದಿದ್ದವು.

ಆಡಳಿತದಲ್ಲಿ ಕಾಂಗ್ರೆಸ್ಸಿಗರು ಕೈಹಾಕಕೂಡದು

ರಾಷ್ಟ್ರಪತಿಗಳ ಆದೇಶ

ಪ್ರಾಂತದ ಆಡಳಿತದಲ್ಲಿ ಕಾಂಗ್ರೆಸ್ಸಿಗರು ಕೈಹಾಕುತ್ತಿರುವದರಿಂದ ತೊಂದರೆಯಾಗತಕ್ಕದೆಂದು ಅನೇಕ ಪ್ರಾಂತಗಳ ಅಧಿಕಾರಿಗಳಿಂದ ದೂರು ಬಂದದ್ದರಿಂದ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದರು ಎಲ್ಲ ಪ್ರಾಂತಿಕ ಕಾಂಗ್ರೆಸ ಸಮಿತಿಗಳಿಗೆ ಒಂದು ಆದೇಶ ಕಳಿಸಿ ಕಾಂಗ್ರೆಸ್ಸಿಗರು ತಮ್ಮ ಪ್ರಾಂತದ ಆಡಳಿತದಲ್ಲಿ ಕೈಹಾಕಬಾರದೆಂದು ಹೇಳಿದ್ದಾರೆ. ರಚನಾತ್ಮಕವಾದ ಸೂಚನೆಗಳೇನಾದರೂ ಇದ್ದರೆ ಅ. ಭಾ. ಕಾಂಗ್ರೆಸ ಸಮಿತಿಯು ಅದನ್ನು ಸ್ವೀಕರಿಸಿ ಯೋಗ್ಯ ಅಧಿಕಾರಿಗಳ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸುವದೆಂದು ಹೇಳಲಾಗಿದೆ.

ಸಮಾಜ ಪುಸ್ತಕಾಲಯ

—ಧಾರವಾಡ—

ನಿಮ್ಮ ಮನೆ ಮತ್ತು ಶಾಲೆ ಕಾಲೇಜುಗಳ ಲೈಬ್ರರಿಗಳಿಗೆ ಬೇಕಾಗುವ ಉತ್ತಮ ಕಥೆ, ಕಾದಂಬರಿ, ಕವನ, ನಾಟಕ, ಹರಟೆ, ವಿಜ್ಞಾನ ಮೊದಲಾದ ಎಲ್ಲ ಸಾಹಿತ್ಯವೂ ಉಂಟು. ಉಚಿತ ಕ್ಯಾಟಲಾಗಿಗೆ ಬರೆಯಿರಿ

ವಿವಿಧ ಪ್ರಪಂಚ

ಜೀವನಸೂತ್ರಗಳು

ಜೀವನದ ಅರ್ಥವನ್ನು ಪೂರ್ಣವಾಗಿ ತಿಳಿಯದಿರುವ ಪಶುಗಳಿಗಿಂತಲೂ ಅರ್ಥ ತಿಳಿದ ಮಾನವರು ತಮಗೂ ಇತರರಿಗೂ ಕಂಟಕಪ್ರಾಯರಾಗಿ ಬಾಳುವ ಸಂದರ್ಭಗಳು ಹೆಚ್ಚು. ಅಂಥವರು ಡಗ್ಲಸ್ ಈ ಲರ್ಟನ್ನರು ಬರೆದ "ಜೀವನವನ್ನು ಎಲ್ಲಕ್ಕಿಂತ ಹೆಚ್ಚಿನದನ್ನಾಗಿ ತಿಳಿ" ಎಂಬ ಪುಸ್ತಕವನ್ನು ಓದಬೇಕು. ಅದರಲ್ಲಿ ಅಧ್ಯಾಯಗಳೇ ಸೂತ್ರ ರೂಪದ ಹೆಸರಿನಲ್ಲಿವೆ.

(೧) ನೀನು ವಿಶೇಷ ಪ್ರತಿಭಾ ಸಂಪನ್ನನಾ(ಳಾ)ಗಿರಬೇಕೆಂದಿಲ್ಲ.

(೨) ಇದ್ದುದ್ದನ್ನು ಸರಿಯಾಗಿ ಬಳಸಿಕೋ.

(೩) ನಿನಗೆ ಬೇಕಾದುದೇನೆಂಬುದನ್ನು ತಿಳಿದುಕೊಳ್ಳಬೇಕು.

(೪) ಪೂರ್ವ ಯೋಜನೆ ತಯಾರಿಸಿ ಅದನ್ನು ಆಚರಣೆಯಲ್ಲಿ ತಾ.

(೫) ನೀನು ಪ್ರತಿಭಾನ್ವಿತನಾ(ಳಾ)ಗಲೂ ಬಹುದು

(೬) ನಿನ್ನ ನ್ಯೂನತೆಗಳನ್ನು ನೀನು ಗೆಲ್ಲಬಹುದು.

(೭) ಹೊಸದನ್ನು ಹುಟ್ಟಿಸತಕ್ಕ ಕಲ್ಪನಾಶಕ್ತಿ ಇಲ್ಲವೆ ಪ್ರತಿಭೆಯನ್ನು ಬೆಳಸಿಕೊಳ್ಳಬಹುದು.

(೮) ಸ್ವಪ್ರಯತ್ನದಿಂದ ಕಾರ್ಯವನ್ನು ಆರಂಭಿಸಿದರೆ ಯೋಚನೆಯಂತೆ ಕೆಲಸ ಮಾಡಬಲ್ಲೆ.

(೯) ಅವಲಂಬಿಸಬಹುದಾದ ಸಹಕಾರದ ಬೆಲೆ ಎಷ್ಟೆಂಬುದನ್ನು ನಿರ್ಣಯಿಸಿಕೋ.

(೧೦) ಜೀವನದಲ್ಲಿ ಉತ್ಸಾಹ ತಾಳಬೇಕು.

(೧೧) ನಿನ್ನ ಜನಪ್ರಿಯತೆಯ ಬೆಲೆಯನ್ನರಿತುಕೋ.

(೧೨) ಗೆಳೆಯರನ್ನು ಗಳಿಸು.

(೧೩) ಮುಖ ಉಳಿಸಿಕೊಳ್ಳುವ ಕಲೆ ಮತ್ತು ಅದರ ಬೆಲೆ—ಇವನ್ನು ಚೆನ್ನಾಗಿ ತಿಳಿದುಕೋ.

(೧೪) ಅನ್ಯರನ್ನು ಅನುಕೂಲ ಕಾರ್ಯೋನ್ಮುಖರನ್ನಾಗಿ ಮಾಡುವ ಕಲೆ ಗೊತ್ತಿರಬೇಕು.

(೧೫) ಹಿತೋಪಯುಕ್ತವಾದ ಶಬ್ದ ಸಂಪತ್ತನ್ನು ಗಳಿಸಿಕೋ.

(೧೬) ಸರಿಯಾದ ಉದ್ಯೋಗವನ್ನು ಹೊಂದಬೇಕು.

(೧೭) ಭಯವನ್ನು ಗೆಲ್ಲಬೇಕು; ಅದೇ ಪರಮ ಶತ್ರು.

(೧೮) ಅಕಾರಣ ಪಶ್ಚಾತ್ತಾಪ ಮತ್ತು ಆತ್ಮಕರುಣೆಗಳನ್ನು ಬಿಡು.

ಅಮೇರಿಕದಲ್ಲಿ ಹೊಸ ಹುಚ್ಚು!

"ವಧು, ಮಾರಲಿಕ್ಕಿದ್ದಾಳೆ, ಆಂಗ್ಲ ಯುವತಿ, ವಯಸ್ಸು ೩೮, ಲಿವರ್ ಚೆನ್ನಾಗಿ ಕೆಲಸ ಮಾಡುತ್ತದೆ. ೧೫೦೦ ಪೌಂಡುಗಳನ್ನು ಕೊಡುವ ಬ್ರಹ್ಮಚಾರಿಗೆ ಹೆಂಡತಿಯಾಗಿ ಮಾರಿಕೊಳ್ಳಲು ಬಯಸುತ್ತಾಳೆ." ಈ ಜಾಹೀರಾತನ್ನು ಲಂಡನ್ನಿನ ನರಸಮ್ಮನೊಬ್ಬಳು ಕೊಟ್ಟು ಗಿರಾಕಿಯ ಹಾದಿ ಕಾಯುತ್ತಿದ್ದಾಳೆ!

ಕೆಲಸ ಹೋದೀತೆಂದು ಹೆಸರು ಮತ್ತು ಭಾವಚಿತ್ರಗಳನ್ನು ಪ್ರಕಟಿಸಿಲ್ಲ. ಒಳ್ಳೆಯ ಹೆಂಡತಿ, ಗೃಹಕೃತ್ಯ ಬಲ್ಲಾಕೆ ಮತ್ತು ಅಡಿಗೆ ಬಲ್ಲವಳು ಎನಿಸಿದಾಕೆಗೆ ಈ ಬೆಲೆ ಹೆಚ್ಚಲ್ಲ ಎನ್ನುತ್ತಾಳೆ ಅವಳು; ತಾನು ಒಬ್ಬಳೇ ಇದ್ದು ಬೇಸರವಾಗಿದೆ. ದುಡ್ಡು ಉಳಿಸಲಿಕ್ಕಾಗಲಿಲ್ಲ. ಅದಕ್ಕೆ ನಾನು ಮರ್ಯಾದಸ್ಥನೊಬ್ಬನನ್ನು ಮದುವೆಯಾಗಿ ಬಾಳಬೇಕೆಂದಿದ್ದೇನೆ ಎಂದಳು.

ಮೊದಲು ಈ ಹುಚ್ಚು ಪ್ರಾರಂಭವಾದುದು ಅಮೇರಿಕದಲ್ಲಿ. 'ಅಮೇರಿಕ ಹುಚ್ಚಿನ ತವರು ಮನೆ'. ಅಲ್ಲಿಯ ಶ್ರೀಮತಿ ಡೊರೋತಿ ಲಾರಲಳು ೧೦ ಸಾವಿರ ಡಾಲರಿಗೆ ಮೊದಲು ತನ್ನನ್ನು ಮಾರಿಕೊಂಡು ಉಳಿದವರಿಗೆ ದಾರಿ ತೋರಿಸಿದಳು. ಲೆಕ್ಸಿಂಗ್‌ಟನ್ನಿನ ಒಬ್ಬಾಕೆಯಂತೂ ಪ್ರೀತಿಯ ಗಂಡ ಬರುವದಾದರೆ ಅವನಿಗೆ ೧೦ ಸಾವಿರ ಡಾಲರ್ ಕೊಡುತ್ತೇನೆ ಎಂದು ಪ್ರಕಟಿಸಿದ್ದಾಳೆ ಮತ್ತು ರೆವರೆಂಡ್ ಬರ್‍ರ್‍ದು ತನ್ನ ಅಕ್ಕನಿಗೊಬ್ಬ ಒಳ್ಳೆಯ ಗಂಡ ಬೇಕೆಂದು ಕೊಳ್ಳಲು ಹುಡುಕುತ್ತಿದ್ದಾರಂತೆ.

ಅಂದ ಮೇಲೆ ತಿಳಿದುಕೊಳ್ಳಬೇಕು ಹಿಂದೀ ಹೆಂಗಸರು; ಸುಖವಿರುವುದು ಸುಖಪಡೆವ ಅರ್ಹತೆಯನ್ನು ಸಂಪಾದಿಸಿದ ಅಂದರೆ ಪತಿಗೆ ನೆರವಾಗಬಲ್ಲ ಮತ್ತು ಪಕ್ಕಸುಕಂಪ ಪತಿಪ್ರೀತಿಯುಳ್ಳ ಸ್ತ್ರೀಯರಿಗೆ ಮಾತ್ರ ಎಂಬುದನ್ನು!

ಸ್ತ್ರೀರಾಜ್ಯ

ಬಲಿ ದ್ವೀಪವು ಒಂದು ಸ್ತ್ರೀರಾಜ್ಯ. ಅಲ್ಲಿ ನೂರಕ್ಕೆ ೬೦ ರಷ್ಟು ಹೆಂಗಸರಿದ್ದಾರೆ. ಅತ್ಯಂತ ನಾಚಿಕೆಯ ಹೆಂಗಸು ಕೂಡ ಅಲ್ಲಿ ತನ್ನ ಶರೀರದ ಯಾವ ಭಾಗವನ್ನೂ ಮುಚ್ಚಿಟ್ಟುಕೊಳ್ಳಬೇಕಿಲ್ಲ ಎಂದು ಡಾ. ರಘುವೀರರು ಬರೆಯುತ್ತಾರೆ.

ಬಲಿಯ ಹೆಂಗಸಿನ ಮೊದಲ ಕರ್ತವ್ಯವೆಂದರೆ ಗಂಡನಿಗೊಂದು ಗಂಡುಮಗು ಕೊಡುವುದು. ಗರ್ಭವತಿಯಾದರೆ ಇಡೀ ಹಳ್ಳಿಯೇ ಅದರ ನಿಮಿತ್ತ ಉತ್ಸವವನ್ನಾಚರಿಸುವುದು. ಇದು ಹಿಂದುಗಳ ಗರ್ಭಾದಾನ, ಜಾತಕ ಮುಂತಾದ ಸಂಸ್ಕಾರಗಳಿಗೆ ಹೊಂದಿಕೆಯಾಗಿದೆ. ಪ್ರಾಯ ಬಂದೊಡನೆ ಎಲ್ಲರೂ ಮದುವೆಯಾಗಿ ಬಿಡುತ್ತಾರೆ.

ಬಲಿಜನರು ಕಮ್ಯುನಿಜಂ ಪದ್ಧತಿಯನ್ನು ಅನುಸರಿಸುತ್ತಾರೆ. ಉತ್ಸವದಲ್ಲಿ, ವ್ಯಸನದಲ್ಲಿ ಕೃಷಿ ಮುಂತಾದ ವ್ಯವಸಾಯಗಳಲ್ಲಿ ಅವರು ಪರಸ್ಪರ ಸಹಾಯ ಮಾಡುವರು. ಒಬ್ಬನ ಕೆಲಸವನ್ನು ನೂರಾರು ಜನರು ಕೂಡಿ ಮಾಡಿಕೊಡುವರು.



ಗ್ಲೌಸೆಸ್ಟರಿನ ಡ್ಯೂಕ್ ಮತ್ತು ಡಚೆಸ್ ಇವರು ಆಸ್ಟ್ರೇಲಿಯದ ಕ್ರಿಕೆಟ್ ಆಟಗಾರರ ನಾಯಕರಾದ ಡಾನ್ ಬ್ರಾಡ್‌ಮನ್ನನೊಡನೆ ಮಾತಾಡುತ್ತಿರುವುದು.

ಅವರು ಸಂಸ್ಕೃತವನ್ನು ಮರೆತು ಬಿಟ್ಟಿದ್ದಾರೆ. ಆದರೆ ತಮ್ಮ ಪೂರ್ವಜರ ಸಂಸ್ಕೃತಿಯನ್ನು ಕೆಲಮಟ್ಟಿಗೆ ಉಳಿಸಿಕೊಂಡಿದ್ದಾರೆ. ರಾಮಾಯಣ ಮಹಾಭಾರತ ಕಥೆಗಳನ್ನು ತಮಗೆ ಬೇಕಾದಂತೆ ಬಿಟ್ಟು ಮಾಡಿಬಿಟ್ಟಿದ್ದಾರೆ. ಅರ್ಜುನನು ಲಂಕೆಯ ರಾಣಿಯನ್ನು ಕದ್ದೊಯ್ಯುತ್ತಾನೆ—ಅವರ ನಾಟಕಗಳಲ್ಲಿ! ಕಪಿರಾಜನು ತನ್ನ ಸೈನ್ಯದೊಡನೆ ಬೆನ್ನಟ್ಟಿ ಬರುತ್ತಾನೆ ಅನಂತರ.

ಬಲಿ ರಾಜ್ಯದಲ್ಲಿ ಕಳ್ಳರೇ ಇಲ್ಲ! ಯಾರ ವಸ್ತು ಎಲ್ಲಿ ಬಿದ್ದಿದ್ದರೂ ಮುಟ್ಟುವವರಿಲ್ಲ ಎಂದು ಅಲ್ಲಿಗೆ ಹೋಗಿ ಬಂದವರು ಬರೆದಿಟ್ಟಿದ್ದಾರೆ. ಮನೆಯ ಸಾಮಾನುಗಳತ್ತ ಅಲ್ಲಿ ಯಾರೂ ಲಕ್ಷ್ಯ ಕೊಡುವುದಿಲ್ಲ.

ಬಲಿದ್ವೀಪವು ಜಾವಾಕ್ಕೆ ಪೂರ್ವದಲ್ಲಿದೆ. ಅಲ್ಲಿ ಸಂಪೂರ್ಣ ಶಾಂತಿ ಸುಖಗಳು ರಾಜ್ಯವಾಳುತ್ತಿವೆ. ೧೦ ಲಕ್ಷ ಅಲ್ಲಿಯ ಜನಸಂಖ್ಯೆ. ದುಡ್ಡಿನ ಅಗತ್ಯವೇ ಅಲ್ಲಿಲ್ಲ. ಹಣ್ಣು, ಎಳೆಬಿಸಿಲುಗಳನ್ನು ಬಳಸಿಕೊಂಡು ಪ್ರಶಾಂತ ಆಶ್ರಮದಲ್ಲಿ ಯಾರಾದರೂ ಸ್ವರ್ಗದಲ್ಲಿದ್ದಂತೆ ಇರಬಹುದು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರು ಅತ್ಯಂತ ಪ್ರೀತಿ ಸೌಹಾರ್ದಗಳಿಂದ ಇಲ್ಲಿ ಬಾಳುತ್ತಿದ್ದಾರೆ. ಸಿಂಗರಾಜವೆಂಬುದು ಬಲಿಯ ರಾಜಧಾನಿ. ಈ ನಾಡಿನಲ್ಲಿ ಎಲ್ಲಿ ನೋಡಿದರಲ್ಲಿ ದೇವಾಲಯಗಳೇ! ದೇವಿ ಶ್ರೀ, ತ್ರಿಮೂರ್ತಿಗಳು, ಇವರ ದೇವತೆಗಳು. ಇಂದ್ರಲೋಕ ಇವರ ಸ್ವರ್ಗ. ತೀರ್ಥಸ್ನಾನವೆಂದರೆ ಇವರಿಗೆ ಹುಚ್ಚು. ಅಶ್ವತ್ಥವು ಇವರ ಪೂಜ್ಯ ವೃಕ್ಷ. ಧಾರ್ಮಿಕ ಕಾರ್ಯಗಳಲ್ಲಿ ಸಂಸ್ಕೃತ ಮಂತ್ರೋಚ್ಚಾರವಿದೆ. ಗಂಗಾ, ಯಮುನಾ, ಸರಸ್ವತೀ ಸ್ತೋತ್ರಗಳು ಅಲ್ಲಿ ಇನ್ನೂ ಪ್ರಚಾರದಲ್ಲಿವೆ. ಅಲ್ಲಿ ಧರ್ಮಾಂತರಗೊಳಿಸಹೋದವರು ವಿಫಲ ಪ್ರಯತ್ನರಾದರು.

ಬಲಿ ದ್ವೀಪವು ಆರ್ಯಸಂಸ್ಕೃತಿಯ ಐತಿಹಾಸಿಕ ಅವಶೇಷವೆನಿಸಿದೆ. ಈ ೨೦ ನೆಯ ಶತಮಾನದಲ್ಲೂ ಅಲ್ಲಿಯ ಶಾಂತ ಜೀವನವನ್ನು ಕಂಡರೆ ಯಾರಿಗಾದರೂ ಆಡಂಬರದ ಪಾಶ್ಚಾತ್ಯ ನಾಗರಿಕತೆ ಮತ್ತು ಶಾಂತಿರಹಿತವಾದ ಆ ಕೃತಕ ಜೀವನವನ್ನು ತಿರಸ್ಕರಿಸುವ ಬುದ್ಧಿ ಉತ್ಪನ್ನವಾಗದಿರದು. ಗಾಂಧಿಯವರಾದರೂ ಹಿಂದುಸ್ಥಾನವನ್ನು ಇಂಥದೇ ಒಂದು ಹಿಂದು ಧರ್ಮದ ಶಾಂತಿಪ್ರಕಾಶದಲ್ಲಿ ಜೀವನ ಸಾಗಿಸುವ ನಾಡನ್ನಾಗಿ ಮಾಡುವ ಆದರ್ಶವನ್ನಿಟ್ಟುಕೊಂಡಿದ್ದರು. ಅವರ ಕನಸು ಫಲಿಸೀತೇ?

ಮುದ್ದು ಮತ್ತು ಗುದ್ದು!

ಅಮೇರಿಕದ ವಿಜ್ಞಾನಿಯೊಬ್ಬನು ಚುಂಬನ ವಿಶ್ಲೇಷಣದಲ್ಲಿ ತೊಡಗಿದ್ದಾನೆ. ಅವನ ಪ್ರಕಾರ ನೀನು ಮುತ್ತ ಕೊಟ್ಟಾಗ ನಿನ್ನ ಮಿದುಳಿನ ಬುಡದಲ್ಲಿರುವ "ಪಿಟ್ಯುಟರಿ" ಗ್ರಂಥಿಯು ಒಂದು ವಿಧದ ರಸವನ್ನು ಸುರಿಸುತ್ತದೆ. ಇದು "ಅಡ್ರೀನಲ್" ಎಂಬ ಗ್ರಂಥಿಯನ್ನು ಕಾರ್ಯೋನ್ಮುಖ ಮಾಡುತ್ತದೆ. ಅದರಿಂದ ಕೆಲವು ರಾಸಾಯನಿಕ ದ್ರವ್ಯಗಳು ಉತ್ಪನ್ನವಾಗುತ್ತವೆ. ಬಿಳಿಯ ರಕ್ತಕಣಗಳು ಬಹುಬೇಗ ಸಂಚಲಿತವಾಗುತ್ತವೆ. ರಕ್ತದ ಒತ್ತಡ ಹೆಚ್ಚುತ್ತದೆ. ಶ್ವಾಸಕೋಶದ ನಾಳಗಳು ಹೆಚ್ಚು ಆಮ್ಲಜನಕಕ್ಕಾಗಿ ಉಬ್ಬಿ ಬಾಯ್ದೆಗೆಯುವವು. ಹೃದಯದ ಬಡಿತ ತೀವ್ರಗತಿಯನ್ನು ಹಿಡಿಯುತ್ತದೆ. ಆಗ ನಿನ್ನ ಶರೀರವು ಈ ಎಲ್ಲ ವಿಕಾರಗಳೂ ಮುದ್ದಿನಿಂದ ಉಂಟಾದವೋ? ಅಥವಾ ಯಾರದಾದರೂ ಗುದ್ದಿನಿಂದಲೋ ಎಂಬುದನ್ನು ತಿಳಿಯಲಾರದಂತೆ!

ಪಾತಾಳಭೋಗಿಗಳು

ತ್ರಿಪೋಲಿಟಾನಿಯಾದ ಟ್ರೊಗ್ಲೊಡೈಟರು ಸ್ವಾಭಾವಿಕವಾಗಿ ನೆಲದಡಿ ಮನೆಕಟ್ಟಿಕೊಂಡು ವಾಸಿಸುತ್ತಾರೆ. ಅವರ ಸಂಖ್ಯೆ ಸುಮಾರು ೫ ಸಾವಿರವಾಗಬಹುದು. ಅಲ್ಲಿಯ ಮನೆಗಳಿಗೆ ಉಪ್ಪರಿಗೆಗಳಿವೆ. ಬಾಗಿಲು ಕಿಟಕಿಗಳಿವೆ. ಒಂದೊಂದು ಮನೆ ೩೦ ಅಡಿ ಎತ್ತರ ಮತ್ತು ೩೦ ಅಡಿ ಚಚ್ಚೌಕವಾಗಿದೆ.

ಈ ಟ್ರೊಗ್ಲೊಡೈಟರಲ್ಲಿ ಅರಬರಿದ್ದಾರೆ, ಯೆಹೂದಿಗಳೂ ಇದ್ದಾರೆ. ಸಾವಿರಾರು ವರ್ಷಗಳಿಂದ ಅವರು ಗುಹಾವಾಸಿಗಳಾಗಿ ಉಳಿದವರು. ಇವರು ವ್ಯಾಪಾರವನ್ನೂ ಜಮೀನಾದ ಬೆಳೆಯನ್ನೂ ಬಲ್ಲರು. ಆ ಮನೆಗಳು ಬೇಸಿಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಬೆಚ್ಚಗೂ ಇರುವುವು. ನಾಗರಿಕರು ಕೂಡ ಆಟಂ ಬಾಂಬಿನ ಈ ಯುಗದಲ್ಲಿ ಅದರಿಂದ ರಕ್ಷಿಸಿಕೊಳ್ಳಲು ಗುಹಾವಾಸವನ್ನು ಕೈಕೊಳ್ಳುತ್ತಾರೆ. ಅಂದ ಮೇಲೆ ನಾಗರಿಕತೆ ಕಡಿಮೆಯಿದ್ದಾಗಲೂ ಅತಿಯಾದಾಗಲೂ ಇದೇ ಪ್ರಕಾರ ಒಂದೇ ಮಟ್ಟದ ಜೀವನಕ್ಕೆ ಬಂದು ಮುಟ್ಟುತ್ತಾರೆಂದು ಇದರಿಂದ ಹೇಳಬಹುದಲ್ಲವೆ?

ಅಮೇರಿಕದಲ್ಲಿ ಸಂತಾನ ನಿರೋಧದ ಗೊತ್ತುವಳಿಯೊಂದು ಶಾಸನ ಸಭೆಗೆ ಬಂದಾಗ ಬೋಸ್ಟನ್ನಿನ ಡಾ. ಫ್ರೆಡ್‌ರಿಕ್ ಕಾರ್ಪೆಂಟರರು—ನಾನು ಹುಟ್ಟುವದಕ್ಕೆ ಮೊದಲು ಇಂಥದೊಂದು ಕಾಯಿದೆ ಅಮಲಿನಲ್ಲಿದ್ದಿದ್ದರೆ ನಾನಿಂದು ಇಲ್ಲಿ ತಾಯಿಯೇ ಇಲ್ಲದೆ ನಿಂತಿರಬೇಕಾಗಿತ್ತು. ಅವಳು ಅನಳ ತಂದೆಯ ೧೪ ಮಕ್ಕಳಲ್ಲಿ ೧೨ ನೆ ಮಗುವಳು ಎಂದರಂತೆ.

ಹೈದರಾಬಾದದ ಸೇರ್ಪಡೆ ಇಲ್ಲವೆ ವಿನಾಶ

ಪಂ. ನೆಹರುರ ಗರ್ಜನೆ

ಮದ್ರಾಸದಲ್ಲಿ ತಾ ೨೫ ರಂದು ಸಂಜೆಗೆ ಸೇರಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಮಾತನಾಡುತ್ತ ಹೈದರಾಬಾದದ ಬಗ್ಗೆ ಹೀಗೆ ಹೇಳಿದರು:

ಹೈದರಾಬಾದದ ಅಂತರಂಗದಲ್ಲಿದ್ದ ವಿಷಮತೆಯ ಅರಿವು ನಮಗೆ ಸಂಪೂರ್ಣವಿದೆ. ಈ ಬಗ್ಗೆ ನಾವೇನು ಉಪಾಯ ಹೂಡಿದ್ದೇವೆಂಬುದನ್ನು ಬಹಿರಂಗವಾಗಿ ಹೇಳಲು ಬರುವಂತಿಲ್ಲ. ಅಲ್ಲಿ ಸೈನ್ಯ ಚಟುವಟಿಕೆಯು ಅವಶ್ಯವೆಂದು ಕಂಡುಬರುತ್ತಲೇ ನಾವು ಅದನ್ನು ಕೈಕೊಳ್ಳುವೆವು. ಹೈದರಾಬಾದದಲ್ಲಿ ಈಗ ನಡೆದುದು ಪುಂಡರ ರಾಜ್ಯವೆಂಬಲ್ಲಿ ಸಂದೇಹವೇ ಉಳಿದಿಲ್ಲ. ಇನ್ನು ಹೈದರಾಬಾದದ ಬಗ್ಗೆ ಯುದ್ಧ ಯುದ್ಧವೆಂಬ ಮಾತು ಬಹಳ ಕೇಳಿ ಬರುತ್ತದೆ. ಸ್ವತಂತ್ರ ರಾಷ್ಟ್ರಗಳಲ್ಲಿ ಮಾತ್ರ ಯುದ್ಧ ಸಂಭವಿಸಬಲ್ಲದು. ಹೈದರಾಬಾದವು ಸ್ವತಂತ್ರ ರಾಷ್ಟ್ರವೆಂದು ಅಂತರ ರಾಷ್ಟ್ರೀಯ ಮನ್ನಣೆಯಿಲ್ಲವೆಂದ ಮೇಲೆ ಹೈದರಾಬಾದನ ಪುಂಡಾಟಿಕೆ ಹತ್ತಿಕ್ಕುವ ಕಾರ್ಯಕ್ಕೆ ಯುದ್ಧವೆಂಬ ದೊಡ್ಡ ಹೆಸರು ಕೊಡಲು ನಾನೇನು ಸಿದ್ಧನಿಲ್ಲ. ಆದ್ದರಿಂದ ಯುದ್ಧದ ಬಗ್ಗೆ ತಲೆಕೆಡಿಸಿಕೊಳ್ಳಬೇಡಿರಿ. ಹೈದರಾಬಾದವೀಗ ಹಿಂದುಸ್ಥಾನದಲ್ಲಿ ಸಂಪೂರ್ಣವಾಗಿ ಸೇರಬೇಕು ಇಲ್ಲವೆ ಸಂಪೂರ್ಣ ನಿರ್ನಾಮವಾಗಿ ಹೋಗಬೇಕು. ಇವೆರಡಲ್ಲದೆ ಅನ್ಯಮಾರ್ಗವೇ ಇಲ್ಲ. ಈ ಸಂದರ್ಭದಲ್ಲಿ ಹಿಂದುಸ್ಥಾನಕ್ಕೆ ದ್ರೋಹ ಬಗೆದು ಹೈದರಾಬಾದಕ್ಕೆ ಸಹಾನುಭೂತಿ ತೋರುವ ಅಥವಾ ಗುಪ್ತ ಸಹಾಯ ಸಲ್ಲಿಸುವ ವ್ಯಕ್ತಿಗಳಾಗಲೀ ಸರಕಾರೀ ಅಧಿಕಾರಿಗಳಾಗಲೀ ಬಹಳ ಎಚ್ಚರಿಕೆಯಿಂದಿರಬೇಕು. ಅವರು ತಮ್ಮ ಪ್ರಮಾದಕ್ಕೆ ಅತ್ಯುಗ್ರ ದಂಡನೆಗೆ ಗುರಿಯಾಗಬೇಕಾಗುವದು. ಮದ್ರಾಸದಲ್ಲಿ ಹಳೆಯ ಮುಸ್ಲಿಂ ಲೀಗಿನ ನೀತಿಯನ್ನೇ ಅನುಸರಿಸಿ ಜಾತಿದ್ವೇಷದ ಜ್ವಾಲೆಯನ್ನು ಹೊತ್ತಿಸುವ ಉದ್ದಾಮ ಪತ್ರಿಕೆಗಳಿದ್ದದ್ದು ಕಂಡು ನನಗೆ ಆಶ್ಚರ್ಯವಾಗಿದೆ. ಇಂತಹರಿಗೆ ಹಿಂದುಸ್ಥಾನದಲ್ಲಿ ಇಂಬಿಲ್ಲ. ಅವರು ಬೇಕಾದರೆ ಪಾಕಿಸ್ತಾನಕ್ಕೆ ಹೋಗಲಿ. ಜಾತ್ಯತೀತ ರಾಷ್ಟ್ರ ಕಟ್ಟಲು ನೆರವಾಗುವವರು ಮಾತ್ರ ಇಲ್ಲಿರಲಿ ಎಂದು ಮೊದಲಾಗಿ ಹೇಳಿದರು.

ಭಾರತದ ವಿಮಾನ ಬಲ

ಪೂರ್ವ ಗೋಲಾರ್ಧಕ್ಕೆ ಅದೇ ಮಿಗಿಲು

ಭಾರತ ಸರಕಾರದವರು ಒಂದು ಯೋಜನೆ ಸಿದ್ಧಪಡಿಸಿ, ಹಿಂದೀ ವಿಮಾನ ಪಡೆಯು ಪೂರ್ವ ಗೋಲಾರ್ಧಕ್ಕೇ ಪ್ರಬಲ ಪಡೆಯಾಗುವಂತೆ ಕೆಲವೊಂದು ಬಾಂಬರ ಮತ್ತು ಜೆಟ ವಿಮಾನ ಪಡೆಗಳನ್ನು ಹೆಚ್ಚಿಸಲಿರುವರೆಂದು ತಿಳಿಯುತ್ತದೆ. ಹಿಂದುಸ್ಥಾನವು ಸ್ವಾತಂತ್ರ್ಯ ಪಡೆದ ದಿನ ೮ ಫಾಯಟರ ಮತ್ತು ಒಂದು ಸಾರಿಗೆ ವಿಮಾನಪಡೆಗಳಿದ್ದವು. ಹೊಸ ಯೋಜನೆಯ ಮೇರೆಗೆ ೧೨ ಫಾಯಟರ ವಿಮಾನ ಪಡೆಗಳೂ ಒಂದು ಜೆಟ ವಿಮಾನ ಪಡೆಯೂ ಒಂದು ಫೋಟೋ ಫ್ಲಾಯಿಟ ಪಡೆಯೂ ಒಂದು ನಿರೀಕ್ಷಣೆಯ ಪಡೆಯೂ ಸಿದ್ಧವಾಗಲಿವೆ. ೫ ವರ್ಷಗಳಲ್ಲಿ ಹಿಂದೀ ವಿಮಾನ ಪಡೆಗಳ ಸಂಖ್ಯೆ ೧೫ ಕ್ಕೆ ಏರಬಹುದು. ಇದಕ್ಕೆ ತಕ್ಕಂತೆ ವೈಮಾನಿಕರನ್ನು ಮತ್ತು ವೈಮಾನಿಕ ಅಧಿಕಾರಿಗಳನ್ನು ತರಬೇತುಗೊಳಿಸುವ ಶಿಕ್ಷಣ ವ್ಯವಸ್ಥೆಯನ್ನು ಮಾಡಲಾಗುವದು. ಹಿಂದೀಯರನ್ನೇ ವಿಮಾನ ಪಡೆಗಳ ಅಧಿಕಾರಿಗಳನ್ನಾಗಿ ನೇಮಿಸಲಾಗುವದು. ವಿಮಾನ ಶಿಕ್ಷಣಕ್ಕೆ ಉಮೇದವಾರರನ್ನು ಭರತಿ ಮಾಡಲು ನುರಿತ ವೈಮಾನಿಕ ಅಧಿಕಾರಿಗಳ ಒಂದು ಮಂಡಲ ನಿಯಮಿಸಲಾಗಿದೆ. ಹಿಂದುಸ್ಥಾನದಲ್ಲಿ ೮ ವಿಭಾಗಗಳನ್ನು ಮಾಡಲಾಗಿದ್ದು ಪ್ರತಿ ವಿಭಾಗದಲ್ಲಿ ಒಬ್ಬೊಬ್ಬ ಅಧಿಕಾರಿಯು ಉಮೇದವಾರರನ್ನು ಭರತಿ ಮಾಡಿಕೊಳ್ಳುವನು.

ಮದ್ರಾಸ ಮೇಲಿನಲ್ಲಿ ಒಂದನೆ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದ ಒಬ್ಬ ಡೆನಿಶ್ ನಾಗರಿಕನ ಹತ್ತಿರ ೩ ವಾಯರಲೆಸ್ ಯಂತ್ರಗಳಿದ್ದುದನ್ನು ಸೂಲ್ಲಾಪುರದ ರೇಲ್ವೆ ಪೋಲೀಸರು ವಶಪಡಿಸಿಕೊಂಡರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨೯

ಮುಂಬಯಿ ಶೇರ ಪೇಟೆಯಲ್ಲಿ ಹೈದರಾಬಾದ ಪರಿಸ್ಥಿತಿಯಿಂದ ಅನಿಶ್ಚಿತತೆ ಮೂಡಿದ್ದರೂ ಟಾಟಾ ಸ್ಟೀಲ ಶಾಲುಗಳ ಮೇಲೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಡಿವಿಡೆಂಡ್ ಸಾರಲ್ಪಟ್ಟಿದ್ದರಿಂದಲೂ ಉಕ್ಕಿನ ಬೆಲೆ ಏರಬಹುದೆಂಬ ಆಶೆಯಿಂದಲೂ ಬಟ್ಟೆಯ ಪೂರ್ಣ ನಿಯಂತ್ರಣವಾಗುವದಿಲ್ಲೆಂಬ ಭರವಸೆಯಿಂದಲೂ ಸ್ವಲ್ಪ ಸುಧಾರಣೆ ಕಂಡುಬಂತು. ನಿನ್ನಿನ ಕೊನೆಯ ದರಗಳು ಇಂತಿದ್ದವು.

ಜವಳಿ

ಅಹಮದಾಬಾದ ಅಡ್ವಾನ್ಸ	೨೬೫—೦—೦
ಬಾಂಬೆ ಡಾಯಿಂಗ್	೧೯೯೭—೮—೦
ಸೆಂಟ್ರಲ ಇಂಡಿಯಾ	೨೯೭—೦—೦
ಸೆಂಚುರಿ	೫೩೨—೮—೦
ಗೋಕಾಕ	೩೧೫—೮—೦
ಕೋಹಿನುರು	೪೩೨—೦—೦
ಫಿನಿಕ್ಸ	೪೪೬—೪—೦
ಸ್ವದೇಶಿ	೬೧೮—೦—೦

ಇತರ

ಬೇಲಾಪುರ ಸಕ್ಕರೆ	೨೯೦—೦—೦
ಬಾಂಬೇ ಬರ್ಮಾ	೪೨೨—೮—೦
ಸಿಂಧ್ಯ ಸ್ಟೀಮ	೨೬—೧೨—೦
ಟಾಟಾ ಸ್ಟೀಲ ಡೆಫರ್ಡ	೧೬೪೨—೮—೦
ಇಂಡಿಯನ್ ಆಯರ್ನ	೨೬—೦—೦
ಅಸೊ. ಸಿಮೆಂಟ್ಸ	೧೬೭—೮—೦
ಸೆಂಟ್ರಲ ಬ್ಯಾಂಕ್	೯೦—೮—೦
ಇಂಪೀರಿಯಲ್ ಬ್ಯಾಂಕ ಫೂರ್ಣ	೨೦೭೦.೦—೦
ಇಂಡಿಯನ್ ಬ್ಯಾಂಕ	೨೧೧.೮.೦
ರಿಝರ್ವ ,,	೧೧೩—೦—೦

ಚಿನ್ನ--ಬೆಳ್ಳಿ

ಬಿಸಿವಾರ ಕಟ್ಟೆಯಲ್ಲಿ ಚಿನ್ನ ಬೆಳ್ಳಿಗಳೆರಡೂ ಅಲ್ಪಸ್ವಲ್ಪ ಏರಿಳಿತವನ್ನು ಕಾಣುತ್ತಿವೆ. ಕಳೆದ ವಾರ ಚಿನ್ನ ಪೇಟೆಗೆ ಬರುವದು ಹೆಚ್ಚಾಗಿ ಅದು ಇಳಿದುಹೋಯಿತು. ಈ ವಾರ ಅದು ೧೧೩—೦—೦ ವಿುಕ್ಕಿ ಹೋದರೂ ತಿರುಗಿ ಸ್ವಲ್ಪ ಇಳಿಯಿತು. ಬೆಳ್ಳಿಯೂ ಕೆಲವು ಆಣೆಗಳನ್ನು ಕಳೆದುಕೊಂಡಿದೆ. ಇಂದಿನ ಬೆಲೆಗಳು ಹೀಗಿದ್ದವು:

ತಯಾರಿ ಚಿನ್ನ	೧೧೨—೧೫—೦
ವಾಯದಾ ಚಿನ್ನ	೧೧೨—೭—೦
ಸಾವರೀನ	೭೪—೧೨—೦
ತಯಾರಿ ಬೆಳ್ಳಿ	೧೭೫—೦—೦
ವಾಯದಾ	೧೭೪—೧೧—೦
ಚೇಂಬರ	೧೭೪.೧.೦

ಅರಳೆ

ಅರಳೆ ಬೆಲೆಯಲ್ಲಿ ಈ ವಾರ ಇನ್ನಷ್ಟು ಇಳಿತಾಯ ಕಂಡು ಬಂತು. ಮಾರುವವರ ಭರ ಹೆಚ್ಚಾಯಿತು. ಹೊರಗಿಂದ ಅರಳೆ ಬರಬಹುದೆಂಬ ಸಂಶಯವೂ ಇದಕ್ಕೆ ಕಾರಣವಾಯಿತು. ಸೆಪ್ಟಂಬರ ವಾಯದೆ ಇಂದು ೬೨೨—೦—೦ ವರೆಗೂ ಇಳಿದು ತುಸು ಸುಧಾರಿಸಿ ೬೨೯.೦.೦ ಕ್ಕೆ ಹೋಯಿತು.

ಎಣ್ಣೆಕಾಳು

ಶೇಂಗಾ	೧೬೮.೧೨.೦
ಅಗಸಿ	೨೮—೨.೦
,, (ಹೊಸ)	೨೮—೯—೦
,, ಎಣ್ಣೆ	೧೬—೧೦—೦

ಶಿವಮೊಗ್ಗೆ ಅಡಿಕೆ

ತಾ. ೨೯

ದೇಶಾವರ ನಂ. ೧ ಮಣ ೧ ಕ್ಕೆ	೩೨.೩೬
,, ,, ೨	೩೦.೩೨
ತೊರೆಸಾಲು	೨೭.೩೦
ರಾಶಾ ಅಲವು	೩೦.೩೪
ಬೆಟ್ಟೆ	೧೭.೨೦
ಬೆಟ್ಟೆ ವಂತಿ	೨೦.೨೧॥

ಬೇಡಿಕೆ ವಿಶೇಷ ಇಲ್ಲ.

ಹುಬ್ಬಳ್ಳಿ

ಜಯವಂತ ಹತ್ತಿ	೧	೪೨೫—೪೩೦
,,	೨	೪೧೦—೪೨೦
,,	೩	೩೯೦—೪೦೫
ಅಪಲಂಡ ಹತ್ತಿ	೧	೪೨೦—೪೩೦
ಜಿನ		೨೯೦—೩೦೦
ಅ. ಡಬಲರೋಲ		೨೮೫—೨೯೫
ಸಾಜಿನ		೨೬೦.೨೭೦
ಜ. ಹತ್ತಿಕಾಳು		೮॥ ಪೌಂ.
ಅ. ಹತ್ತಿಕಾಳು		೮॥ ,,

ನಾಲ್ಕು ಮಾತು — ರಂಗನಾಥ ದಿವಾಕರ

೧ ಆಧ್ಯಾತ್ಮ ವಿದ್ಯಾಮಂದಿರ

ಸಂಪ್ರದಾಯವಿರಹಿತವಾದ ಅಥವಾ ಸಂಪ್ರದಾಯಾತೀತವಾದ ಅಧ್ಯಾತ್ಮ ವಿದ್ಯಾ ಕೇಂದ್ರವೊಂದನ್ನು ಧಾರವಾಡ, ಹುಬ್ಬಳ್ಳಿ, ಗದಗ ಈ ಮೂರು ಊರುಗಳಲ್ಲಿ ಕೂಡಿ ಸ್ಥಾಪಿಸುವದು ಈಗಿನ ಸಂದರ್ಭದಲ್ಲಿ ಯೋಗ್ಯವಾಗಬಹುದೆಂಬ ಕಲ್ಪನೆಗೆ ಈಗ ಚಾಲನೆ ಸಿಕ್ಕಿದೆ. ಪಂಜಾಬದ ಪ್ರಸಿದ್ಧ ತತ್ವವೇತ್ತರಾದ ಪ್ರೊ. ರಾನಡೆಯವರು ಈ ಕಲ್ಪನೆಯನ್ನು ಸ್ವಾಗತಿಸಿದ್ದಾರೆ. ಈ ಕಲ್ಪನೆಗೆ ಯಾವ ಬಗೆಯ ಹಾಗೂ ಯಾವ ಬಗೆಯಿಂದ ಮೂರ್ತಸ್ವರೂಪವನ್ನು ಕೊಡಬೇಕು ಎಂಬುದನ್ನು ಈ ವಿಷಯದಲ್ಲಿ ಅಭಿರುಚಿಯುಳ್ಳವರೆಲ್ಲರೂ ವಿಚಾರಿಸುವದು ಯೋಗ್ಯವಾಗುವದು. ಅಧ್ಯಾತ್ಮ ವಿದ್ಯೆಯ ವಿಚಾರ, ಚರ್ಚೆ, ಭಾಷಣಾದಿಗಳ ಮೂಲಕ ಆ ವಿಚಾರಗಳ ಉಚ್ಚಾರ, ಲೇಖಾದಿಗಳ ಮೂಲಕ ಅಧ್ಯಾತ್ಮ ವಿದ್ಯೆಯ ಪ್ರಚಾರ, ಅಧ್ಯಾತ್ಮ ಸಾಧನಗಳ ಆಚಾರ ಇವೇ ಮೊದಲಾದವು ಈ ಕೇಂದ್ರದ ಉದ್ದೇಶಗಳಾಗಬಲ್ಲವು.

× × ×

ಜಡವಾದವು ನಮ್ಮನ್ನು ಒಂದತ್ತ ಎಳೆಯುತಿದೆ. ಜಗತ್ತು "ಕಾಮಹೈತುಕ"ವಾದುದು, ಇಂದ್ರಿಯ ಭೋಗಕ್ಕಿಂತ ಜಗತ್ತಿನಲ್ಲಿ ಹೆಚ್ಚಿನದೇನೂ ಇಲ್ಲ ಎಂದು ಹೇಳುವುದೇ ಜಡವಾದ. ಆದರೆ ವಿಚಾರವಂತನಿಗೆ ಇಷ್ಟರಿಂದ ಸಮಾಧಾನವಾಗುವುದಿಲ್ಲ. ಇಂದ್ರಿಯಭೋಗಕ್ಕಿಂತ ಹೆಚ್ಚಿನ ಆನಂದವೊಂದಿದೆ ಎಂಬ ಅನುಭವವು ಮನುಷ್ಯನಿಗೆ ಬರುವದು. ಉದಾ: ಜಿಲೇಬಿ ತಿಂದು ಆಗುವ ಆನಂದ, ಒಳ್ಳೆ ಪುಸ್ತಕವನ್ನು ಓದಿ ಆಗುವ ಆನಂದ, ಸುಂದರ ಗಾಯನ ಕೇಳಿ ಆಗುವ ಆನಂದ, ಅನ್ಯರ ಕಲ್ಯಾಣ ಮಾಡಿ ಆಗುವ ಆನಂದ, ಪರಮಾತ್ಮ ಚಿಂತನದಿಂದ ಆಗುವ ಆನಂದ, ಸಮಾಧಿ ಸ್ಥಿತಿಯಲ್ಲಿ ಆಗುವ ಆನಂದ ಇವೆಲ್ಲವುಗಳಲ್ಲಿ ಭೇದವಿದೆ ಎಂಬುದು ಅನುಭವದ ಮಾತು. ಎಲ್ಲಕ್ಕೂ ಹೆಚ್ಚಿನ ನಿರಾಲಂಬ ಆನಂದವನ್ನು ಪಡೆಯುವುದೆ ಅಧ್ಯಾತ್ಮದ ಗುರಿಯು.

× × ×

ಜಡವಾದದ ದೃಷ್ಟಿಯಿಂದ ಜಗತ್ತಿನ ಕಡೆಗೆ ನೋಡಿದರೆ ಜೀವನ ಮೂಲ್ಯವು (ವ್ಯಾಲ್ಯೂಜ) ಬೇರೆ ಕಾಣುವದು, ಅಧ್ಯಾತ್ಮ ದೃಷ್ಟಿಯಿಂದ ನೋಡಿದರೆ ಬೇರೆ ಕಾಣುವದು. ಜಡವಾದವು ನಮ್ಮನ್ನು ಇಂದ್ರಿಯಭೋಗದತ್ತ, ಆ ಭೋಗಗಳನ್ನು ದೊರಕಿಸುವತ್ತ, ಆ ಭೋಗಗಳನ್ನು ದೊರಕಿಸುವದರಲ್ಲಿ ಯಾರಾದರೂ ಅಡ್ಡಿ ಮಾಡಿದರೆ ಅವರನ್ನು ದಂಡಿಸುವತ್ತ ಎಳೆದೊಯ್ಯುವದು. ಅಧ್ಯಾತ್ಮವು ನಮ್ಮನ್ನು ಆತ್ಮಾನಂದದತ್ತ, ತ್ಯಾಗದತ್ತ, ಪರೋಪಕಾರದತ್ತ, ಅಹಿಂಸೆಯತ್ತ ಒಯ್ಯುವದು, ಜಡವಾದವು ಆಸುರೀ ಸಂಪತ್ತನ್ನು ಸಂಗ್ರಹಿಸುವದು, ಅಧ್ಯಾತ್ಮವು ದೈವೀ ಸಂಪತ್ತನ್ನು ಕೂಡಿ ಹಾಕುವದು. (ಗೀತೆಯ ೧೬ ನೇ ಅಧ್ಯಾಯ ನೋಡಬೇಕು). ಜಗತ್ತಿನಲ್ಲಿ ಅಧ್ಯಾತ್ಮವೆಂಬುದೊಂದು ತತ್ವವಿದೆ ಎಂಬ ಭರವಸೆ ಇದ್ದವರು ಅಧ್ಯಾತ್ಮ ವಿದ್ಯಾ ಮಂದಿರದಂಥ ಕೇಂದ್ರವನ್ನು ಸ್ಥಾಪಿಸುವತ್ತ ಲಕ್ಷ ಕೊಡುವುದು ಅವಶ್ಯವು.

× × ×

ಭೋಗಕ್ಕಿಂತ ತ್ಯಾಗದಲ್ಲಿ ಹೆಚ್ಚು ಆನಂದವಿದೆ ಎಂಬ ಪ್ರತೀತಿ ಇದ್ದವರೆ ಯೋಗಮಾರ್ಗವನ್ನು ಹಿಡಿದು ಅಧ್ಯಾತ್ಮವನ್ನು ಸಾಧಿಸಬಲ್ಲರು.

೨ ಉತ್ತಮ ಗ್ರಂಥನಿರ್ಮಾಣ

ಉತ್ತಮ ಗ್ರಂಥ ನಿರ್ಮಾಣದ ಅವಶ್ಯಕತೆ ಹಿಂದುಸ್ತಾನದ ಎಲ್ಲ ಭಾಷೆಗಳಲ್ಲಿಯೂ ಇದೆ ಎಂದು ಹೇಳಬಹುದು. ಕನ್ನಡದಲ್ಲಿ ಆ ಅವಶ್ಯಕತೆ ವಿಶೇಷ. ಈಗ ಮದ್ರಾಸ ಸರಕಾರದವರು ತೆಲುಗು, ತಮಿಳು, ಕನ್ನಡ, ಮಲಿಯಾಳಿ ಈ ನಾಲ್ಕು ಭಾಷೆಗಳಲ್ಲಿ ನಿರ್ಮಾಣವಾಗತಕ್ಕ ಗ್ರಂಥಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಹಲವು ಪಾರಿತೋಷಕಗಳನ್ನು ಕೊಡುವ ನಿಶ್ಚಯ ಮಾಡಿದ್ದಾರೆ. ಆ ಪ್ರಕಾರ ೧೯೪೩ ರಿಂದ ಈಚೆಗೆ ಪ್ರಕಟವಾದ ಐತಿಹಾಸಿಕ, ಕಾವ್ಯವಿಷಯಕ, ಶಾಸ್ತ್ರೀಯ, ಬಾಲೋಪಯೋಗಿ ಮುಂತಾದ ಕನ್ನಡ ಪುಸ್ತಕಗಳಲ್ಲಿ ಉತ್ತಮವಿದ್ದುದಕ್ಕೆ ೨೫೦ ರೂಪಾಯಿ ಪಾರಿತೋಷಕ ಕೊಡುವದನ್ನು ಗೊತ್ತುಮಾಡಿದ್ದಾರೆ. ಆದರೆ ಆ ಕೆಲಸವನ್ನು ಅವರು ಇಡೀ ಕರ್ನಾಟಕಕ್ಕೆ ಸಾಮಾನ್ಯವಾದ ಕನ್ನಡ ಸಾಹಿತ್ಯ ಪರಿಷತ್ತಿಗಾಗಲಿ, ವಿದ್ಯಾವರ್ಧಕ ಸಂಘಕ್ಕಾಗಲಿ, ಮುಂಬಯಿ ವಿಶ್ವವಿದ್ಯಾಲಯಕ್ಕಾಗಲಿ ವಹಿಸಿಕೊಡಬೇಕಿತ್ತು. ಅದನ್ನು ಬಿಟ್ಟು ಮುದ್ರಾಸ ಸರಕಾರದವರು ಪುಸ್ತಕ ಪರೀಕ್ಷೆ ಹಾಗೂ ಪಾರಿತೋಷಕ ವಿತರಣೆಯ ಮಹತ್ವದ ಕೆಲಸವನ್ನು ಮದ್ರಾಸದಲ್ಲಿಯ ಒಂದು ಚಿಕ್ಕ ಕನ್ನಡ ಸಂಘಕ್ಕೆ ಕೊಟ್ಟಿರುವರು. ಮುಂದಿನ ವರುಷವಾದರೂ ಈ ಮಾತಿನಲ್ಲಿ ಸುಧಾರಣೆಯಾಗಬಹುದೆಂದು ನಾನು ಆಶಿಸುವೆನು.

× × ×

ಇನ್ನು ಮುಖ್ಯ ವಿಷಯವೆಂದರೆ ಈ ಬಗೆಯ ಪಾರಿತೋಷಕಗಳಿಂದ ಉತ್ತಮಗ್ರಂಥಗಳು ನಿರ್ಮಾಣವಾಗಬಲ್ಲವೆ? ಇಲ್ಲವೆಂದೇ ಸ್ಪಷ್ಟವಾಗಿ ಉತ್ತರ ಕೊಡಬೇಕಾಗುವದು. ಒಂದು ದೃಷ್ಟಿಯಿಂದ ನೋಡಿದರೆ ಅಂತರಿಕ ಸ್ಫೂರ್ತಿ ಪ್ರೇರಣೆಗಳಿಂದಲೆ ಶ್ರೇಷ್ಠಗ್ರಂಥಗಳ ನಿರ್ಮಾಣವಾಗುವದು. ಆದರೆ ನಿರ್ಮಾಣವಾದ ಉತ್ತಮಗ್ರಂಥಗಳಿಗೆ ಪಾರಿತೋಷಕಗಳಿಂದ ಸಹಾಯವಾಗುವದೆಂಬಲ್ಲಿ ಸಂಶಯವಿಲ್ಲ. ಈ ವಿಷಯದಲ್ಲಿ ನಾನು ಎರಡು ಉದಾಹರಣೆಗಳನ್ನು ಕೊಡಬಲ್ಲೆ. ನೋಬೆಲ್ ಪ್ರಾಯಿಜ ಎಂಬುದು ಜಗತ್ತಿನಲ್ಲಿ ಎಲ್ಲಕ್ಕೂ ದೊಡ್ಡ ಸಾಹಿತ್ಯ ಪಾರಿತೋಷಕ. ಅದರ ಬೆಲೆ ಒಂದು ಲಕ್ಷ ರೂಪಾಯಿಗೆ ಮಿಕ್ಕಿದ್ದು. ಅದು ಬರ್ನಾರ್ಡ ಶಾ ಎಂಬ ಪ್ರಸಿದ್ಧ ಐರಿಶ್ ಗ್ರಂಥಕಾರನಿಗೆ ದೊರೆತಾಗ ಅದನ್ನು ನಿರಾಕರಿಸುತ್ತ ಅವರು "ನಾನು ಉಪವಾಸ ಸಾಯುತಿರುವಾಗ ಒಂದು ಕಾಸು ಕೊಡದವರು ಈಗ ನಾನು ಸಿರಿವಂತನಾದಾಗ ಈ ಹಣ ಕೊಟ್ಟರೆ ಇದರಿಂದ ನನಗೇನು?" ಅದರಂತೆ ಅಮೇರಿಕೆಯಲ್ಲಿ ಪುಲಿಟ್ಝರ ಎಂಬುದೊಂದು ಸಾಹಿತ್ಯ ಪಾರಿತೋಷಕವಿದೆ. ಅದು ಅಪ್ಟನ್ ಸಿಂಕ್ಲೇಯರ ಎಂಬ ಪ್ರಸಿದ್ಧ ಲೇಖಕನಿಗೆ ಮೊನ್ನೆಮೊನ್ನೆ ಕೊಡಲಾಯಿತು. ಅವರ ಸಮಾಜವಾದೀ ವಿಚಾರಗಳ ಮೂಲಕ ಅದು ಈ ವರೆಗೆ ಕೊಡಲಾಗಿದ್ದಿಲ್ಲವಂತೆ. ಏನೇ ಇರಲಿ ಸಿಂಕ್ಲೇರರಂಥ ಪ್ರತಿಭಾಸಂಪನ್ನ ಲೇಖಕರಿಗೆ ಅಂಥ ಪಾರಿತೋಷಕದಿಂದೇನು?

× × ×

ತಾತ್ಪರ್ಯವೇನಂದರೆ ಪ್ರತಿಭೆ ಪಾರಿತೋಷಕಾಪೇಕ್ಷೆಯಲ್ಲ. ಪಾರಿತೋಷಕವೆ ಪ್ರತಿಭಾಪೇಕ್ಷೆಯಾಗಿರಬೇಕು. ಪ್ರತಿಭೆಗೆ ಬೇರೆ ಬಗೆಯ ಗೊಬ್ಬರದ ಅಪೇಕ್ಷೆಯಿದೆ. ಅತ್ಯಂತ ತೇಜಸ್ವಿ ಜೀವ, ಕಷ್ಟನಷ್ಟಗಳ ಅನುಭವದಿಂದ ತುಂಬಿದ ಜೀವನ, ಆ ಅನುಭವವನ್ನು ವ್ಯಕ್ತಗೊಳಿಸುವ ಆತುರ ಇವೆಲ್ಲ ಇದ್ದಾಗ ಪ್ರತಿಭೆ ತನ್ನ ಕೆಲಸ ಮಾಡಬಲ್ಲದು.

× × ×

ಏನೇ ಇರಲಿ. ಇಂಥ ಪಾರಿತೋಷಕಗಳು ಅನೇಕ ಸಾಮಾನ್ಯ ಲೇಖಕರಿಗಾದರೂ ಸಹಾಯಕವಾಗಬಲ್ಲವು. ಆದರೆ ಈ ಕೆಲಸವನ್ನು ಎಲ್ಲ ವಿಶ್ವವಿದ್ಯಾಲಯಗಳು, ಎಲ್ಲ ಸರಕಾರದವರು, ಮುನಸಿಪಾಲ್ಟಿ ಲೋಕಲ್ ಬೋರ್ಡುಗಳು ಮಾಡುವದು ಅವಶ್ಯ. ಒಳ್ಳೇ ಗ್ರಂಥನಿರ್ಮಾಣದತ್ತ ಯಾರೂ ಸಾಕಷ್ಟು ಲಕ್ಷಕೊಡುತಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸಿರುವೆ.

೩. ಪ್ರಾಂತರಚನಾ ಪ್ರಶ್ನಾವಲಿ

ಭಾಷಾನುಗುಣ ಪ್ರಾಂತ ರಚನಾ ಸಮಿತಿಯವರು ತಮ್ಮ ಕೆಲಸವನ್ನು ಪ್ರಾರಂಭಿಸಿ ಪ್ರಶ್ನಾವಲಿ ಹೊರಡಿಸಿ ಅದರ ೨೦೦೦ ಪ್ರತಿಗಳನ್ನು ಆಯಾ ಪ್ರಾಂತದ ಹಾಗೂ ಇತರ ಮಹತ್ವದ ಗೃಹಸ್ಥರಿಗೆ ಕಳಿಸಿರುವರು. ಈ ವಿಷಯದ ಸಾಂಗೋಪಾಂಗ ಹಾಗೂ ಸಾದ್ಯಂತ ವಿಚಾರ ಮಾಡಲು ಅವಶ್ಯವಿದ್ದ ಎಲ್ಲ ಪ್ರಶ್ನೆಗಳನ್ನೂ ಅವರು ಕೇಳಿದ್ದಾರೆ. ವಿವಿಧ ದೃಷ್ಟಿಯಿಂದ ಈ ಪ್ರಶ್ನೆಯ ಆಳವಾದ ವಿಚಾರ ನಡೆಸಿ ಅವರು ಇತ್ಯರ್ಥ ಮಾಡಬಹುದೆಂದು ಈ ಪ್ರಶ್ನಮಾಲಿಕೆಯಿಂದ ಗೊತ್ತಾಗುವದು.

× × ×

ಆ ಸಮಿತಿಯವರು ಈ ಭಾಗದಲ್ಲಿ ಸಂಚರಿಸುವಾಗ ಪ್ರಶ್ನಾವಲಿಗೆ ಉತ್ತರ ಕೊಟ್ಟವರು ಅವರನ್ನು ಪ್ರತ್ಯಕ್ಷ ಕಾಣಬಹುದು. ಆಗ ತಕ್ಕಮಟ್ಟಿಗೆ ಚರ್ಚೆಯೂ ನಡೆಯಬಲ್ಲದು. ಆದುದರಿಂದ ಪ್ರಶ್ನಾವಲಿಗೆ ಉತ್ತರಗಳನ್ನು ಕೊಡುವವರು ಪೂರ್ಣ ವಿಚಾರ ಮಾಡಿ ಸಾಧಕ ಪ್ರಮಾಣಗಳನ್ನು ಕಣ್ಣುಮುಂದಿಟ್ಟುಕೊಂಡು ಉತ್ತರ ಕೊಡುವದು ಅವಶ್ಯ.

× × ×

ಉತ್ತರಗಳನ್ನು ಕೊಡುವದಕ್ಕೆ ಪೂರ್ವಭಾವಿಯಾಗಿ ಪ್ರಶ್ನಮಾಲಿಕೆಯಲ್ಲಿಯ ಅತ್ಯಂತ

ಬ

ಪ್ರಾಂತ ರಚನಾ ಸಮಿತಿಯ ಪ್ರಶ್ನಮಾಲಿಕೆ

ಭಾಷಾನುಗುಣ ಪ್ರಾಂತರಚನೆಯ ಸಮಿತಿಯವರು ತಮ್ಮ ಪರಿಶೀಲನೆಗಾಗಿ [illegible] ಸಮಿತಿಯು ತಾ. ೨೪ ಕ್ಕೆ ಒಂದು ಪ್ರಶ್ನಮಾಲಿಕೆಯನ್ನು ಹೊರಡಿಸಿದ್ದು, ಸಮರ್ಪಕ ಉತ್ತರಕ್ಕಾಗಿ ರಾಜಕೀಯ, ಸಾಮಾಜಿಕ, ಶಿಕ್ಷಣ ಗಳ ಸಂಸ್ಥೆಗಳಿಗೂ ಸಾರ್ವಜನಿಕ ಮುಂದಾಳುಗಳಿಗೂ ಅದನ್ನು ಕಳಿಸಲಾಗಿದೆ. ಇದೇ ಆಗಸ್ಟ ತಿಂಗಳೆಂಡಿಗಾಗಿ ಸಮಿತಿಯು ಬೇರೆ ಬೇರೆ ಪ್ರಾಂತಗಳಲ್ಲಿ ಸಂಚರಿಸಿ ಸ್ಥಾನಿಕ ಹಿತಾವರಣ ನಡೆಸಿ. ಇದೇ ಅಕ್ಟೋಬರದ ಒಳಗಾಗಿ ಘಟನಾಸಮಿತಿ ಅಧ್ಯಕ್ಷರಿಗೆ ತಮ್ಮ ವರದಿಯನ್ನು ಒಪ್ಪಿಸುವರೆಂದು ತಿಳಿದುಬಂದಿದೆ. ಪ್ರಶ್ನಮಾಲಿಕೆಗೆ ಆಗಸ್ಟ ೧೬ ರೊಳಗೆ ಉತ್ತರ ಕಳಿಸಿ ಅಭಿಪ್ರಾಯ ತಿಳಿಸಬೇಕೆಂದು ಸೂಚಿಸಲಾಗಿದೆ.

ಒಂದನೇಭಾಗ

೧ ಆಂಧ್ರ, ಕರ್ನಾಟಕ, ಕೇರಳ ಇಲ್ಲವೇ ಮಹಾರಾಷ್ಟ್ರ ಪ್ರಾಂತಗಳು ಭಾಷಾನುಗುಣವಾಗಿ ಪ್ರತ್ಯೇಕ ಪ್ರಾಂತವಾಗಿ ರಚಿತವಾಗಬೇಕೆ?

೨ ಈ ಹೊಸ ಪ್ರಾಂತಗಳ ಮೇರೆಗಳು ಯಾವವಿರಬೇಕು? ಈ ಹೊಸ ಪ್ರಾಂತಗಳಲ್ಲಿ ಸೇರಿಸಬೇಕೆಂದು ನೀವು ಇಚ್ಛಿಸುವ ಜಿಲ್ಲಾ ತಾಲೂಕುಗಳ ಹೆಸರುಗಳನ್ನು ತಿಳಿಸಿ ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಕಾರಣಗಳನ್ನು ಹೇಳಿರಿ.

೩ ಈ ಹೊಸ ಪ್ರಾಂತಗಳು ಗವರ್ನರರ ಪ್ರಾಂತಗಳಾಗಿ ರಚಿತವಾಗಬೇಕೆ?

೪ ಇಲ್ಲದಿದ್ದರೆ ಈಗಿದ್ದ ಪ್ರಾಂತದಲ್ಲಿಯೆ ಆಡಳಿತೆಯ ವಿಷಯದಲ್ಲಿ ಸ್ವಾಯತ್ತ ಅಧಿಕಾರ ಪಡೆದ ಉಪಪ್ರಾಂತಗಳನ್ನು ನಿರ್ಮಿಸಬೇಕು ಎಂಬ ಇನ್ನೊಂದು ಯೋಜನೆಗೆ ನಿಮ್ಮ ಅಭಿಪ್ರಾಯವೇನು?

೫ ಈ ಹೊಸ ಪ್ರಾಂತಗಳಲ್ಲಿ ಎಲ್ಲ ಖಾತೆಗಳಿಗೂ ಪ್ರತ್ಯೇಕವಾದ ಆಡಳಿತೆ ಇರಬೇಕೆ ಇಲ್ಲದೆ ನೆರೆಹೊರೆಯ ಪ್ರಾಂತಗಳೊಂದಿಗೆ ಸೇರಿಕೊಂಡು ಕೆಲವೊಂದು ಖಾತೆಗಳ ಆಡಳಿತೆಯನ್ನು ನೋಡಿಕೊಳ್ಳಬಹುದೇ? ಈ ವಿಷಯದಲ್ಲಿ ಕೆಳಗಿನ ಖಾತೆಗಳನ್ನು ಗಮನಿಸಬಹುದು—

(೧) ನ್ಯಾಯ (೨) ಪೋಲಿಸ (೩) ಲೋಕೋಪಯೋಗಿ (೪) ಸಾರ್ವಜನಿಕ ಆರೋಗ್ಯ (೫) ಉಚ್ಚ ಶಿಕ್ಷಣ (೬) ಅರಣ್ಯ—

೬ ಮಂತ್ರಿಮಂಡಳದಲ್ಲಿ ಮಂತ್ರಿಗಳ ಸಂಖ್ಯೆ ಎಷ್ಟಿರಬೇಕು? ಪ್ರತಿಯೊಬ್ಬ ಮಂತ್ರಿಯ ಸಂಬಳ ಮತ್ತು ಭತ್ತೆ ಎಷ್ಟಿರಬೇಕು?

೭ ಈ ಹೊಸ ಪ್ರಾಂತಗಳಲ್ಲಿ ಶಾಸನ ಸಭೆಯು ಒಂದಿರಬೇಕೆ ಎರಡು ಇರಬೇಕೆ? ಅವುಗಳ ಸದಸ್ಯರ ವೇತನವೆಷ್ಟಿರಬೇಕು?

೮ ಹಾಯಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರನ್ನು ಬಿಟ್ಟು ಇತರ ನ್ಯಾಯಮೂರ್ತಿಗಳು ಎಷ್ಟಿರಬೇಕು?

೯ ಪಬ್ಲಿಕ್ ಸರ್ವೀಸ ಕಮಿಶನ್ನಿನಲ್ಲಿ ಅಧ್ಯಕ್ಷನನ್ನು ಹಿಡಿದು ಎಷ್ಟು ಸದಸ್ಯರಿರಬೇಕು? ಅವರ ಸಂಬಳವೆಷ್ಟಿರಬೇಕು?

(೧೦ನೆಯ ಪುಟ ನೋಡಿರಿ)

ಮಹತ್ವದ ಪ್ರಶ್ನೆಗಳ ಬಗ್ಗೆ ವಿಚಾರವಿನಿಮಯ ಮಾಡಲು ಕರ್ನಾಟಕದ ಮುಖ್ಯ ಮುಖ್ಯ ವಿಚಾರವಂತರು ೧—೨ ದಿನ ಒಟ್ಟಿಗೆ ಶಾಂತರೀತಿಯಿಂದ ಕೂಡುವದು ಅವಶ್ಯವಿರುವದು ಎಂದು ನನ್ನ ಅಭಿಪ್ರಾಯ. [illegible] ಹೊಸ ಪ್ರಾಂತದ ಆರ್ಥಿಕ ಶಕ್ತಿ, ಉಪ ಪ್ರಾಂತ ರಚನೆ, ಸಂಸ್ಥಾನಗಳ ಸೇರ್ಪಡೆ, ದ್ವಿಸದನಿಕ ಸ್ಥಾನ ಇತ್ಯಾದಿ ಪ್ರಶ್ನೆಗಳ ಬಗ್ಗೆ ವಿಚಾರ ವಿನಿಮಯ ನಡೆಯುವದು ಅತ್ಯವಶ್ಯವು. ಈ ಸಭೆಗೆ ಮುಖ್ಯವಾಗಿ [illegible] ಉತ್ತರ ಕನ್ನಡ ಮತ್ತು ಬಳ್ಳಾರಿಯ ಮುಖಂಡರು ಬರುವದು ಅತ್ಯವಶ್ಯವು. ಈ ಸಭೆಯನ್ನು ಉತ್ತರ ಇಲ್ಲವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರೆದರೂ ಅಡ್ಡಿಯಿಲ್ಲ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಹಾಗೂ ಏಕೀಕರಣ ಸಮಿತಿಯವರು [illegible] ಕೊಡುವ [illegible] ಯೋಗ್ಯ [illegible] ಇಲ್ಲ. ಈಗಾಗಲೆ [illegible] ಪ್ರಧಾನ ಕಾರ್ಯದರ್ಶಿಗಳಾದ ಶ್ರೀ [illegible] ಈ ವಿಷಯದಲ್ಲಿ ಕಾರ್ಯಾರಂಭ ಮಾಡಿರುವರು. ಅವರು ಎಲ್ಲರ ಸಹಕಾರದಿಂದ ಈ ದೊಡ್ಡ ಕಾರ್ಯವನ್ನು ಮುಖ್ಯ ಮುಖ್ಯರ [illegible] ಮಾಡುವರೆಂದು ನಂಬಿರುವೆ.

ಕರ್ಮವೀರ

ಶ್ರೀ ಸರ್ವಧಾರಿ ನಾಮ ಸಂವತ್ಸರ ವರ್ಷ ೧೮೭೦ ಆಷಾಢ ಬ೧೨ ಸೋಮವಾರ

ಸಂಧಾನ ಸಾಕಿನ್ನು

ಬೆತ್ತದ ಭಾಷೆಯನ್ನಲ್ಲದೆ ಸುಸಂಸ್ಕೃತ ಜಗತ್ತಿನ ನಯವಿನಯದ ಮಾತುಗಳನ್ನು ಅರ್ಥ ಮಾಡಿಕೊಳ್ಳಲಾರದ ಜೀವಿಗಳು ಪಶು ಜಗತ್ತಿನಲ್ಲಿರುವಂತೆ ಮನುಷ್ಯ ಪ್ರಪಂಚದಲ್ಲಿಯೂ ಕೆಲವರಿದ್ದಾರೆ. ಹೈದರಾಬಾದದ ನಿಜಾಮ ಸಾಹೇಬರು ಆ ಸಾಲಿನಲ್ಲಿ ಸೇರಿದವರೆಂಬ ಪಾಠವನ್ನು ನಮ್ಮ ಸರಕಾರವೀಗ ಚನ್ನಾಗಿ ಕಲಿತುಕೊಂಡಿದೆ. ಮದ್ರಾಸಿನಲ್ಲಿ ಮುಖ್ಯ ಮಂತ್ರಿ ಪಂಡಿತ ನೆಹರೂ ಅವರು ಆಡಿದ ನಿಸ್ಸಂದಿಗ್ಧ ಮಾತುಗಳಿಂದ ಈ ಮಾತು ಸ್ಪಷ್ಟವಾಗಿದೆ ಮಾತ್ರವಲ್ಲ, ರಾಜತಂತ್ರದ ಆ ಚರಮೋಪಾಯವನ್ನು ನಿಜಾಮರ ಮೇಲೆ ಪ್ರಯೋಗಿಸಲು ಅವರು ಸರ್ವಸನ್ನಾಹವನ್ನು ಮಾಡಿದ್ದಾರೆಂದೂ ವಿದಿತವಾಗುತ್ತದೆ. ನಿಜಾಮರೊಡನೆ ಸಂಧಾನದ ಸಂಭವವೇ ಇಲ್ಲ. ಅವರು ಜವಾಬದಾರ ಸರಕಾರವನ್ನು ಸ್ಥಾಪಿಸಿ ಸೇರ್ಪಡೆ ಪತ್ರಕ್ಕೆ ಅಂಕಿತ ಹಾಕಿದರೆ ಸರಿ; ಇಲ್ಲದಿದ್ದರೆ ಅವರು ನಾಶ ಹೊಂದಬೇಕಾಗುವದೆಂದೂ ಹೈದರಾಬಾದದ ವಿರುದ್ಧ ಸೈನಿಕ ಕ್ರಮ ತೆಗೆದುಕೊಳ್ಳಲು ಯೋಗ್ಯ ಸಮಯವನ್ನು ನಾವೇ ಆರಿಸುವೆವೆಂದೂ ಅವರು ನಿಚ್ಚಳವಾಗಿ ಹೇಳಿದ್ದು ಜನತೆಯ ಸಂದೇಹನಿವಾರಣೆ ಮಾಡಲು ಸಾಲದೇನು. ಮೊನ್ನೆ ನಾನಜವೆಂಬ ನಿಜಾಮ ಹಳ್ಳಿಯಲ್ಲಿ ನಮ್ಮ ಸೈನ್ಯ ರಜಾಕಾರರ ವಿರುದ್ಧ ಕೈಕೊಂಡ ಚಟುವಟಿಕೆಗಳಿಂದ ನಿಜಾಮರ ಸೊಕ್ಕಿಗೆ ನಾವು ಉತ್ತರ ಕೊಡುವ ದಿನ ತೀರ ಸನ್ನಿಹಿತವಾಗಿದೆಯೆಂದು ಗೊತ್ತಾಗುವದು. ನಮ್ಮ ಸೈನ್ಯ ಆ ಹಳ್ಳಿಯನ್ನು ಆಕ್ರಮಿಸಿದೆ ಮತ್ತು ಅಲ್ಲಿಗೆ ಸೈನ್ಯ ಕಳಿಸುವ ಸಿದ್ಧತೆ ಮಾಡಿದ್ದ ನಿಜಾಮರು ಬಾಲ ಮುದುಡಿದ್ದಾರೆ.

ವಿವೇಕಿಗಳಾದವರಾರೂ ನಮ್ಮನ್ನು ಸೈರಣೆಗೇಡಿಗಳೆಂದು ದೂರಲಾರರು. "ಕ್ಷಮಾ ತಪ್ತಾ" ಎಂಬ ನೀತಿವಾಕ್ಯವನ್ನು ನಾವು ಅಳತೆ ಮೀರಿ ಅನುಸರಿಸಿ ಒಂದು ದೃಷ್ಟಿಯಿಂದ ಷಂಡತನ ಪ್ರದರ್ಶಿಸಿದ್ದೇವೆ. ನಿಜಾಮರ ಪ್ರಾಮಾಣಿಕತೆಯನ್ನು ನಂಬಿ ನಾವು ಸಿಕಂದರಾಬಾದದಿಂದ ನಮ್ಮ ಸೈನ್ಯವನ್ನು ಹಿಂತೆಗೆದುಕೊಂಡೆವು. ಅವರು ಮುಂದೊಡ್ಡಿದ ನೆವಗಳನ್ನು ಸತ್ಯವೆಂದೇ ಅಂಗೀಕರಿಸಿ ಸೇರ್ಪಡೆಯ ಬದಲು ಒಂದು ವರ್ಷದ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡೆವು. ಆದರೆ ನಮ್ಮ ಪಾಲಿನ ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡು ನಿಜಾಮರು ನಮ್ಮ ಸೈನ್ಯ ತೆರಳಿ ಹೋದ ಮರುದಿನದಿಂದಲೂ ತಮ್ಮ ವೃತ್ತಿಯನ್ನು ವಿರುದ್ಧ ದಿಶೆಯಲ್ಲಿ ಹರಿಬಿಟ್ಟರು. ಸೈನ್ಯವನ್ನು ಹೆಚ್ಚಿಸಿಕೊಂಡರು; ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸತೊಡಗಿದರು ಮತ್ತು ಎಲ್ಲಕ್ಕೂ ಹೆಚ್ಚಾಗಿ ಆ ಉದ್ಧಟ ರಜಾಕಾರ ದಳಕ್ಕೆ ಅನಿರ್ಬಂಧ ಸ್ವಾತಂತ್ರ್ಯ ಕೊಟ್ಟರು. ನಾವು ಕೊಡಮಾಡಿದ ಅತ್ಯುದಾರ ಶರ್ತುಗಳನ್ನು ನಿರಾಕರಿಸಿದರು. ರಜಾಕಾರರು ಹೈದರಾಬಾದ ಗಡಿಯೊಳಗೆ ನಡೆಸುತ್ತಿರುವ ಅಮಾನುಷ ಕೃತ್ಯಗಳಿಗೆ ಹೈದರಾಬಾದದಿಂದ ಓಡಿ ಬರುತ್ತಿರುವ ನಿರಾಶ್ರಿತರ ಕರುಣ ಕಥೆಗಳೆ ಸಾಕ್ಷಿ ಸಾಲದಿದ್ದರೆ, ನಿಜಾಮರ ಮಂತ್ರಿಗಳಲ್ಲೊಬ್ಬರಾಗಿದ್ದು ಈಗ ಹೊರಬಿದ್ದ ಜೋಶಿಯವರ ಭಾಷಣಗಳು ಅಬಾಧಿತ ಪ್ರಮಾಣವಾಗಿವೆ. ಮೇಲಾಗಿ ರಜಾಕಾರರಿಗೂ ತಮ್ಮ ಪಠಾಣರಿಗೂ ನಮ್ಮ ಗಡಿಯನ್ನು ನುಗ್ಗಿ ಹಿಂಸಾಚಾರ ನಡೆಸಲು ಸ್ವಾತಂತ್ರ್ಯ ಕೊಟ್ಟು ನಿಜಾಮರು ಕೀಲು ಕಿತ್ತ ವಾನರನಾಗಿದ್ದಾರೆ.

ರಾಷ್ಟ್ರಸಂಘಕ್ಕೆ ನಮ್ಮ ವಿರುದ್ಧ ದೂರು ಕೊಟ್ಟು, ಜಾಫರ ಅಲಿ ಜೊತೆಗೂಡಿ ನಮ್ಮನ್ನು ಅಂತರರಾಷ್ಟ್ರೀಯ ಕಟ್ಟೆಯಲ್ಲಿ ಕೆಡಹುವ ಹವಣಿಕೆಯನ್ನು ನಿಜಾಮರು ತಮ್ಮ ವಕೀಲಗಾರ ಮಾಂಕ್ಟನ್ನರ ಮೂಲಕ ಮಾಡಿದ್ದಾರೆಂಬುದು ಬಹಿರಂಗವಾಗಿದೆ. ಸಂಘದ ಸದಸ್ಯರಲ್ಲದ ಅವರ ದೂರನ್ನು ಯಾವ ರಾಷ್ಟ್ರ ಅದರ ಮುಂದೆ ಒಯ್ಯುವದೋ ನೋಡಬೇಕು. ಅಂಥ ಮರುಳತನಕ್ಕೆ ಯಾವ ರಾಷ್ಟ್ರವಾದರೂ ಸಿದ್ಧವಿದ್ದರೂ ಸಂಘ ಅದಕ್ಕೆ ಕಿವಿಗೊಡುವ ಸಂಭವವಿಲ್ಲ.

ಆದರೆ ಎಂದಿನಂತೆ ನಿಜಾಮರು ತಮ್ಮ ಬತ್ತಳಿಕೆಯಲ್ಲಿ ಒಂದಕ್ಕಿಂತ ಹೆಚ್ಚು ಬಾಣಗಳನ್ನಿಟ್ಟಿದ್ದಾರೆ. ಈಗ ಅವರು ತಮ್ಮ ಪರವಾಗಿ ಸಂಧಾನ ನಡೆಸಲು ಸರ್ ಮಿರ್ಜಾ ಇಸ್ಮಾಯಿಲರನ್ನು–ಕಳೆದ ವರ್ಷ ಯಾರ ಮಾತಿಗೆ ಕಿವಿಗೊಡದೆ ದಿವಾಣಗಿರಿಯಿಂದ ಹೊರಗಟ್ಟಿದರೋ ಅವರನ್ನು–ದಿಲ್ಲಿಗೆ ಕಳಿಸಿದ್ದಾರೆ. ಈ ಬಾರಿ ಈ ಭೇದೋಪಾಯಕ್ಕೆ ನಾವು ಮತ್ತೊಮ್ಮೆ ಮೈಯೊಡ್ಡಿ ಹುಚ್ಚರಾಗೋಣಬೇಡ. ನಿಜಾಮರು ಪಾಪವ ಬರೆಸಿದ್ದಾರೆ– ಅವರೀಗ ಸರಕು ಬೇಡೆಂದರೆ ಸಾಗದು. ಅದನ್ನು ಅವರ ತಲೆಯ ಮೇಲೆ ಹೇರಲೇಬೇಕು.

ಅ. ಭಾ. ಸಂಪಾದಕರ ಪರಿಷತ್ತು



ಅ. ಭಾ. ಪತ್ರಿಕಾ ಸಂಪಾದಕರ ಏಳನೆ ಪರಿಷತ್ತು ತಾ. ೨೭–೨೮ ಕ್ಕೆ ಮುಂಬೈಯಲ್ಲಿ "ಹಿಂದುಸ್ಥಾನ ಟೈಮ್ಸ್" ಪತ್ರಿಕೆಯ ಸಂಪಾದಕರಾದ ಶ್ರೀ ದೇವದಾಸ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಚಿತ್ರದಲ್ಲಿ ಶ್ರೀ ಗಾಂಧಿಯವರು ಅಧ್ಯಕ್ಷ ಭಾಷಣ ಮಾಡುತಿದ್ದಾರೆ. ಅವರ ಬಲಪಕ್ಕದಲ್ಲಿ ಮುಂಬಯಿ ಮುಖ್ಯ ಮಂತ್ರಿ ಶ್ರೀ. ಖೇರ ಮತ್ತು ಗೃಹಮಂತ್ರಿ ಮುರಾರಜಿಯವರು ಎಡಪಕ್ಕದಲ್ಲಿ ಕಾರ್ಯದರ್ಶಿ ಶ್ರೀ. ಶ್ರೀನಿವಾಸನ್ ಮತ್ತು ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ. ಕಸ್ತೂರಿ ಶ್ರೀನಿವಾಸನ್‌ರು ಇರುವರು.

ವಾರದ ಸಿಂಹಾವಲೋಕನ

ಪತ್ರಿಕೆಗಳ ಹೊಣೆ, ಸ್ವಾತಂತ್ರ್ಯ

ಅ. ಭಾ. ಪತ್ರಿಕಾ ಸಂಪಾದಕರ ೭ ನೆಯ ಪರಿಷತ್ತಿನಲ್ಲಿ ಶ್ರೀ ದೇವದಾಸ ಗಾಂಧಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ವಾತಂತ್ರ್ಯ ಸಮರ ಕಾಲದಲ್ಲಿ ಹಿಂದೀ ಪತ್ರಿಕೆಗಳು ಸಲ್ಲಿಸಿದ ಸೇವೆಯನ್ನು ಬಹಳ ಕೊಂಡಾಡಿದರು. ಕೆಲವು ಪ್ರಾಂತಗಳಲ್ಲಿ ಅಮಲಿನಲ್ಲಿರುವ ಸಾರ್ವಜನಿಕ ಸುರಕ್ಷಿತತೆಯ ಕಾಯದೆಯನ್ನು ಮುಂಬರಿಸುವಲ್ಲಿ ಅರ್ಥವಿಲ್ಲವೆಂದೂ ಪತ್ರಿಕೆಗಳ ಹಕ್ಕು ಬಾಧ್ಯತೆಗಳಿಗೆ ಅಘಾತವುಂಟಾಗುವಂತೆ ಈ ಕಾಯದೆಗಳ ಸಹಾಯದಿಂದ ಕೈಕೊಂಡಿರುವ ಕ್ರಮಗಳನ್ನು ಪುನಃ ವಿಮರ್ಶಿಸಬೇಕೆಂದೂ ಅವರು ಹೇಳಿದರು. ಅದೇ ಕಾಲಕ್ಕೆ ಅವರು ಸಂಪಾದಕರ ಹೊಣೆಯನ್ನೂ ನಿಃಸಂದಿಗ್ಧವಾಗಿ ಹೇಳಿದ್ದಾರೆ. ಪತ್ರಿಕೆಗಳು ತೀರ ಕೆಳಮಟ್ಟಕ್ಕಿಳಿಯದಂತೆ ನೋಡಿಕೊಳ್ಳಬೇಕೆಂದು ಬಿನ್ನವಿಸಿ ಕೆಲ ಪತ್ರಿಕೆಗಳು ಇತ್ತೀಚೆಗೆ ಈ ಬಗೆಯ ಕೆಳಮಟ್ಟಕ್ಕೆ ಇಳಿದುದಕ್ಕಾಗಿ ವಿಷಾದ ಪ್ರದರ್ಶಿಸಿದ್ದಾರೆ. ಹಕ್ಕು ಬಾಧ್ಯತೆ, ಸ್ವಾತಂತ್ರ್ಯವನ್ನು ಬೇಡುವ ಸಂಪಾದಕರು ತಮ್ಮ ಹೊಣೆಯನ್ನರಿತು ದೇಶದಲ್ಲಿ ಶಾಂತಿ ಸುವ್ಯವಸ್ಥೆ ಸುಖ ಸಮೃದ್ಧಿಗಾಗಿ ವಿಧಾಯಕ ಪ್ರಚಾರಕಾರ್ಯ ಮಾಡುವದನ್ನು ಮರೆಯದಿರುವದು ಅವಶ್ಯವಾಗಿದೆ. ಪತ್ರಿಕಾ ಸ್ವಾತಂತ್ರ್ಯದ ವಿಷಯದಲ್ಲಿ ಇದೇ ಎಪ್ರಿಲಿನಲ್ಲಿ ಜಿನೀವಾದಲ್ಲಿ ಸೇರಿದ್ದ ಸಂಯುಕ್ತ ರಾಷ್ಟ್ರಗಳ ಸಭೆ ಸ್ವೀಕರಿಸಿದ ಗೊತ್ತುವಳಿ ಗೌಪ್ಯಾಗೌಪ್ಯ ವಿವೇಕ, ಹಿಂಸಾ ವಿರೋಧ ಸತ್ಪ್ರವೃತ್ತಿ ಪ್ರಚೋದನ, ಅಶ್ಲೀಲ ಲೇಖನ ಬಹಿಷ್ಕಾರ, ನ್ಯಾಯವಿತರಣ ಸಹಾಯ, ಕಲಾಧಿಕಾರ ಪೋಷಣೆ, ನಿರರ್ಥಕ ವ್ಯಕ್ತಿಟೀಕೆಯ ತ್ಯಾಗ, ದಂಡನಾ ನಿಯಂತ್ರಣ, ಸ್ನೇಹವರ್ಧನ ಮುಂತಾದ ಮುದ್ದೆಗಳನ್ನು ಒಳಗೊಂಡಿದೆ. ಈ ಒಪ್ಪಂದವನ್ನು ಹಿಂದುಸ್ಥಾನದ ಮತ್ತು ಪ್ರಾಂತೀಯ ಸರಕಾರಗಳು ಬೇಗನೆ ಮನ್ನಿಸಿ ಪರಿಷತ್ತಿನ ಬೇಡಿಕೆಯಂತೆ ದೇಶದಲ್ಲಿಯ ಸದ್ಯದ ಪತ್ರಿಕಾ ಶಾಸನಗಳನ್ನೆಲ್ಲ ಕಿತ್ತು ಹಾಕಿ ಇದನ್ನೇ ಜಾರಿಗೆ ತರಬೇಕಾದುದು ಅವಶ್ಯ.

ಕಮ್ಯುನಿಸ್ಟರ ದ್ರೋಹಬುದ್ಧಿ

ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲರು ಮದ್ರಾಸಿನ ಕಾರ್ಪೊರೇಶನ್ ಮೈದಾನದಲ್ಲಿ ಸೇರಿದ್ದ ಕೆಲಸಗಾರರ ಪ್ರಚಂಡ ಸಭೆಯಲ್ಲಿ ಭಾಷಣ ಮಾಡುತ್ತ ಕಮ್ಯುನಿಸ್ಟರ ಇಂದಿನ ಹಾವಳಿಯನ್ನು ಉಗ್ರವಾಗಿ ಟೀಕಿಸಿದರು. ಪಂಡಿತರು ಸ್ವತಃ ಸಾಮ್ಯವಾದಿ [ಸೋಶ್ಯಾಲಿಸ್ಟ] ಎಂದು ತಮ್ಮ ಒಲವನ್ನು ಹಿಂದೆ ಪ್ರಕಟಪಡಿಸಿದ್ದುಂಟು. ಜಗತ್ತಿನಲ್ಲಿ ಅನೇಕ ರಾಷ್ಟ್ರಗಳೆಂದು ಸಾಮ್ಯವಾದೀ ತತ್ವಗಳಿಂದ ಸರ್ವೋದಯವಾಗುವದೆಂದು ನಂಬಲಾರಂಭಿಸಿವೆ. ಆದರೆ ಸ್ವರಾಷ್ಟ್ರ ಹಿತವನ್ನು ಕಡೆಗಣಿಸಿ ರಶಿಯದ–ಅಲ್ಲಿ ಹೇಗೇ ಇರಲಿ–ಸೂತ್ರಗಳನ್ನು ಬಾಚಾಜೂ ತಪ್ಪದೆ ಯೇನಕೇನ ಸಾಧನದಿಂದ ಸಾಮ್ಯವಾದಿ ಪ್ರಭುತ್ವವನ್ನು ಸ್ಥಾಪಿಸಬಯಸುವದು ರಕ್ತಪಾತ ಮತ್ತು ಸರ್ವಾಧಿಕಾರಿತ್ವಗಳು ಏಳುವಂತೆ ಮಾಡುವ ದುಃಶಾಸ್ಯಬುದ್ಧಿಯ ಅನಾಹುತಕಾರಿಯಾದ ಪ್ರಯತ್ನವೆನ್ನದಿರಲಾಗದು. ಅದರಲ್ಲೂ ಮೊನ್ನೆ ಮೊನ್ನೆ ಸ್ವಾತಂತ್ರ್ಯವನ್ನು ಪಡೆದ ಹಿಂದುಸ್ಥಾನದಲ್ಲಿ ಆಡಳಿತದಲ್ಲಿ ಮತ್ತು ಜೀವನ ಕ್ರಮದಲ್ಲಿ ಒಂದು ವ್ಯವಸ್ಥೆಯನ್ನು ತರುವ ಮಾರ್ಗವಿನ್ನೂ ರೂಪಿಸಲ್ಪಡದ ಈ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ಸರಕಾರವನ್ನು ದುರ್ಬಲಗೊಳಿಸುವ ದುಷ್ಪ್ರಯತ್ನವು ಗಂಡಾಂತರ ತರುವಂಥದೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಪಂಡಿತ ಜವಾಹರರಂಥ ಸರ್ವ ಹಿತೇಚ್ಛುಗಳ ನೇತೃತ್ವದಲ್ಲಿ ಕೇಂದ್ರ ಸರಕಾರ ತನ್ನ ಧೋರಣೆಯನ್ನು ರೂಪಿಸುತ್ತಿರುವಾಗ ಅಸಹನೆ ತೋರಿ ನಾಡಿನ ಕೆಲಸಗಾರರ, ಉತ್ಪಾದಕ ಕಾರ್ಯಗಳನ್ನು ತಡೆಗಟ್ಟಿ ಸರಕಾರದ ವಿರುದ್ಧ ಅವರನ್ನು ಎತ್ತಿಕಟ್ಟುವ ಹಿಂದೀ ಕಮ್ಯುನಿಸ್ಟರು ಮುಖ್ಯಮಂತ್ರಿಗಳ ಮಾತಿನಲ್ಲೇ ಹೇಳುವದಾದರೆ 'ರಾಷ್ಟ್ರದ್ರೋಹಿಗಳು ಮತ್ತು ಕೆಲಸಗಾರರ ದ್ರೋಹಿಗಳು.

ಗ್ರಾಮರಕ್ಷಾದಲ

ಕಳೆದ ರವಿವಾರ (ತಾ. ೨೫) ಶ್ರೀ ದಿವಾಕರ ರಂಗರಾಯರು ಮತ್ತು ದಕ್ಷಿಣ ಭಾಗದ ಡಿ. ಆಯ್. ಜಿ. ಶ್ರೀ ಬಿಲ್ಮೋರಿಯಾ ಮೊದಲಾದ ಪೋಲೀಸ ಅಧಿಕಾರಿಗಳು ಧಾರವಾಡ–ಹೈದರಾಬಾದ ಗಡಿಯಲ್ಲಿ ಸಂಚರಿಸಿದಾಗ ಗಡಿ ಹಳ್ಳಿಗಳಲ್ಲಿ ಒದಗಬಹುದಾದ ಗಂಡಾಂತರವನ್ನೆದುರಿಸಲು ಅಲ್ಲಲ್ಲಿಯ ಗ್ರಾಮರಕ್ಷಾದಲಗಳು ನಡೆಸಿದ ಸನ್ನಾಹಗಳ ಪ್ರಶಂಸನೀಯ ನಿದರ್ಶನಗಳು ಅವರಿಗೆ ಕಂಡು ಬಂದವೆಂದು ವರದಿಯಾಗಿದೆ. ಹೈದರಾಬಾದಿನಿಂದ ಬರುವ ಪುಂಡ ರಜಾಕಾರರ ಮತ್ತು ಪಠಾಣರ ಸದ್ದಡಗಿಸಲು ಅವರು ಸಂಚರಿಸಿದ ಹದಿಮೂರು ಹಳ್ಳಿಗಳ ಯುವಕರು ಹೇಗೆ ತರಬೇತಿ ಹೊಂದಿದ್ದಾರೆಂಬುದು ಅವರು ನಡೆಸಿ ತೋರಿಸಿದ "ಹುಸಿ ಯುದ್ಧ"ಗಳ ಪ್ರದರ್ಶನಗಳಿಂದ ವ್ಯಕ್ತವಾದವು. ಗ್ರಾಮರಕ್ಷಣೆಯ ಅಭಿಯೋಗ–ಆತ್ಮರಕ್ಷಣ ಇವೆರಡೂ ಅಂಗಗಳಲ್ಲಿ ಹಳ್ಳಿಗರು ಕೆಲವೇ ದಿನಗಳಲ್ಲಿ ಕಲಿತ ಕೌಶಲವನ್ನು ನೋಡಿದರೆ ನಮ್ಮ ಜನರು ಅಳ್ಳೆದೆಯವರಾದುದು ಕೇವಲ ಸಂಘಟನಹೀನತೆಯಿಂದಲ್ಲದೆ ಸ್ವಭಾವದಿಂದಲ್ಲೆಂಬ ಮನವರಿಕೆಯಾಗದಿರದು. ಕೆಲವು ಹಳ್ಳಿಗಳಲ್ಲಿ ೧೦ ವರ್ಷದ ಬಾಲಕರಾದಿಯಾಗಿ ಎಲ್ಲ ಗಂಡಸರೂ ಸಂರಕ್ಷಣದ ತರಬೇತಿ ಪಡೆದಿದ್ದಾರೆ. ಈ ಪರಿಗಂತೂ ಈ ಬಗೆಯ ರಕ್ಷಾದಲದ ಸಂಘಟನೆಯ ಕೀರ್ತಿ ಧಾರವಾಡ ಜಿಲ್ಲೆಗೊಂದಕ್ಕೇ ಸಲ್ಲುತ್ತದೆ. ಆದರೆ ಈ ಮೇಲ್ಪಂಕ್ತಿಯನ್ನು ಉಳಿದ ಎಲ್ಲ ಗಡಿ ಹಳ್ಳಿಗಳೂ ಬೇಗನೆ ಅನುಸರಿಸುವದು ಅವಶ್ಯ. ಹೈದರಾಬಾದ–ಹಿಂದ ಗಡಿ ಸಾವಿರಾರು ಮೈಲುದ್ದವಾಗಿದ್ದು ನೂರಾರು ಹಳ್ಳಿಗಳನ್ನೊಳಗೊಂಡಿದೆ. ಯಾವ ಸರಕಾರವೂ ಇಷ್ಟುದ್ದ ಗಡಿಯ ಪ್ರತಿಯೊಂದು ಸ್ಥಾನದಲ್ಲೂ ಸಾಕಷ್ಟು ಸೈನಿಕರನ್ನಾಗಲೀ ಪೋಲೀಸರನ್ನಾಗಲಿ ಇರಿಸಲು ಸಮರ್ಥವಾಗದು. ಇರಿಸಿದರೂ ಅಸಂಘಟಿತ ಜನತೆಯನ್ನು ಬೆನ್ನಲ್ಲಿರಿಸಿಕೊಂಡು ಯಶಸ್ವಿಯಾಗಿ ಹೋರಾಡುವದು ಸಾಧ್ಯವಿಲ್ಲ. ಆದರಿಂದ ಹಳ್ಳಿಗರು ಒಂದು ಚಿಟ್ಟಿನ ವರೆಗಿನ ಪುಂಡಾಟಿಕೆಯನ್ನೆದುರಿಸಲು ಸಂಘಟಿತರಾಗುವದವಶ್ಯ.

ಬಟ್ಟೆಯ ಅರ್ಥ ನಿಯಂತ್ರಣ

ವಾಣಿಜ್ಯ ಮಂತ್ರಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಕಳೆದ ವಾರ ದಿಲ್ಲಿಯಲ್ಲಿ ಸೇರಿದ ಪ್ರಾಂತಿಕ ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಬಟ್ಟೆಯ ಬೆಲೆ ಏರಿ ಜನರಿಗಾಗುತಿರುವ ತೊಂದರೆ ಚರ್ಚಿಸಲ್ಪಟ್ಟು ಒಂದು ನಿರ್ಣಯವಾಗಿದೆಯೆಂದೂ ಬಟ್ಟೆಯ ಅರ್ಥ ನಿಯಂತ್ರಣ ಮತ್ತು ಬಟ್ಟೆಯ ಕರದ ಬಗ್ಗೆ ಸರಕಾರದ ಧೋರಣೆ ಇಷ್ಟರಲ್ಲೇ ಪ್ರಸಿದ್ಧಿಸಲ್ಪಡುವದೆಂದೂ ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ಹೇಳಿದ್ದಾರೆ. ಜನಸಾಮಾನ್ಯರಿಗೆ ಬೇಕಾದ ಒರಟು ಬಟ್ಟೆಯ ಉತ್ಪನ್ನವನ್ನು ಹೆಚ್ಚಿಸುವಂತೆ ಗಿರಣಿಗಳಿಗೆ ಆಜ್ಞಾಪಿಸಿ, ಅದನ್ನೆಲ್ಲ ಸರಕಾರವೇ ಕೊಂಡು, ಬೆಲೆ ಮುದ್ರೆಯೊತ್ತಿ, ಅಗ್ಗವಾಗಿ, ಅಧಿಕೃತ ಅಂಗಡಿಗಳ ಮೂಲಕ ಹಂಚುವಂತೆ ಕ್ರಮ ಕೈಕೊಳ್ಳಲಾಗುವದೆಂದು ತಿಳಿಯುತ್ತದೆ. ಬಟ್ಟೆಯ ವಿನಿಯಂತ್ರಣವಾದಂದಿನಿಂದ ಬೆಲೆಗಳು ಗಗನಕ್ಕೇರಿದ ಕಥೆ ಬೇರಾವ ವಿನಿಯಂತ್ರಣದ ಪರಿಣಾಮಕ್ಕಿಂತಲೂ ಕರಾಳವಾಗಿದೆ. ಸುಸಂಘಟಿತರಾದ ಗಿರಣಿಯೊಡೆಯರು ಬಟ್ಟೆಯ ಕೊರತೆಯ ದುರ್ಲಾಭವನ್ನು ಪಡೆದರಷ್ಟೇ ಅಲ್ಲ, ಕೃತಕ ಕೊರತೆಯನ್ನು ಕೂಡ ನಿರ್ಮಿಸಿ ಬಡವರನ್ನು ಸುಲಿದರು, ಪಾಕಿಸ್ತಾನಕ್ಕೆ ಬಟ್ಟೆಯನ್ನು ಕಳ್ಳತನದಿಂದ ಸಾಗಿಸಿ ಸ್ವಜನದ್ರೋಹವನ್ನು ಮಾಡಿ ಗಂಟು ಗಳಿಸಿದರೆಂದು ಹೇಳಬಹುದಾಗಿದೆ. ಈ ಎಲ್ಲ ವಿದ್ಯಮಾನಗಳಿಂದ ಸಂತಪ್ತರಾಗಿ ಪಂ. ನೆಹರೂ ಅವರು ಬಟ್ಟೆ ಗಿರಣಿಯೊಡೆಯರನ್ನು ದೇಶಘಾತಕರೆಂದು ಪರಿಷತ್ತಿನಲ್ಲಿ ಟೀಕಿಸಿದರೆಂದು ತಿಳಿಯುತ್ತದೆ. ಆದರೂ ಪರಿಷತ್ತಿನಲ್ಲಾದ ನಿರ್ಣಯ ಅರೆಮನಸಿನದಾಗಿ ತೋರುತ್ತದೆ. ಅರ್ಥನಿಯಂತ್ರಣದಿಂದ ಮಧ್ಯಮ ವರ್ಗದ ಜನರಿಗಂತೂ ಪ್ರಯೋಜನವಾಗುವ ಹಾಗೆ ಕಾಣುವದಿಲ್ಲ. ಅವರೀಗ ಎಲ್ಲರಿಗಿಂತ ಸಂತ್ರಸ್ತರು. ಗಿರಣಿಯೊಡೆಯರೂ ಬಟ್ಟೆ ವ್ಯಾಪಾರಿಗಳೂ ಮಾಡಿದ ದ್ರೋಹಕ್ಕೆ ಎಂಥ ಶಿಕ್ಷೆ ಪ್ರಾಯಶ್ಚಿತ್ತವೂ ಕಡಿಮೆಯೇ.

ಸಂಬಳ ಮತ್ತು ಬಿರುದು

ಶಾಸನಸಭಾದಿ ಸಂಸ್ಥೆಗಳ ಸದಸ್ಯರಿಗೆ ಕೊಡಲಾಗುವ ಸಂಬಳವು ದ್ವಿದಲರಾಜ್ಯ ಪದ್ಧತಿಗೆ ನಿಕಟವಾಗಿ ಸಂಬಂಧಿಸಿದ್ದು ಅಧಿಕಾರಿ ಮತ್ತು ಅಧಿಕಾರೇತರ ಕಾಂಗ್ರೆಸ್ಸಿಗರಲ್ಲಿಯ ಘರ್ಷಣೆಗೆ ಪುಟಕೊಡುವಂಥದಾಗಿದೆ. ಅಂಥ ಸಂಸ್ಥೆಗಳಲ್ಲಿ ಅಲ್ಲಿಯ ಕಾರ್ಯ ಮತ್ತು ಸ್ಥಳಗಳನ್ನು ಬಯಸುವವರ ಸಂಖ್ಯೆ ಅವಶ್ಯಕವಾಗಿ ಅವುಗಳಿಗಿಂತ ಹೆಚ್ಚಾಗಿರುತ್ತದೆ. ಅಂಥ ಸ್ಥಳಗಳು ಅಧಿಕವಾಗಿ ಲಾಭಕರವೆನಿಸದೆ ಕೈಯಿಂದಲೇ ಖರ್ಚು ಮಾಡುವ ಸಂದರ್ಭ ತರುವಂಥವಾದರೂ ಅಲ್ಲಿ ಸಿಗುವ ಗೌರವ, ಪ್ರತಿಷ್ಠೆ ಮತ್ತು ಅಧಿಕಾರಗಳು ಮಹತ್ವಾಕಾಂಕ್ಷೆಯುಳ್ಳವರನ್ನು ಆ ಕಡೆಗೆ ಸೆಳೆಯಲು ಸಾಕು. ಈಗಿನ ಪದ್ಧತಿಯಂತೆ ಅವು ಆರ್ಥಿಕವಾಗಿಯೂ ಲಾಭಕರವಿದ್ದರೆ ಸ್ವಾಭಾವಿಕವಾಗಿ ಅವುಗಳ ಬಗ್ಗೆ ಆಶೆಪಡುವವರು ಇನ್ನೂ ಹೆಚ್ಚಾಗುತ್ತದೆ. ನಿಜವಾಗಿ ನೋಡಿದರೆ ಶಾಸನಸಭಾಸದಸ್ಯರು ಮತ್ತು ಇತರ ಅಧಿಕಾರಿಗಳ ಸಂಬಳ, ಭತ್ತೆ ಮತ್ತು ಇತರ ಸೌಕರ್ಯಗಳು ಇವನ್ನು ಲಾಭಕರವಾದ ಉದ್ಯೋಗಗಳನ್ನಾಗಿ ಮಾಡಿಬಿಟ್ಟಿವೆ. ಆದುದರಿಂದ ಈ ಸಂಸ್ಥೆಗಳಲ್ಲಿ ಪ್ರವೇಶಿಸಲು ತೀಕ್ಷ್ಣ ಸ್ಪರ್ಧೆಯಿದೆ. ಈ ಉದ್ಯೋಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾನವನಲ್ಲಿರುವ ಪ್ರತಿಯೊಂದು ದೃಢ ಅಥವಾ ದುರ್ಬಲ ಸ್ಥಾನದ ದುರುಪಯೋಗವನ್ನು ಪಡೆಯಲು ಪ್ರಯತ್ನಮಾಡಲಾಗುತ್ತದೆ. ಹೀಗೆ ಹುರಿಯಾಳಿನ ಇಲ್ಲವೆ ನಾಗರಿಕರ ಧರ್ಮ, ಜಾತಿ, ವರ್ಗ, ಸಂಬಂಧ, ಸ್ನೇಹ, ಲಿಂಗ, ಭಾವತೃಷ್ಣೆ, ಪೂರ್ವಗ್ರಹ, ಅಂಧಶ್ರದ್ಧೆ, ಅಪರಾಧ, ಬೀದಿಕೂಗು ಇವನ್ನು ಮುಂದೊಡ್ಡಿ ಒಂದು ನಿರ್ದಿಷ್ಟ ಸ್ಥಳಕ್ಕೆ 'ಬ' ಎಂಬವನಿಗಿಂತ 'ಅ' ಎಂಬವನು ಹೆಚ್ಚು ಅರ್ಹ ಎಂದು ಸಿದ್ಧಮಾಡಲಾಗುತ್ತದೆ.

ಕೋರ್ಟಿಗೆ ಬರಲು ವೆಚ್ಚ ಮಾಡಿದ ವೇಳೆ ಮತ್ತು ತೆಗೆದುಕೊಂಡ ತೊಂದರೆಗಳಿಗಾಗಿ ಸಾಕ್ಷಿಗಾರರಿಗೆ ಭತ್ತೆ ಕೊಡಲಾಗುತ್ತದೆ. ಆದರಿಂದ ಕರೆದಾಗ ಕೈತುಂಬ ಹಣಪಡೆವ ವೈದ್ಯರು ವಕೀಲರು ಮತ್ತು ಇತರ ಪಣ್ಯ ವ್ಯಕ್ತಿಗಳನ್ನು ಬಿಟ್ಟರೆ ಉಳಿದ ಸಾಮಾನ್ಯರು ಕೋರ್ಟಿಗೆ ಹೋಗಿ ಸಾಕ್ಷಿ ಹೇಳಲು ಮನಸ್ಸು ಮಾಡುವುದಿಲ್ಲವೆಂಬುದು ಅನುಭವಸಿದ್ಧವಾದುದು. ಏಕೆಂದರೆ ಸಾಮಾನ್ಯಸಾಕ್ಷಿಗಾರರು ಕೋರ್ಟಿಗೆ ತಮ್ಮ ಸ್ವಂತ ಖರ್ಚಿಂದ ಹೋಗಿ, ಕುಳಿತುಕೊಳ್ಳಲು ಕೂಡ ಸ್ಥಳವಿಲ್ಲದೆ ಇಡೀ ದಿನವೆಲ್ಲ ಒದ್ದಾಡುತ್ತಿದ್ದು, ಕೋರ್ಟಿನ ಅಧಿಕಾರಿಗಳ ಒರಟು ನಡತೆಗೆ ತುತ್ತಾಗಿ ತಿರುಗಿ ಬರಬೇಕಾಗುತ್ತದೆ. ಹಾಗಲ್ಲದೆ ಭೇದವೆಣಿಸದೆ ದಿನಂಪ್ರತಿ ಪ್ರತಿಯೊಬ್ಬ ಸಾಕ್ಷಿದಾರನಿಗೂ ೧೦ ಇಲ್ಲವೆ ೧೫ ರೂಪಾಯಿಗಳನ್ನು ಕೊಟ್ಟು, ಅವನಿಗೆ ಕಾದಿರಲು ಆಧುನಿಕ ಸೌಕರ್ಯವುಳ್ಳ ವಿಶ್ರಾಂತಿ ಶಾಲೆ ಇಲ್ಲವೆ ವಾಚನಾಲಯವನ್ನು ಒದಗಿಸಿಕೊಟ್ಟರೆ, ಮಧ್ಯಮ ವರ್ಗದ ಅಥವಾ ಕೆಳವರ್ಗದ ಯಾವ ಮನುಷ್ಯನೂ ಸಾಕ್ಷಿಗಾರನಾಗಿ ಬರಲು ವ್ಯಸನಪಡಲಾರನು. ಅದೇ ರೀತಿಯಲ್ಲಿ ಈಗಿನಂತೆ ಶಾಸನಸಭೆ ಮತ್ತು ಸಮಿತಿಗೆ ಬಂದವರಿಗೆ ಯಥೇಚ್ಛ ಸಂಬಳ ಕೊಡದಿದ್ದರೆ ಮತ್ತು ಸಂಬಳದ ಮಾನವು ಇತರ ಉದ್ಯೋಗ ಮಾಡದೆ ಮಧ್ಯಮ ವರ್ಗದವನು ತನ್ನ ಕುಟುಂಬವನ್ನು ಪೊರೆಯಲು ಸಾಕಾಗುವಷ್ಟಿಲ್ಲದಿದ್ದರೆ ಇಂದು ಕಂಡುಬರುವ ಸ್ಪರ್ಧೆ ಅಲ್ಲಿ ಇರುತ್ತಲೇ ಇರಲಿಲ್ಲ.

ಶಾಸನಸಭಾ ಸದಸ್ಯರಿಗೆ ನಿಯಮ ಪ್ರಕಾರ ಸಂಬಳ ಕೊಡುವ ಪದ್ಧತಿಯನ್ನು ಕಾರ್ಮಿಕರ, ಕಾರಕೂನರ ಮತ್ತು ಅಂಗಡಿಕಾರರ ಮುಖಂಡರಿಗೆ ಶಾಸನ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಅನುಕೂಲವೊದಗಿಸುವುದಕ್ಕಾಗಿ ಹೊರನಾಡುಗಳು ಅಮಲಿನಲ್ಲಿ ತಂದಿರಬೇಕೆನಿಸುತ್ತದೆ.

ನಿಕಟಕಾಲದಲ್ಲಿ ಅವರು ಹೊಟ್ಟೆಗೆ ಗಳಿಸುವುದನ್ನೂ ಸಾರ್ವಜನಿಕ ಸೇವೆಯನ್ನೂ ಮಾಡಲಾರರು. ಆದರೆ ಅವರ ಸಂಬಳದ ಪ್ರಮಾಣವು ಸಾಮಾನ್ಯ ಕಾರಖಾನೆಯ ಕೆಲಸಗಾರ, ಕಾರಕೂನ ಇಲ್ಲವೆ ಚಿಕ್ಕ ಅಂಗಡಿಕಾರ ಇವರ ದುಡಿಮೆಗಿಂತ ಹೆಚ್ಚಿರಬಾರದು. ಪರದೇಶಗಳಲ್ಲಿಯ ವೇತನಮಾನ ಹೇಗಿದೆಯೆಂಬುದು ನನಗೆ ಗೊತ್ತಿಲ್ಲ. ಆದರೆ ಹಿಂದುಸ್ತಾನದಲ್ಲಿ ನಿತ್ಯದ ಭತ್ತೆಯ ಮಾನವನ್ನು ಕಾರಕೂನ, ಉದ್ಯಮಿ, ಕೆಲಸಗಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಣಯಿಸಿರದೆ, ಐ. ಸಿ. ಎಸ್. ಅಧಿಕಾರಿಗಳು, ವಣಿಕ್‌ಚಕ್ರವರ್ತಿಗಳು, ಪ್ರಥಮಶ್ರೇಣಿಯ ವಕೀಲರು ಮತ್ತು ವೈದ್ಯರು ಇಂಥವರ ಜೀವನಮಟ್ಟವನ್ನು ಹಿಡಿದು ನಿರ್ಣಯಿಸಲಾಗಿದೆ. ಆದರೆ ಈ ವರ್ಗದ ಶಾಸನಸಭಾ ಸದಸ್ಯರು ಅತಿ ವಿರಳ. ಉಳಿದವರಿಗೆ ಆ ರೀತಿ ಬದುಕುವ ರೂಢಿಯೂ ಇಲ್ಲ, ಇಷ್ಟವೂ ಇಲ್ಲ. ಅವರು ತಮ್ಮ ಭತ್ತೆಯಲ್ಲಿ ಹಣ ಉಳಿಸಿಕೊಂಡು ಅದರಿಂದಲೇ ಒಂದು ಆದಾಯವನ್ನು ಕೂಡಿಸುವುದರಲ್ಲೇ ಹೆಚ್ಚು ಆಸಕ್ತರಾಗಿರುತ್ತಾರೆ. ಇದು ಸಾರ್ವಜನಿಕ ಸೇವೆಯಿಂದ ವ್ಯಾಪಾರ ಮಾಡುವ ಬಗೆ. ಕಾಂಗ್ರೆಸ ಇಲ್ಲವೆ ಇನ್ನಾವುದಾದರೂ ರಾಜಕೀಯ ಸಂಸ್ಥೆಯು ಅಧಿಕಾರಕ್ಕೆ ಬಂದು ಯಾವುದರೂ ಉದಾತ್ತ ಧ್ಯೇಯಗಳನ್ನು ಸಾಧಿಸಬೇಕೆಂದಿದ್ದರೆ ಈ ಭತ್ತೆಗಳಿಗೆ ಉಗ್ರವಾಗಿ ಕಡಿತ ಹಾಕಬೇಕು.

ಬಿರುದನ್ನು ಕೊಡುವದು ಒಳ್ಳೆಯ ಪದ್ಧತಿಯಲ್ಲ. ಆದರೂ ಅದರಿಂದ ಒಂದು ಲಾಭವಿತ್ತು. ಸರಕಾರನಿಗೆ ಅದರಿಂದ ಹೆಚ್ಚು ನಷ್ಟವಾಗುವುದಿಲ್ಲ, ಆದರೂ ಅದಕ್ಕಾಗಿ ಬಿರುದಾಂಕಿತನು ಹೆಚ್ಚು ಮೂಲ್ಯವನ್ನು ತೆರಬೇಕಾದರೂ ಸಿದ್ಧನಾಗುವಷ್ಟು ತೃಪ್ತಿ ಅವನಿಗೆ ಅದರಿಂದ ಲಭಿಸುತ್ತದೆ. "ಸರ್" ಎಂಬ ಬಿರುದನ್ನು ಪಡೆಯಲು ಒಮ್ಮೆ ೩ ಲಕ್ಷ ರೂಪಾಯಿಗಳನ್ನು ತೆರಬೇಕಾಗಿತ್ತೆಂಬುದನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಆ ಬಿರುದುಳ್ಳವರಿಗೆ ಹೆಚ್ಚಿನ ಯಾವ ಹಕ್ಕುಗಳೂ ಇರಲಿಲ್ಲ. ಅವರಿತ್ತ ಹಣವನ್ನು ಸಾಮಾನ್ಯವಾಗಿ ಸಾರ್ವಜನಿಕ ಧರ್ಮಕಾರ್ಯಗಳಿಗೆ ಬಳಸಲಾಗುತ್ತಿತ್ತು. ಅದೇ ಪ್ರಕಾರ "ರಾವ್" ಇಲ್ಲವೆ "ಖಾನ್" ಸಾಹೇಬ್ ಮತ್ತು ಬಹಾದೂರ ಬಿರುದನ್ನು ಕೊಟ್ಟದ್ದಕ್ಕಾಗಿ ಈ ಸಾಹೇಬ್ ಮತ್ತು ಬಹಾದೂರರು ಬಿಳಿಯ ಸಾಹೇಬರಿಗಾಗಿ ತಮ್ಮ ಖರ್ಚಿನಿಂದಲೇ ತಾವು ಜೀವಾವಧಿ ಕೃತಜ್ಞತೆಯಿಂದ ದಾಸರಾಗಿ ದುಡಿದರು. ಅವರಲ್ಲೂ ಕೆಲವರು ತಮ್ಮ ಧನಸಂಗ್ರಹದಲ್ಲಿ ಸಹ ತಮ್ಮ ಬಿರುದನ್ನು ಲಾಭಕರವಾಗಿ ಬಳಸಿಕೊಂಡಿರಬೇಕು. ಆದರೆ ಬಹುಜನರಿಗೆ ಅದು ಹುಸಿ ಜಂಭದ ತೃಪ್ತಿಗಾಗಿ ಅಲ್ಲದೆ ಮತ್ತಾವ ಪ್ರಯೋಜನಕ್ಕೆ ಬಿದ್ದಿಲ್ಲ.

ಕೆಲವು ಮಟ್ಟಿಗೆ ನಾವು ಬಿರುದುಗಳನ್ನು ಓಡಿಸಿಬಿಟ್ಟಿದ್ದೇವೆ. ಬುದ್ಧಿವಂತಿಕೆಯಿಂದಲೇ ನಾವು ಕೆಲಮಟ್ಟಿಗೆ ಮಾತ್ರ ಹಾಗೆ ಮಾಡಿದ್ದೇವೆ. ಏಕೆಂದರೆ ಈಗ ತೆಗೆದುಹಾಕಲಾದವುಗಳು ಕೇವಲ ಸರಕಾರೀ ಬಿರುದುಗಳು. ಗೌರವಪದದ ರೂಪದಲ್ಲಿ ವಿಶ್ವವಿದ್ಯಾನಿಲಯಗಳು ಕೆಲಮಟ್ಟಿಗೆ ಬಿರುದು ಕೊಡುವ ಕೆಲಸವನ್ನು ಕೈಕೊಂಡಿವೆ. ಮತ್ತು ಅವುಗಳಿಂದ "ಡಾಕ್ಟರೇಟ್"ನ್ನು ಪಡೆವ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತಿದೆ. ಆದರಿಂದ ಒಬ್ಬ ಡಿ. ಎಸ್‌ಸಿ. ಇಲ್ಲವೆ ಎಲ್‌ಎಲ್. ಡಿ. ಯು ವಿಜ್ಞಾನ ಅಥವಾ ಕಾಯದೆಯಲ್ಲಿ ತಜ್ಞನಿದ್ದುದರಿಂದಲೇ ಜೀವನದಲ್ಲಿ ಉತ್ತಮ ಸ್ಥಾನ ಪಡೆದಿರುವನೋ ಹೇಗೆಂಬುದನ್ನು ತಿಳಿಯುವುದು ಕಷ್ಟಕರವಾಗುತ್ತದೆ.

ಆದರೆ ವಿಶ್ವವಿದ್ಯಾನಿಲಯದ ಪ್ರಶಸ್ತಿಗಳನ್ನು ಕೊಡುವುದು ಇಲ್ಲವೆ ತೆಗೆದುಕೊಳ್ಳುವುದು ಇನ್ನೂ ಕಷ್ಟವಾಗಿಯೇ ಉಳಿದಿದೆ. ಆದುದರಿಂದ ಜನರು ತಮ್ಮ ಮುಖಂಡರನ್ನು ಗೌರವಿಸಲು ಮತ್ತೊಂದು ಮಾರ್ಗವನ್ನು ಕಲ್ಪಿಸಿಕೊಂಡಿದ್ದಾರೆ. ಅದೆಂದರೆ, ಕಾಯದೆ ಆಜಂ, ಮಹಾತ್ಮ, ಲೋಕಮಾನ್ಯ, ಲೋಕಸೇವಕ, ಸರದಾರ, ವೀರ, ಕರ್ಮವೀರ, ದೇಶಬಂಧು, ನೇತಾಜಿ, ಸಂತ, ತಪಸ್ವಿ, ಆಚಾರ್ಯ, ದೇಶಭಕ್ತ ಮುಂತಾದ ಜನಪ್ರಿಯ ಬಿರುದುಗಳ ಮೂಲಕ. ಇಂಗ್ಲೆಂಡಿನಲ್ಲಿ ತಮಗೆ ಪ್ರಿಯನಾದ ಮುಖಂಡನಿಗೆ ಅವನ ಹೆಸರನ್ನು ಸಣ್ಣದು ಮಾಡಿ ಬಾಬ್, ಬಿಲ್ ಇಲ್ಲವೆ ಡಿಕ್ ಎಂದು ಕರೆದು ಜನರು ಗೌರವಿಸುತ್ತಾರೆ. ಭಾರತದಲ್ಲಿ ಅದನ್ನು ಅವಿನಯವೆಂದು ಭಾವಿಸಲಾದೀತು. ಸರಕಾರೀ ಬಿರುದುಗಳಂತೆ ಇವಾವರೂ ಕೆಲವೆಡೆ ಸ್ವಯಂ ಪ್ರವೃತ್ತವೂ ಬಹಳ ಅರ್ಹವೂ ಇದ್ದರೆ ಉಳಿದೆಡೆ ಕೃತಕವೂ ಎನಿಸಿವೆ.

ಸರಕಾರೀ ಬಿರುದುಗಳನ್ನು ಕಿತ್ತು ಹಾಕಿದ್ದರಿಂದ ತಮ್ಮ ಗೌರವದ ಹಸಿವನ್ನಿಂಗಿಸಿಕೊಳ್ಳಲು ಜನರಿಗೆ ಬೇರೆಯ ಸಾಧನವೇ ಇಲ್ಲದಂತಾಗಲಿಲ್ಲವೆಂಬುದೇ ಮುಖ್ಯ ಮುದ್ದೆ. ಜನ್ಮ ದಿನೋತ್ಸವ ಮತ್ತು ಸ್ಮಾರಕ ಗ್ರಂಥ ಸಮರ್ಪಣ ಮುಂತಾದವು ಅದೇ ವರ್ಗಕ್ಕೆ ಸೇರುತ್ತವೆ. ನಮ್ಮಲ್ಲಿ ಗುರಿಯಾಗುವದೆಂದರೆ ಸಾರ್ವಜನಿಕರು. ಅವರೀಗ ಪ್ರತಿಯೊಂದು ಸಾರ್ವಜನಿಕ ಸೇವೆ ಇಲ್ಲವೆ ಅಪಸೇವೆಗೂ ಅಂಥ ಬಿರುದನ್ನು ಕೊಟ್ಟದ್ದಕ್ಕಾಗಿಯೂ ತಪ್ಪು ದಂಡ ತೆರಬೇಕಾಗಿದೆ.

ಸರಕಾರವು ಬಿರುದು ಕೊಡುವ ಪದ್ಧತಿಯನ್ನು ಪುನರುಜ್ಜೀವನಗೊಳಿಸಬೇಕೆಂದು ನಾನು ಈ ಟಿಪ್ಪಣಿಗಳನ್ನು ಮುಂದಿಡುತ್ತಿಲ್ಲ. ತದ್ವಿರುದ್ಧವಾಗಿ, ಸರಕಾರವು ತಾನು ಕೊಡದ ಬಿರುದವನ್ನು ಹಚ್ಚಿ ಒಬ್ಬ ವ್ಯಕ್ತಿಯು ಸಂಬಂಧವಾಗಿ ಮಾತು ಬಂದಾಗ ಎಂದೂ ತನ್ನ ಪತ್ರ ಇಲ್ಲವೆ ಹೇಳಿಕೆಯಲ್ಲಿ [illegible] ಮತ್ತು ಸಾರ್ವಜನಿಕರಿಗೂ ಹಾಗೆ ಮಾಡಬಾರದೆಂದು ಬೋಧಿಸಬೇಕು. ಒಂದು ಬಿರುದನ್ನು ಕೊಡಲೇಬೇಕಾಗಿ ಬಂದರೆ ಸರಕಾರವೇ ಸ್ವತಃ ಒಂದು ಕಾರ್ಯಕ್ಕೆ ಸಂಬಂಧಿಸಿ ಇಲ್ಲ ವೈಯಕ್ತಿಕವಾಗಿ ಅದನ್ನು ಕೊಡಬೇಕು. ತನ್ನ ಆಡಳಿತದ ಕ್ಷೇತ್ರದಲ್ಲಿ ಒಂದೆಡೆ ಒಂದು ಜ್ಞಾನಶಾಖೆಯಲ್ಲಿ ಕೆಲಸ ಮಾಡುತ್ತಿರುವವನ ವಿಶೇಷಜ್ಞತೆಗಾಗಿ ಅಲ್ಲದೆ, ಸಾಮಾನ್ಯರು ಪರೀಕ್ಷೆಗಳ ಮೂಲಕ ಪಡೆಯುವ ಪ್ರಶಸ್ತಿಗಳನ್ನು ಅವರಿಗೆ ವಿಶ್ವವಿದ್ಯಾನಿಲಯವು ಕೊಡಕೂಡದು; ಮತ್ತು ಅವನ್ನಾದರೂ ಒಮ್ಮೆ ಮಾತ್ರ ಕೊಡತಕ್ಕದ್ದು. ಒಮ್ಮೆ ಅಣ್ಣಾಮಲೈ ಅಥವಾ ಕಾಶೀ ವಿಶ್ವವಿದ್ಯಾನಿಲಯವು ಡಾ. ರಾಧಾಕೃಷ್ಣನ್‌ರಿಗೆ [illegible] ಕೊಟ್ಟರೆ [illegible] ಇತರ ವಿಶ್ವವಿದ್ಯಾನಿಲಯಗಳು ಪುನಃ ಪುನಃ ಅದನ್ನೇ ಕೊಡಲು ಏಕೆ ಮುಂದಾಗಬೇಕು?

ಸಾರ್ವಜನಿಕರೂ ವ್ಯಕ್ತಿಗಳೂ ಬಿರುದು ಕೊಡುವುದರಲ್ಲಿ ಇನ್ನು ಹೆಚ್ಚು ಸ್ವಯಂಸಂಯಮ ತೋರಿಸಬೇಕು. ಈ ರೂಢಿಗಳು ಸಾರ್ವಜನಿಕ ಮನುಷ್ಯರ ಜೀವನವನ್ನು ಕಹಿಯನ್ನಾಗಿ ಮಾಡುವುದಲ್ಲದೆ ಅನಾರೋಗ್ಯಕರವಾದ ಸ್ಪರ್ಧೆ ಮತ್ತು ಮತ್ಸರಗಳಿಗೆ ಎಡೆಮಾಡಿಕೊಡುವುವು. ಆದುದರಿಂದ ಸಂಬಳ ಮತ್ತು ಪ್ರಶಸ್ತಿದಾನಗಳೆರಡನ್ನೂ ಬಹಳ ಮಟ್ಟಿಗೆ ಕಡಿಮೆ ಮಾಡಬೇಕು. ಆರ್ಥಿಕ ದೃಷ್ಟಿಯಿಂದ ಅತೀ ಶ್ರಮವಹಿಸುವಷ್ಟು ಸಂಬಳ ಇರಕೂಡದು. ಈ ವಿರಳ ಸಂದರ್ಭದಲ್ಲಲ್ಲದೆ ಮತ್ತಾವಾಗಲೂ ಬಿರುದನ್ನು ಕೊಡತಕ್ಕದ್ದು ಅಥವಾ ಮನ್ನಿಸಬಾರದು.

ನಿದರ್ಶನ ಸಲಹೆಯೊಂದನ್ನು ಕೊಡುವುದಾದರೆ, ಸರಕಾರವು ಸ್ವಚ್ಛವಾದ ಒಂದು ಗೊತ್ತುವಳಿಯಿಂದ ಔಪಚಾರಿಕವಾಗಿ ಸರದಾರ ಪಟೇಲ್ ಎಂಬಂಥ ಸುಪ್ರಸಿದ್ಧ ಬಿರುದನ್ನು ಕೂಡ ಒಂದೇ ಮನ್ನಿಸಬೇಕು ಇಲ್ಲವೇ ಬಿಟ್ಟುಬಿಡಬೇಕು.

ವರ್ಧಾ, ೧೯-೭-೪೮ — ಕಿ. ಘ. ಮಶ್ರೂವಾಲಾ

ನನ್ನ ಉದ್ಧಾರಕ ಬಾಪು

೨

ಬಾಪು ಅವರ ಕಟ್ಟಪ್ಪಣೆಯ ಮೇರೆಗೆ ನಾನು ತಡೆದುಕೊಳ್ಳಲೇಬೇಕಾಯ್ತು. ಆದರೆ ಕೆಲ ದಿನಗಳ ನಂತರ ಬಾಪು ತಾವು ೩೦ ಸಪ್ಟೆಂಬರ ೧೯೪೪ ಕ್ಕೆ ಸೇವಾಗ್ರಾಮಕ್ಕೆ ತೆರಳುವದಾಗಿ ತಿಳಿಸಿದರು. ಆಗ ತಡೆಯಲಾಗದೆ ಬಾಪು ಅವರ ಹುಟ್ಟುಹಬ್ಬಕ್ಕೆ ನಾನೂ ಅಲ್ಲಿರಬೇಕೆಂಬ ತವಕದಿಂದ ಸೇವಾಗ್ರಾಮಕ್ಕೆ ಲಗುಬಗೆಯಿಂದ ಹೊರಟೆ. ಎಂದಿನಂತೆ ಬಾಪು ಅಸೀಮ ಸ್ನಿಗ್ಧತೆಯಿಂದ ಮೈದಡವಿ ನನ್ನನ್ನು ಬರಮಾಡಿಕೊಂಡರು. ನನ್ನ ಎದೆತುಂಬಿ ಬಂದು ಮಾತುಗಳೇ ಹೊರಡದಾದವು. ಈಗ ನಾನು ನನ್ನ ಗುರುವಿನ ಸಮೀಪಕ್ಕೆ ಇದ್ದೆನಾಗಿ ನನ್ನ ವಿದ್ಯೆಯ ವ್ಯಕ್ತಿತ್ವವನ್ನು ಅವರಲ್ಲಿ ಲೀನಗೊಳಿಸಿ ನನ್ನ ದುಃಖವನ್ನು ಮರೆಯಲು ಯತ್ನಿಸಿದೆ. ಇಷ್ಟೇ ಅಲ್ಲ. ಏನೂ ಆಗಿಲ್ಲವೆನ್ನುವಂತೆ ಉಲ್ಲಾಸದಿಂದಿರಲೂ ನಾನು ಹವಣಿಸಿದೆ. ಆದರೆ ಈ ನನ್ನ ಪ್ರಯತ್ನವು ವಿಫಲವಾಯ್ತು ಇದು ಸಹಜವೇ. ನನ್ನ ದುಃಖವನ್ನು ಹತ್ತಿಕ್ಕಿಕೊಳ್ಳಲಾಗದೆ ಒಂದು ದಿನ 'ಪ್ರಾತಸ್ಮರಣೆಯಾದೊಡನೆ ಬಾಪು ಅವರು ಬೈಲಲ್ಲಿ ಮಂಚದ ಮೇಲೆ ಸೊಳ್ಳೆಯ ಪರದೆಯಲ್ಲಿ ಮಲಗಿದಲ್ಲಿಗೆ ಹೋಗಿ ನನ್ನ ಮುಖವನ್ನು ಅವರ ಎದೆಯಲ್ಲಿ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ. ಹೀಗೆ ಕೂಸಿನಂತೆ ನಾನು ಒಂದು ತಾಸಿಗೂ ಮಿಕ್ಕಿ ದುಃಖಿಸಿರಬೇಕು. ನಾನು ಬಾಪು ಅವರ ಮಂಚದ ಬಳಿ ಮೊಣಕಾಲೂರಿ ಕುಳಿತು ಅವರು ನನ್ನ ಮೈದಡವಿ ಕಿವಿಯಲ್ಲಿ ಉಸುರುವ ವಾತ್ಸಲ್ಯದ ವಚನಗಳನ್ನು ಆಲಿಸುತ್ತಿದೆ. ಬಾಪು ವಿನೋದನಾದ ಈ ಬಗೆಯ ಎದೆಮಾತುಗಳಿಂದ ನನ್ನ ಭಾವೋದ್ವೇಗವು ಅದೆಷ್ಟೋ ಸ್ತಿಮಿತಕ್ಕೆ ಬಂದಿತು, ಮತ್ತು ಅಂದಿನಿಂದ ನಸುಕಿನಲ್ಲಿ ಅವರೊಟ್ಟಿಗಿದ್ದು ಅವರಿಂದ ಸಾಧ್ಯವಿದ್ದಷ್ಟು ಸಾಂತ್ವನ ಪಡೆಯತೊಡಗಿದೆ.

ಆಶ್ರಮದಲ್ಲಿ ನಾನೆರಡು ತಿಂಗಳಿದ್ದೆ. ನನ್ನ ಪ್ರೀತಿಯ ಬಾಪು ಅವರ ಸಹವಾಸದ ಅಂದಿನ ಅಮೌಲ್ಯ ಸಮಯಗಳನ್ನೂ ಅವರು ನನ್ನ ಮೇಲೆ ಸುರಿಸಿದ ಪ್ರೇಮವರ್ಷಣವನ್ನೂ ನಾನೆಂದಿಗೂ ಮರೆಯಲಾರೆ. ದಿನವೂ ಮುಂಜಾನೆ ನಾನು ಅವರ ಆಶೀರ್ವಾದಕ್ಕಾಗಿ ತಲೆಬಾಗಿ ನಿಂತಾಗ ಅವರು ಮೃದು ಮಧುರ ನಗೆಬೀರಿ, "ಒಳ್ಳೇದು, ಆನಂದ ಇರುಳನ್ನು ಹೇಗೆ ಕಳೆದೆ?" ಎಂದು ಕೇಳುತ್ತಿದ್ದರು. ಆಗ ನಾನು ಒಂದನ್ನೂ ಬಚ್ಚಿಡದೆ ನಾನು ಏನಿರುವೆ ಹೇಗಿರುವೆನೆಂಬುದು ಬಾಪುಗೆ ಗೊತ್ತಾಗಲೆಂದು ಅವರಿಗೆ ಎಲ್ಲವನ್ನೂ ಹೇಳಿಬಿಡುತ್ತಿದ್ದೆ. ಮತ್ತೆ ಅವರು ಸಾಂತ್ವನ ವಚನ ಹೇಳಿ ನಾನು ಮರೆತೇನೆಂದು ಒಂದು ಕಾಗದದ ಮೇಲೆ ಅಂದಿನ ದಿನವೆಲ್ಲ ನಾನು ಧ್ಯಾನ ಮಾಡಲೋಸುಗವೇನನ್ನೋ ಬರೆದುಕೊಡುತ್ತಿದ್ದರು. ೧೩-೧೦-೧೯೪೪ ರಿಂದ ಮುಂದೆ ೧೫ ದಿನ ಹೀಗೆ ಅವರು ಒಂದೇ ಸವನೆ ಬರೆದುಕೊಟ್ಟರು: ಆ ಮೇಲೆ ಅವರು ನನ್ನನ್ನು ಭೀಮಾವರಂಕ್ಕೆ ನೈಸರ್ಗಿಕ ಚಿಕಿತ್ಸೆಯೊಂದಲು ಕಳಿಸುವ ತನಕ ಆಗಾಗ ಬರೆಯುತ್ತಲೇ ಇದ್ದರು. ಕಲ್ಲಾಗಿಗೊಂಡ ನನ್ನ ಎದೆಯನ್ನು ಸಂತೈಸಲು ಅವರು ಬರೆದ ಮಾತುಗಳನ್ನು ಲೋಕದ ಇನ್ನುಳಿದ ನೊಂದ ಜನಕ್ಕೂ ಹಂಚಿಕೊಡದಿದ್ದರೆ ಅದು ಸ್ವಾರ್ಥವಾದೀತು. ಅವರು ೧೪-೧೦-೪೪ ಕ್ಕೆ ಬರೆದುದು ಹೀಗೆ:

"ದೇವರನ್ನೇ ಅನುಸಂಧಾನ ಮಾಡುವವರು ಜೀವಂತ ಜನರನ್ನಾಗಲೀ ಮೃತ ಜನರನ್ನಾಗಲೀ ನೆನೆಸುವುದೇ ಇಲ್ಲ. ಈ ಮಾತನ್ನು ನೀನು ಸರಿಯಾಗಿ ಅರಗಿಸಿಕೊಂಡಿಯಾದರೆ ನಿನಗೆಂದೂ ದುಃಖವಾಗುವದಿಲ್ಲ."

ಮತ್ತೆ ೧೫.೧೦.೧೯೪೪ ಕ್ಕೆ:

"ಮತ್ತೆ ಯತ್ನಿಸು ಎಂಬ ಕವಿತೆ ನಿನಗೆ ಗೊತ್ತೆ? ಸೋಲೆಂಬುದಕ್ಕೆ ಆಸ್ಪದವೇ ಇಲ್ಲ. ಇನ್ನುಳಿದ ನಂಬಿಗೆಯಲ್ಲ ವ್ಯರ್ಥ. ದೇವರಲ್ಲಿ ವಿಶ್ವಾಸವಿಡು. ವಿದ್ಯೆಯ ಸಾವಿನ ಪಾಠ ಅದೇ ಆಗಿದೆ. ನಿನ್ನ ಪ್ರೇಮವೀಗ ಒರೆಗೆ ಹತ್ತಲಿದೆ. ಇಷ್ಟು ಇಂದಿನ ದಿನಕ್ಕೆ."

ಮರುದಿನ ೧೬-೧೦-೧೯೪೪ ಕ್ಕೆ ನಾನು ಬಾಪು ಅವರಿಗೆ, ನನ್ನ ದುಃಖವಿನ್ನೂ ಹೃದಯವನ್ನು ಹಿಂಡುತ್ತಿದೆಯೆಂದೂ ದೇವರ ದಯಾವರ್ಷಣವಾದರೆ ಮಾತ್ರ ನನಗೆ ಹಗುರಾಗಬಹುದು ಎಂದೂ ಹೇಳಿ ಈ ದಯೆಗೆ ನಾನೆಂತು ಪಾತ್ರನಾಗಬಹುದು ಎಂದು ಕೇಳಿದೆ. ಆಗ ಬಾಪು ಹಿಂದುಸ್ತಾನಿಯಲ್ಲಿ ಹೀಗೆ ಬರೆದು ಕೊಟ್ಟರು:

"ದೇವರ ಕಾರ್ಯವನ್ನೇ ಮಾಡುವುದರಿಂದ ದೇವರ ದಯೆ ಇಳಿದು ಬರುತ್ತದೆ. ನೀನು ದೇವರ ಕೆಲಸ ಮಾಡಬೇಕು. ನೀನೆಂದಾದರೂ ನೂಲುವಿಯಾ? ನೂಲುವದು ಸರ್ವಶ್ರೇಷ್ಠವಾದ ಯಜ್ಞ. ನೀನು ಕಣ್ಣೀರು ಸುರಿಸುವಾಗ ಸಹ ನೂಲಬೇಕು.

ಇಂದು ಈ ಬಗ್ಗೆ ವಿಚಾರಮಾಡು."

ಮೂರನೆಯ ದಿನ ಮುಂಜಾನೆ (೧೭-೧೦-೪೪) ದುಃಖಮೂಲಕ ನೂಲುವ ಕೆಲಸದಲ್ಲಿ ನನ್ನ ಮನಸ್ಸು ತೆರೆಯಾಗಿ [illegible] ಎಂದು ಪ್ರಾಂಜಲವಾಗಿ ಒಪ್ಪಿಬಿಟ್ಟೆ. ಆಗ ಅವರು ವಾತ್ಸಲ್ಯದಿಂದ ನನಗೆ ಧೈರ್ಯ ತೋರಿದ ಮಾತುಗಳ ಜೊತೆಗೆ ಹೀಗೆ ಬರೆದರು:

"ಶಾಂತ [illegible] ಚಿತ್ತಕ್ಕೆ ಎಲ್ಲವೂ ಸಾಧ್ಯ. [illegible] ಮತ್ತು ಸಂಕಟಕ್ಕೊಳಗಾದವರ ಆಧಾರವಲ್ಲದೆ ಅವರಿಗೆ ಸಾಂತ್ವನ [illegible] ಆಗಿದೆ. ಇದನ್ನು [illegible] ಎಂದೂ ಮರೆಯಕೂಡದು."

ಮತ್ತು ಅದೇ ದಿನ ಬಾಪು ವಿದ್ಯೆಯ ತಂದೆಗೆ ಅವರ ಪತ್ರಕ್ಕೆ ಉತ್ತರವೆಂದು ಹೀಗೆ ಬರೆದರು:

ಸೇವಾಗ್ರಾಮ ೧೭-೧೦-೪೪.

ನನ್ನ ಪ್ರಿಯ ಕೇವಲರಾಮ,

ನಿಮ್ಮ ಪತ್ರ ಬಂದಿದೆ. ವಿದ್ಯಾ ತನ್ನ ವಿಚಾರಗಳನ್ನು ದೇವರತ್ತ ಹೊರಳಿಸಿದ [illegible] ಸಂಗಾತಿ [illegible] ಅವಳ ವಿಯೋಗವು ನಿಮ್ಮನ್ನೇ ಸಹ [illegible] ತ್ತಿದೆ. ಆದರೆ ಆನಂದನನ್ನು ಸಂತೈಸುವದೇ [illegible]

— [illegible]

ಪ್ರಾಂತ ರಚನಾ ಸಮಿತಿಯ ಪ್ರಶ್ನಮಾಲಿಕೆ

[೬ ನೇ ಪುಟದಿಂದ]

೧೦ ಹೊಸ ಪ್ರಾಂತಕ್ಕೆ ತನ್ನದೇ ಆದ ವಿಶ್ವ ವಿದ್ಯಾಲಯವಿರಬೇಕೆ? ಹಾಗಿದ್ದರೆ ಅದಕ್ಕೆ ಸಂಬಳದ ಕುಲಪತಿಯನ್ನು ನೇಮಿಸಬೇಕೆ? ಇಲ್ಲವೆ ಗೌರವ ಉಪಕುಲಪತಿಗಳಿರಬೇಕೆ? ಉಪಕುಲಪತಿಗಳಿಗೆ ಸಂಬಳ ಕೊಡಬೇಕಾದರೆ ಎಷ್ಟು ಕೊಡಬೇಕು.

೧೧ ಕಂದಾಯ ಮಂಡಳ ಮೊದಲು ಮಾಡಿ ಪ್ರತಿಯೊಂದು ಶಾಖೆಗೂ ಒಬ್ಬ ವರಿಷ್ಠನಿರ ಬೇಕೆ? ಇಲ್ಲವೆ ಒಬ್ಬನ ಅಧೀನದಲ್ಲಿಯೆ ಅನೇಕ ಶಾಖೆಗಳನ್ನು ಇಡಬೇಕೆ? ಪ್ರಾಂತ ದಲ್ಲಿ ನೀವು ಸೂಚಿಸುವ ಶಾಖೆ ಗಳ ವರಿಷ್ಠರು ಮತ್ತು ಅವರ ಸಂಬಳವೆಷ್ಟಿರ ಬೇಕು?

೧೨ ಪ್ರಾಂತದ ಬೇರೆ ಬೇರೆ ನೌಕರರಿಗೆ ನೀವು ಕೊಡಬಯಸುವ ಸಂಬಳದ ಪ್ರಮಾಣ ವೇನು?

೧೩ ಅನುಕೂಲವಿದ್ದರೆ ನೀವು ಹೊಸ ಪ್ರಾಂತದ ಮುಖ್ಯ ಶಾಖೆಗಳ ಆದಾಯ ವೆಚ್ಚದ ಪಟ್ಟಿಯನ್ನು ತಯಾರಿಸಿರಿ.

೧೪ ನಿಮ್ಮ ಎಣಿಕೆಯ ಪ್ರಕಾರ ಪ್ರಾಂತದ ಆದಾಯವು ವೆಚ್ಚಕ್ಕಿಂತ ಕಡಿಮೆಯಾಗಿ ಕೊರತೆ ಬಿದ್ದರೆ ಆ ಕೊರತೆಯನ್ನು ನೀಗಿಸಲು ನೀವು ಯಾವ ಉಪಾಯಗಳನ್ನು ಸೂಚಿಸು ವಿರಿ?

ಹೊಸದಾಗಿ ಕರಭಾರ ಹೇರಬೇಕೆನ್ನುವಿರಾ? ಹಾಗಿದ್ದರೆ ವಿವರಗಳನ್ನು ಹೇಳಿರಿ?

೧೫ ಹಿಂದೀ ಸಂಸ್ಥಾನಗಳು ನಿಮ್ಮ ಹೊಸ ಪ್ರಾಂತದಲ್ಲಿ ಸೇರಬೇಕೆಂದು ನೀವು ಬಯಸು ವಿರಾ? ಹಾಗಿದ್ದರೆ ಯಾವ ಸಂಸ್ಥಾನಗಳು ಲೀನ ವಾಗಬೇಕು ಮತ್ತು ಯಾಕೆ? ಆ ಸಂಸ್ಥಾನದ ಪ್ರಜೆಗಳು ಲೀನೀಕರಣಕ್ಕೆ ಅನುಕೂಲವಿರುವ ರೆಂದು ಅವರ ಅಭಿಪ್ರಾಯವನ್ನು ಖಂಡಿತ ವಾಗಿ ತಿಳಿದುಕೊಳ್ಳಲಾಗಿದೆಯೆ? ಸಂಸ್ಥಾನ ಗಳು ನಿಮ್ಮ ಪ್ರಾಂತವನ್ನು ಸೇರಲು ಒಪ್ಪುವ ದಿಲ್ಲ ಎಂದಿಟ್ಟುಕೊಳ್ಳಿ. ಆಂದರೂ ಹೊಸ ಪ್ರಾಂತ ರಚಿತವಾ ಗಬೇಕೆ?

೧೬ ಹೊಸ ಪ್ರಾಂತದ ರಾಜಧಾನಿ ಎಲ್ಲಿರ ಬೇಕು? ಅದನ್ನು ಕಟ್ಟುವ ವೆಚ್ಚವನ್ನು ಎಂತು ವಹಿಸಬಹುದು?

೧೭ ಹೊಸ ಪ್ರಾಂತ ನಿರ್ಮಾಣದಿಂದ ಆರ್ಥಿಕ ವ್ಯವಸ್ಥೆಯ ಮೇಲೆ ಯಾವ ಪರಿಣಾಮ ವಾಗುವದು? ಇಲ್ಲಿ ಒಕ್ಕಲತನ ಉದ್ಯೋಗ ಗಳು, ಅರಣ್ಯ, ಗಣಿಗಳು, ವ್ಯಾಪಾರ ವಾಣಿಜ್ಯ ಆರ್ಥಿಕಾಭಿವೃದ್ಧಿ ಸಾರ್ವಜನಿಕ ಆರೋಗ್ಯ ಮತ್ತು ಜನರ ಉತ್ಕರ್ಷ ಈ ವಿಷಯಗಳನ್ನು ಗಮನಿಸಬಹುದು.

೧೮ ಹೊಸ ಪ್ರಾಂತಗಳಲ್ಲಿ ಸೊತ್ತು ಸಾಲ ಗಳನ್ನು ಹಂಚಿಕೊಳ್ಳಲು ಯಾವ ಮೂಲ ತತ್ವ ಗಳನ್ನು ನೀವು ಸೂಚಿಸುವಿರಿ?

೧೯ ಹೊಸ ಪ್ರಾಂತಗಳು ನಿರ್ಮಾಣವಾದರೆ ಜನಸಂಖ್ಯೆಯ ಅದಲು ಬದಲು ದೊಡ್ಡ ಪ್ರಮಾಣದಿಂದ ನಡೆದು ಜನರು ಸಂಕಷ್ಟಗಳಿಗೆ ಗುರಿಯಾಗಬೇಕಾಗುವದೆ? ಹಾಗೆನಿಸಿದರೆ ಇದನ್ನು ತಪ್ಪಿಸಲು ನೀವೇನು ಉಪಾಯ ಹೇಳುವಿರಿ?

೨೦ ಮುಂಬಯಿ, ಮದ್ರಾಸ (ಬಂದರ, ಉಪನಗರಗಳು ಸಹಿತ) ಪಟ್ಟಣಗಳ ಸಲು ವಾಗಿ ನಿಮ್ಮವೇನಾದರೂ ಸೂಚನೆಗಳಿವೆಯೆ? ಇವನ್ನು ಯಾವದೊಂದು ಪ್ರಾಂತಕ್ಕೆ ಸೇರಿಸ ಬೇಕೆಂದು ಇಚ್ಛಿಸಿದರೆ ಯಾವ ಪ್ರಾಂತದಲ್ಲಿ ಸೇರಿಸಬೇಕು?

ಈ ಪಟ್ಟಣಗಳು ಪ್ರತ್ಯೇಕ ಪ್ರಾಂತ ಇಲ್ಲವೆ ಉಪಪ್ರಾಂತವಾಗಿರಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿಮ್ಮ ಅಭಿಪ್ರಾಯವನ್ನು ಸ್ಪಷ್ಟೀಕರಿಸಲು ಅಂಕಿಸಂಖ್ಯೆಗಳನ್ನು ಒದಗಿ ಸಿರಿ.

ಎರಡನೇ ಭಾಗ

(ತಮಿಳ ನಾಡು, ಗುಜರಾತ ಮತ್ತು ಮಧ್ಯ ಪ್ರಾಂತದ ಹಿಂದೀ ಭಾಗದ ಸಲುವಾಗಿ)

೧ ಆಂಧ್ರ, ಕರ್ನಾಟಕ ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತಗಳನ್ನು ನಿರ್ಮಿಸಬೇಕು ಎಂದು ನೀವು ಒಪ್ಪುವಿರಾ?

೨ ಈ ಮೇಲಿನ ಹೊಸ ಪ್ರಾಂತಗಳು ರಚಿತ ವಾದ ಮೇಲೆ ಉಳಿದ ಪ್ರದೇಶದ ಆರ್ಥಿಕ ಹಾಗೂ ಆಡಳಿತೆಯ ಮೇಲೆ ಯಾವ ಪರಿಣಾ ಮವುಂಟಾಗುವದು?

೩ ಈ ಹೊಸ ಪ್ರಾಂತ ನಿರ್ಮಾಣದ ಸಂತದ ಉಳಿಯುವ ಪ್ರದೇಶಗಳ ಮುಖ್ಯ ಶಾಖೆಗಳ ಆಯವ್ಯಯ ಪತ್ರಿಕೆಯ ಅಂದಾಜನ್ನು ತಯಾ ರಿಸಿರಿ.

ಈ ಪ್ರಶ್ನೆಗಳಿಗೆ ಉತ್ತರಗಳು ಹೊಸದಿಲ್ಲಿ ಯಲ್ಲಿಯ ಭಾಷಾವಾರ ಪ್ರಾಂತ ರಚನಾ ಸಮಿ ತಿಯ ಕಚೇರಿಗೆ ಇದೇ ಅಗಸ್ಟ ೧೩ ನೇ ತಾರೀಕು ನೊಳಗಾಗಿ ತಲುಪತಕ್ಕದ್ದು.

ಅಂಜಿಕೆ, ಅನುಗ್ರಹ, ಮತ್ತು ನೀತಿಪಾತ

ಮಧ್ಯಪ್ರಾಂತ-ವಱ್ಹಾಡದ ಸ್ಥಾನಿಕ ಸಂಸ್ಥೆ ಗಳ ಮಂತ್ರಿ ಶ್ರೀ ದ್ವಾರಕಾಪ್ರಸಾದ ಮಿಶ್ರರು ಜೂನ ೨೮ ಕ್ಕೆ ಪ್ರಾಂತದ ಕಮಿಶನರ ಮತ್ತು ಡೆಪ್ಯುಟಿ ಕಮಿಶನರರ ಪರಿಷತ್ತಿನಲ್ಲಿ ಮಾಡಿದ ಭಾಷಣದ ಅಂಶಗಳನ್ನು ಕೆಳಗೆ ಕೊಡಲಾಗಿದೆ. ಅವನ್ನು ಆ ಪ್ರಾಂತದ ಸಂಬಂಧದಲ್ಲಿಯೆ ಮಾಡಲಾಗಿದ್ದರೂ ಅದು ಎಲ್ಲ ಪ್ರಾಂತಗಳಿಗೂ ಅನ್ವಯಿಸುವದು.

ಅಂಜಿಕೆ

"ಎಂ. ಎಲ್. ಎ. ಗಳೂ ಕಾಂಗ್ರೆಸ್ಸಿಗರೂ ಆಡಳಿತೆಯ ಕ್ಷಮತೆಯನ್ನು ಕೆಡಿಸುತ್ತಿರುವರೆಂದೂ ಹೆಚ್ಚಾಗಿ ಎಲ್ಲ ಜಿಲ್ಹಾಧಿಕಾರಿಗಳು ಅವರ ಒತ್ತಾಯಕ್ಕೆ ಬಲಿಬೀಳುವರೆಂದೂ ಜಿಲ್ಹೆಗಳಿಂದ ವರದಿಗಳು ಧಾರಾಕಾರವಾಗಿ ಬರುತ್ತಿವೆ. ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರದಲ್ಲಿರುವದರಿಂದ ತಾವು ಕ್ಷೇಮದಲ್ಲಿರಬೇಕೆಂಬ ಇಚ್ಛೆಯುಳ್ಳ ಅಧಿಕಾರಿಗಳು ಕಾಂಗ್ರೆಸ್ಸಿಗರ ಇಚ್ಛೆಯನ್ನು-ಅವು ನ್ಯಾಯವಿರಲಿ ಇಲ್ಲದಿರಲಿ—ಪೂರೈಸುವದವಶ್ಯವೆಂಬ ನಂಬಿಕೆ ಅಧಿಕಾರಿಗಳಲ್ಲಿ ಸಾಮಾನ್ಯವಾಗಿ ಹಬ್ಬಿದೆಯೆಂದು ನನಗೆ ಹಲವು ಬಾರಿ ಹೇಳಲಾಗಿದೆ. ಇದು ಸರಿಯಲ್ಲವೆಂದು ನಾನು ನಿಮಗೆ ಅತ್ಯಂತ ನಿಸ್ಸಂದಿಗ್ಧವಾಗಿ ಹೇಳ ಬಯಸುತ್ತೇನೆ . . .

"ನೀವೆಲ್ಲರೂ ಹೆಸರಿಂದ ಮಾತ್ರವಲ್ಲ ನಿಜವಾಗಿಯೂ ಸಾರ್ವಜನಿಕ ಸೇವಕರು. ಜನರ ಸೇವೆಯನ್ನು ಸಾಧ್ಯವಾದಷ್ಟು ಕೌಶಲದಿಂದ ನಡೆಸುವದು ನಿಮ್ಮ ಕರ್ತವ್ಯವಾದರೂ ಯಾರೊಬ್ಬನಅಯೋಗ್ಯ ಬೇಡಿಕೆಗಳಿಗೆ—ಅವನಾರೇ ಇರಲೊಲ್ಲನೇಕೆ—ತಲೆ ಬಾಗುವದು ಆವಶ್ಯವಿಲ್ಲ.

ಅನುಗ್ರಹ

"ಕೆಲವು ಕಾಂಗ್ರೆಸಿಗರು ಮುಖ್ಯ ಮಂತ್ರಿಗೋ ಇನ್ನಾವ ಮಂತ್ರಿಗೋ ಬಹಳ ಅಚ್ಚುಮೆಚ್ಚಿನವರಾಗಿರುವಂತೆ ನಟಿಸಿ ತಮ್ಮ ಸ್ವಂತದ ಕಾರ್ಯಗಳನ್ನು ಮಾಡಿ ಕೊಟ್ಟರೆ ಬಡತಿ ಮೊದಲಾದವುಗಳನ್ನು ಕೊಡಿಸುವ ಆಶೆಯನ್ನು ಅಧಿಕಾರಿಗಳಿಗೆ ತೋರಿಸುತ್ತಿರುವರೆಂದೂ ಕೇಳಿದ್ದೇನೆ. ಇಂಥ ನಟನೆ ಬುದ್ಧ ತಕ್ಕೆಂದು ನಾನು ನಿಮಗೆ ಖಂಡಿತವಾಗಿ ಆಶ್ವಾಸನಕೊಡುವೆ. ಸರಕಾರದ ಪರವಾಗಿ ಮಾತು ಕೊಡಲಿಕ್ಕೆ ಯಾವ ಕಾಂಗ್ರೆಸ್ಸಿಗನಿಗೂ ಏನೂ ಹಕ್ಕಿಲ್ಲ. ಯಾರೂ ಬಡತಿ ಮೊದಲಾದವುಗಳ ವಿಚಾರದಲ್ಲಿ ಸರಕಾರದ ನಿರ್ಣಯಗಳ ಮೇಲೆ ಎಳ್ಳಷ್ಟು ವರ್ಚಸ್ಸು ಬೀರಲು ಸಮರ್ಥನಾಗಲಾರರು. ಆದುದರಿಂದ ಇಂಥ ವಿಷಯಗಳಿಗೆ ಸ್ವಲ್ಪವೂ ಮಹತ್ವಕೊಡಬಾರದು . . .

"ಪ್ರತಿ ಜಿಲ್ಹೆಯಲ್ಲಿಯೂ ಪಕ್ಷ ಪಂಗಡಗಳೂ ಸೂತ್ರಚಾಲನೆಯೂ ಇದ್ದೇ ಇವೆ. ಆದುದರಿಂದ ಸ್ವಾರ್ಥಸಾಧಕರು ತಮ್ಮ ಸ್ವಂತ ಅಭಿಪ್ರಾಯಗಳನ್ನೇ ಅಥವಾ ತಮ್ಮ ಮಹತ್ವವನ್ನೇ ನಿಮ್ಮ ಮನಸ್ಸಿಗೆ ಬಿಂಬಿಸಲು ಪ್ರಯತ್ನಿಸುವದು ಸಹಜ. ಅಂಥ ಪ್ರಸಂಗಗಳಲ್ಲಿ ನಿಷ್ಪಕ್ಷಪಾತಿಗಳಾಗಿ ಉಳಿದು ನ್ಯಾಯವಾದುದನ್ನೇ ಮಾಡುವದು ನಿಮ್ಮ ಕರ್ತವ್ಯ. ನೀವು ಒರಟುತನವನ್ನೂ ತೋರಿಸಬಾರದು, ಅಳ್ಕೆದೆಯವರಂತೆ ಯೂ ವರ್ತಿಸಬಾರದು.

ನೀತಿಪಾತ

" . . . ಲಂಚಗುಳಿತನವನ್ನೂ ಅಕ್ಷಮತೆಯನ್ನೂ ಸದೆಬಡಿಯಲು ನೀವೆಲ್ಲರೂ ನಮಗೆ ಸಹಾಯ ಮಾಡಿರೆಂದು ನಾನು ದೇಶದ ಹೆಸರಲ್ಲಿ ಬಿನ್ನವಿಸಿಕೊಳ್ಳುತ್ತೇವೆ. ಈ ಹೋರಾಟದಲ್ಲಿ ನೀವೇ ಕಾಂಗ್ರೆಸ್ಸಿಗರಿಂ ತಲೂ ಮಿಗಿಲಾಗಿ ನಮಗೆ ಸಹಾಯರಾಗಬಲ್ಲಿರಿ. ಅದು ನಿಮ್ಮದೆ ಹೋರಾಟವೆಂದು ಬಗೆಯಿರಿ ಮತ್ತು ನಾವಿಬ್ಬರೂ ಸೇರಿ, ಒಂದು ಮಹಾ ಸಹಕಾರಿ ಪ್ರಯತ್ನದಲ್ಲಿ, ನಾವು ಹೆಮ್ಮೆಪಡಬಹುದಾದಂಥ ಮಟ್ಟಕ್ಕೆ ನಮ್ಮ ಆಡಳಿತದ ಯೋಗ್ಯತೆಯನ್ನೇರಿಸಿ ಅನ್ಯರು ನಮ್ಮನ್ನು ಅನುಸರಿಸುವಂತೆ ಸ್ಫೂರ್ತಿ ಕೊಡೋಣ. ನಿಮ್ಮ ಕೈಕೆಳಗಿನ ಎಲ್ಲ ನೌಕರರಿಗೆ ನನ್ನೀ ಸಂದೇಶವನ್ನು ಒಯ್ದು ಮುಟ್ಟಿಸಿ ಲಂಚಗುಳಿತನವೂ ಅಕ್ಷಮತೆಯೂ ನಮ್ಮ ಪ್ರಾಂತದಿಂದ ತೊಲಗಿ ಹೋಗುವಂತೆ ನೋಡಿಕೊಳ್ಳುವದು ನಿಮ್ಮ ಕರ್ತವ್ಯ."

ಲಂಚಗುಳಿತನವನ್ನು ಉತ್ಪಾಟನ ಮಾಡುವದರಲ್ಲಿ ಕಾಂಗ್ರೆಸ್ಸಿಗರ ಸಹಾಯವನ್ನು ನಿರೀಕ್ಷಿಸುವ ಸ್ಥಿತಿಯಲ್ಲಿ ತಮ್ಮ ಸರಕಾರ ಇಲ್ಲವೆಂದು ಹೇಳುವ ಪ್ರಸಂಗ ಶ್ರೀ ಮಿಶ್ರರಿಗೆ ಬಂದುದು ಚಿಂತೆಗೆ ಕಾರಣವಾದ ಸಂಗತಿಯೇ ಸರಿ.

ವರ್ಧಾ ೬-೭-೪೮ } — ಕಿ. ಘ. ಮ.

ನನ್ನ ಉದ್ಧಾರಕ ಬಾಪು

(೯ ನೇ ಪುಟದಿಂದ)

ದುಸ್ತರವಾಗಿದೆ. ಹೀಗಾಗುವದೆಂದರೆ ವಿದ್ಯಾಗೆ ಎರಡು ಬಗೆದಂತೆ ಎಂದು ನಾನು ಹೇಳುತ್ತಿದ್ದೇನೆ. ತನ್ನವರು ತನ್ನ ನಶ್ವರ ಶರೀರಕ್ಕಾಗಿ ದುಃಖಿಸುತ್ತಿದ್ದರೆಂದು ತಿಳಿದರೆ ವಿದ್ಯಾಗೆ ಶಾಂತಿಯೇ ಸಿಕ್ಕದು. ದೇವರ ಕಾರ್ಯದಲ್ಲಿ ತೊಡಗಿ ಅವಳಲ್ಲಿದ್ದ ದೈವೀ ಗುಣಗಳನ್ನು ಅನುಕರಿಸಿದರೆ ಮಾತ್ರ ಅವಳ ಆತ್ಮಕ್ಕೆ ಶಾಂತಿ ಲಭಿಸುವದು. ಆನಂದನು ಶಾಂತಚಿತ್ತನಾಗಲು ಉಪಯುಕ್ತನಾಗಲು ಯತ್ನಿಸುತ್ತಿದ್ದಾನೆ.

ತಮ್ಮ,
ಬಾಪು

ಪ್ರಾಮಾಣಿಕವಾಗಿಯೂ ನಾನು ಶಾಂತಚಿತ್ತನಾಗಲು ಉಪಯುಕ್ತನಾಗಲು ಬಹಳ ಯತ್ನಿಸಿದೆ. ಆದರೆ ಆದೇಕೋ ದುಃಖದಿಂದ ನನ್ನ ಮನಸ್ಸನ್ನು ಪರಾವೃತ್ತಗೊಳಿಸಲು ನನ್ನಿಂದಾಗಲಿಲ್ಲ. ಹಗಲಿರುಳೂ ವಿದ್ಯಾಳ ನೆನಹುಗಳೇ ನನ್ನ ಕಣ್ಣೆದುರು ಬಂದು ನಿಲ್ಲುತ್ತಿದ್ದವು. ೧೬-೧೦-೧೯೪೪ ಕ್ಕೆ ಇದನ್ನು ಒಪ್ಪಿಕೊಂಡು ನಾನು ಬಾಪು ಅವರಿಗೆ ತಿಳಿಸಲು ಅವರು ಹೀಗೆ ಬರೆದುಕೊಟ್ಟರು:

"ಒಂದರೆಗಳಿಗೆಯೂ ಬಿಡುವಿಲ್ಲದ ಹಾಗೆ ನೀನು ನಿನ್ನ ವೇಳಾಪತ್ರಿಕೆಯನ್ನು ಸಿದ್ಧಗೊಳಿಸಿಕೊಳ್ಳಬೇಕು. ಇದೇ ಅಗಲಿದವರ ಬಗ್ಗೆ ತೋರುವ ನಿಜವಾದ ಪ್ರೇಮ. ಅಂಗ್ಲರನ್ನು ನೋಡು. ಅವರೂ ತಮ್ಮವರನ್ನು ಅತ್ಯಂತಿಕವಾಗಿ ಪ್ರೀತಿಸುತ್ತಾರೆ. ಆದರೆ ಅವರು ತಮ್ಮವರನ್ನು ಕಳೆದುಕೊಂಡಾಗ ಇನ್ನಷ್ಟು ರಭಸದಿಂದ ಸೇವಾಕಾರ್ಯದಲ್ಲಿ ನಿರತರಾಗುತ್ತಾರೆ."

೧೮-೧೦-೧೯೪೪ ರಂದು ನಾನು ಬಾಪು ಅವರಿಗೆ, "ತನ್ನವರು ತನ್ನ ನಶ್ವರ ಶರೀರಕ್ಕಾಗಿ ದುಃಖಿಸುತ್ತಿದ್ದಾರೆಂದು ತಿಳಿದರೆ ವಿದ್ಯಾಗೆ ಶಾಂತಿಯೇ ಸಿಕ್ಕದು. ದೇವರ ಕಾರ್ಯದಲ್ಲಿ ತೊಡಗಿ, ಅವಳಲ್ಲಿದ್ದ ದೈವೀ ಗುಣಗಳನ್ನು ಅನುಕರಿಸಿದರೆ ಮಾತ್ರ ಅವಳ ಆತ್ಮಕ್ಕೆ ಶಾಂತಿ ಲಭಿಸುವದು." ಎಂದು ವಿದ್ಯಾಳ ತಂದೆಯವರಿಗೆ ಬರೆದುದರ ರಹಸ್ಯವೇನು ಎಂದು ಕೇಳಿದೆ. ನನ್ನ ಕಣ್ಣೀರೂ ನನ್ನ ಒರಲಿಕೆಯೂ ವಿದ್ಯಾಳ ಆತ್ಮಕ್ಕೆ ತಲ್ಲಣವನ್ನುಂಟುಮಾಡುವದೆಂದು ನಿಮ್ಮ ಗ್ರಹಿಕೆಯೇ ಎಂದೆ. ಹಾಗಿದ್ದರೆ ಇದೇ ವಾದಸರಣಿಗನುಸರಿಸಿ, ವಿದ್ಯಾಳ ಆತ್ಮಕ್ಕೆ ನಾನು ಸಂಕಟಪಡುವದು ತಿಳಿದಿದ್ದರೆ ಅದು ನನ್ನನ್ನು ಸಾಂತ್ವನಗೊಳಿಸುವ ಸನ್ನಿವೇಶಗಳನ್ನೇಕೆ ಉಂಟುಮಾಡಲಿಲ್ಲ ಎಂದು ಕೇಳಲು ಬಾಪು ಅವರು ಹೀಗೆ ಉತ್ತರಕೊಟ್ಟರು.

"ಮೃತರು ಜೀವಂತ ಇದ್ದವರೊಡನೆ ಸಂಪರ್ಕವಿಟ್ಟು ವ್ಯವಹರಿಸಬಲ್ಲರೊ ಇಲ್ಲವೊ ನಮಗೆ ಹೇಳಲುಬಾರದು. ಆದರೆ ಜೀವಂತ ಇದ್ದವರ ಪ್ರಭಾವವು ಮಾತ್ರ ಮೃತಾತ್ಮರ ಮೇಲೆ ಖಂಡಿತವಾಗಿ ಆಗುತ್ತದೆಂಬಲ್ಲಿ ಸಂದೇಹವಿಲ್ಲ. ಆದ್ದರಿಂದ ಅವರಿಗಾಗಿ ನಾವೆಂದೂ ಕಣ್ಣೀರು ಇಡಕೂಡದು.

"ದೇವ ಕಾರ್ಯ ಮೂಲಕವಾಗಿಯೇ ದೇವರ ದಯೆ ದೊರಕುವದು, ಮತ್ತು ಅವನಕಾರ್ಯವೆಂದರೆ ಕಾಯಾವಾಚಾಮನಸಾ ದರಿದ್ರರ ಸೇವೆಮಾಡುವದೇ ಆಗಿದೆ."

೧೯-೧೦-೧೯೪೪ ರ ದಿನ ಕೆಳಗಿನಂತೆ ಬರೆದು ಕೊಟ್ಟರು.

"ಒಬ್ಬ ದರಿದ್ರನಿಗೆ ನಿನ್ನ ಸ್ಥಿತಿಯೇ ಒದಗಿದ್ದಾದರೆ ಅವನೇನು ಮಾಡಬಹುದೆಂಬುದನ್ನು ವಿಚಾರಿಸು. ಅವನು ತನ್ನ ಹೆಂಡತಿಯನ್ನು ಕಳೆದುಕೊಂಡರೆ ಎಂದಿಗಿಂತ ಇಮ್ಮಡಿ ದುಡಿಯುವನು. ಅವನೂ ದೇವರ ಮನುಷ್ಯನೇ. ದೇವಕಾರ್ಯ ಮಾಡುವದರಿಂದಲೇ ಆಂತರಿಕ ಆನಂದ ಲಭಿಸುತ್ತದೆ. ನಾವೆಲ್ಲ ದರಿದ್ರರ ಸ್ಥಳದಲ್ಲಿ ಇದ್ದೇವೆಂದು ಕಲ್ಪಿಸಿಕೊಂಡು ನೋಡಬೇಕು. ಒಂದು ಕ್ಷಣವಾದರೂ ಆಲಸ್ಯದಿಂದ ಕಳೆಯುವದೆಂದರೆ ದೇವರ ಸೊತ್ತನ್ನು ಅಪಹರಿಸಿದಂತೆಯೇ. ಅಂತರ್ಬಾಹ್ಯ ಸುಖಕ್ಕೆ ಇನ್ನು ಬೇರೆ ಉಪಾಯವಿರುವದೆಂದು ನನಗನಿಸುವದಿಲ್ಲ.

"ಇದೆಲ್ಲ ನಿನಗೆ ಅರ್ಥವಾಗುವದೇ? ಇಲ್ಲವೆ ನಾನು ಇಂಗ್ಲೀಷಿನಲ್ಲಿ ಬರೆಯಬೇಕೆಂದು ನಿನ್ನ ಇಚ್ಛೆಯೇ.?"

ಆನಂದ. ಟಿ. ಹಿಂಗೋರಾನಿ

(ಮುಂದರಿವುದು)

ಭಾಷಾನ್ವಯ ಪ್ರಾಂತರಚನೆ

ಗಾಂಧೀಜಿಯ ಅಭಿಪ್ರಾಯ

ಗಾಂಧೀಜಿ ಮತ್ತೂ ಹೇಳಿದ್ದೇನೆಂದರೆ:—

ಇಂದು ಕಾಂಗ್ರೆಸ ಕಾರ್ಯ ಸಮಿತಿಯಸಭೆಯಲ್ಲಿ ಪ್ರಾಂತಗಳ ಭಾಷಾವಾರ ಪುನರ್ಘಟನೆಯ ಬಗ್ಗೆ ಚರ್ಚೆ ನಡೆಯಿತು. ಪಂ. ನೆಹರು ಮತ್ತು ಸರದಾರ ಪಟೇಲರು ಹಾಜರಿದ್ದರು.

ಕಾಂಗ್ರೆಸ್ಸು ಆ ತತ್ವವನ್ನು ಮೊದಲೇ ಅಂಗೀಕರಿಸಿದ್ದು ಭಾಷಾವಾರ ಪ್ರಾಂತರಚನೆಯಿಂದ ರಾಷ್ಟ್ರದ ಸಾಂಸ್ಕೃತಿಕ ಪ್ರಗತಿಗೆ ಸಹಾಯವಾಗುವದರಿಂದ ಅಧಿಕಾರಕ್ಕೆ ಬಂದ ಕೂಡಲೆ ಅದನ್ನು ಕಾರ್ಯಕಾರಿ ಮಾಡುವದಾಗಿ ಸಾರಿದೆ. ಆದರೆ ಪ್ರಾಂತಗಳ ಅಂಥ ಪುನರ್ಘಟನೆ ರಾಷ್ಟ್ರದ ಒಕ್ಕಟ್ಟಿಗೆ ಧಕ್ಕೆ ತರಕೂಡದು. ಪ್ರಾಂತಿಕ ಸ್ವಾಯತ್ತತೆ ವಿನಾಶ ಕಾರಕವಾಗಕೂಡದು. ಅಥವಾ ಪ್ರಾಂತಗಳು ಕೇಂದ್ರವನ್ನು ಲೆಕ್ಕಿಸದೆ ಮನಬಂದ ಹಾದಿಯನ್ನು ಹಿಡಿಯಕೂಡದು. ಪ್ರತಿಯೊಂದು ಪ್ರಾಂತವು ತಾನು ಸರ್ವತಂತ್ರಸ್ವತಂತ್ರವೆಂದು ವರ್ತಿಸಹತ್ತಿದರೆ ಹಿಂದೀ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲದಾಗಿ ಆದರ ಜೊತೆಗೆ ಅಂಗಗಳ ಸ್ವಾತಂತ್ರ್ಯವೂ ಇಲ್ಲದಂತಾಗುವದು.

ಕಾಂಗ್ರೆಸು ಹಿಂದೀ ಸ್ವಾತಂತ್ರ್ಯವನ್ನು ಹಳ್ಳಿಗಳ ಸ್ವಾಯತ್ತತೆಯ ಮೇಲೆ ನಿಲ್ಲಿಸಿದೆ. ಆದರೆ ಕೇಂದ್ರ ಸರಕಾರವು ಹಳ್ಳಿಯಿಂದ ತನ್ನ ಅಧಿಕಾರ ಪಡೆಯುವಂತೆ, ಹಳ್ಳಿಗಳುಕೇಂದ್ರದಿಂದ ತಮ್ಮ ಶಕ್ತಿಯನ್ನು ಪಡೆಯಬೇಕು. ಸಂಕುಚಿತ ಪ್ರಾಂತೀಯತೆಯಲ್ಲಿ ಸಿಕ್ಕು ಆಂಧ್ರ ಮತ್ತು ತಮಿಳರು ಹಾಗೂ ಮುಂಬಯಿ ಮತ್ತು ಕರ್ನಾಟಕದವರು ಪರಸ್ಪರ ದ್ವೇಷ ಮಾಡಲು ಪ್ರಾರಂಭಿಸಿದರೆ ಅದರಂಥ ಘಾತುಕವಾದುದು ಇನ್ನೊಂದಿಲ್ಲ. ಪ್ರಾಂತಿಕ ಭಾಷೆಗಳು ವಿಕಾಸಗೊಳ್ಳಬೇಕಾದರೆ ಭಾಷಾವಾರ ಪ್ರಾಂತರಚನೆ ಅವಶ್ಯಕ. ಹಿಂದುಸ್ತಾನಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡತಕ್ಕದ್ದು. ಆದರೆ ಅದು ಪ್ರಾಂತಿಕ ಭಾಷೆಗಳ ಸ್ಥಾನವನ್ನಾಕ್ರಮಿಸಬಾರದು ಅದು ಪ್ರಾಂತಗಳಲ್ಲಿ ಬೋಧ ಭಾಷೆಯೂ ಆಗಲಾರದು. ಹಿಂದೀಯರಲ್ಲಿ ಹಿಂದುಸ್ತಾನವು ಒಂದು ಎಂಬ ಅರಿವನ್ನುಂಟುಮಾಡುವದೇ ಅದರ ಮುಖ್ಯ ಕೆಲಸ. ಜಗತ್ತಿನಲ್ಲಿ ನಮ್ಮನ್ನು ಗುಜರಾತಿಗಳು, ಮರಾಠಿಗರು ಅಥವಾ ತಮಿಳರು ಎಂದುಗುರುತಿಸದೆ ಹಿಂದೀಯರೆಂದು ಗುರುತಿಸುತ್ತಾರೆ. ಆದುದರಿಂದ ನಾವು ವಿಘಾತಕ ವೃತ್ತಿಗಳಿಗೆ ಉತ್ತೇಜನ ಕೊಡದೆ ಹಿಂದೀಯರಂತೆ ವರ್ತಿಸಬೇಕು. ಈ ಮುಖ್ಯ ವಿಚಾರವೊಂದನ್ನು ಗಮನದಲ್ಲಿಟ್ಟುಕೊಂಡು ಪ್ರಾಂತಗಳ ಪುನರ್ಘಟನೆಯು ಶಿಕ್ಷಣ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ ಕೊಡಬೇಕು.

(೨೫—೧—೧೯೪೮ ನೇ ದಿನ ಗಾಂಧೀಜಿ ಪ್ರಾರ್ಥನೋತ್ತರ ಮಾಡಿದ ಭಾಷಣ. ದಿಲ್ಲಿ ದಿನಚರಿಯ ಪುಟ ೩೭೪—೭೫ ರಿಂದ ಉದ್ಧೃತವಾದುದು)

ಟಿಪ್ಪಣಿ— ಭಾಷಾನ್ವಯ ಪ್ರಾಂತ ರಚನೆಯ ಸಂಬಂಧದಲ್ಲಿ ನನ್ನ ಧೋರಣವು ಗಾಂಧೀಜಿಯ ಧೋರಣಕ್ಕೆ ವಿರೋಧಕವಾಗಿದೆಯೋ ಹೇಗೆಂಬದಾಗಿ ಆಂಧ್ರದ ಮಾನ್ಯ ಮುಂದಾಳುಗಳೊಬ್ಬರು ನನಗೆ ಕೇಳಿದ್ದನ್ನು ಲಕ್ಷಿಸಿ ಈ ಮೇಲಿನ ಅವತರಣಿಕೆಗಳನ್ನು ಕೊಡಲಾಗಿದೆ. ಗಾಂಧೀಜಿ ಮೇಲಿನ ಭಾಷಣದಲ್ಲಿ ಅಭಿಪ್ರಾಯಪಟ್ಟಂತೆಯೇ ನನ್ನ ಧೋರಣವಾದರೂ-ಅದಕ್ಕೆ ಎಷ್ಟೇ ಬೆಲೆಯಿರಲಿ- ಈ ವಿಷಯದಲ್ಲಿ ಇದೆಯೆಂದು ನಾನು ಉತ್ತರ ಕೊಡಬಯಸುವೆ. ಆದರೆ ಈ ಬಗ್ಗೆ ನಾನು ಬಿಚ್ಚು ಮನಸ್ಸಿನವನಿದ್ದು ಸಿದ್ಧಮಾಡಿಕೊಟ್ಟಲ್ಲಿ ನನ್ನ ಧೋರಣವನ್ನು ಬದಲಿಸಬಲ್ಲೆನು. ಗಾಂಧೀಜಿಯ ಮನಸ್ಸಿನ ಒಲವೂ ಹಾಗೆಯೇ ಇದ್ದಿತು.

ವರ್ಧಾ ೧೫—೭—೪೮ —ಕಿ. ಘ. ಮ

ಘಟನೆಯಲ್ಲಿ ಸರ್ವಾಧಿಕಾರದ ಬೀಜಗಳು

ಅಧ್ಯಕ್ಷನಿಗೂ ಮಂತ್ರಿಮಂಡಲಕ್ಕೂ ತಿಕ್ಕಾಟದ ಸಂಭವ

[ಲೇಖಾಂಕ ೨]

[illegible] ಘಟನೆಯ ಕರಡಿನ ಒಗ್ಗೆ ಪ್ರೊ. ವೆಂಕಟರಂಗಯ್ಯ [illegible] ದ ವಿಚಾರಗಳ ಪೂರ್ವಾರ್ಧವನ್ನು [illegible] ಕೊಡಲಾಗಿದ್ದು ಎರಡನೆಯ ಮತ್ತು [illegible]

ಪ್ರಾಂತಿಕ ರಾಜ್ಯ

[illegible]

[illegible] ನಿರ್ದೇಶದಲ್ಲಿಯೂ ಎಲ್ಲ ನಾಗರಿಕರಿಗೂ ಜೀವಿಕೆಯನ್ನು ಗಳಿಸಲು ಸಮಾನಾವಕಾಶ, ಪುಕ್ಕಟೆಯಾದ ಪ್ರಾಥಮಿಕ ಶಿಕ್ಷಣ. ದುರ್ಬಲ ಅಲ್ಪಸಂಖ್ಯಾಕರ ಹಿತರಕ್ಷಣೆ ಮೊದಲಾದ್ದಕ್ಕೆ ಸರಕಾರ ವಿಶೇಷ ಗಮನವೀಯಬೇಕೆಂದು ಸೂಚಿಸಲಾಗಿದೆ.

ಆದರೆ ಜಾತೀಯತೆ ಪೂರ್ತಿಯಾಗಿ ಇನ್ನೂ ಘಟನಾಲೇಖಕರ ಮನಸಿನಿಂದ ತೊಳೆದು ಹೋಗಿಲ್ಲವೆಂದು ತೋರುತ್ತದೆ. ಸರಕಾರಿ ನೌಕರಿಗಳಲ್ಲಿ ಯಾವುದೊಂದು ಪಂಗಡಕ್ಕೆ ಸರಿಯಾದ ಪ್ರಾತಿನಿಧ್ಯವಿಲ್ಲೆಂದು ಸರಕಾರಕ್ಕೆ ಅನಿಸಿದರೆ ಅಂಥವರಿಗೆ ನೌಕರಿಗಳನ್ನು ಕಾಯ್ದಿಡಬಹುದೆಂದು ೧೦ ನೇ ಕಲಮಿನಲ್ಲಿ ಹೇಳಿದೆ. ನೌಕರಿಯಲ್ಲಿ ಪ್ರಾತಿನಿಧ್ಯವಿಲ್ಲದಾಕ್ಷಣ ಆ ಪಂಗಡ ಹಿಂದುಳಿದಿದೆಯೆಂದಾಗಲಿ ಅದನ್ನು ಕೊಟ್ಟಾಕ್ಷಣ ಅದು ಮುಂದೆ ಬರುವದೆಂದಾಗಲಿ ಹೇಳಲಾಗಲ್ಲ. ಇದರಿಂದ ಅತ್ಯಂತ ಅರ್ಹರನ್ನೆ ಸೇರಿಸಿಕೊಳ್ಳುವ ಬದಲು ಜಾತಿ-ಪಂಗಡ ನೋಡಿ ಅನರ್ಹರನ್ನೂ ಸೇರಿಸಿಕೊಳ್ಳುವ ಅಯೋಗ್ಯ ಪರಂಪರೆ ಬರುವದು. ಅಲ್ಲದೆ ಒಕ್ಕೂಟ ಪಾರ್ಲ್ಮೆಂಟಿನ ಕೆಳಮನೆಯಲ್ಲಿಯೂ ಎಲ್ಲ ಸಂಸ್ಥಾನ ಶಾಸನ ಸಭೆಗಳಲ್ಲಿಯೂ ಮುಸ್ಲಿಮರಿಗೂ ಹರಿಜನರಿಗೂ ಹಾಗೆಯೆ ಮುಂಬಯಿ ಮದ್ರಾಸುಗಳಲ್ಲಿ ಕ್ರಿಶ್ಚನ್ನರಿಗೂ ಸ್ಥಾನಗಳನ್ನು ಕಾದಿರಿಸಿದ್ದು ಜಾತೀಯತೆಯ ಇನ್ನೊಂದು ಅವಶೇಷವೇ ಸರಿ. ಒಕ್ಕೂಟ ಕೆಳಮನೆಯ ೫೦೦ ಸ್ಥಾನಗಳಲ್ಲಿ ೧೩೭ ಹೀಗೆ ಕಾಯ್ದಿಡಲ್ಪಟ್ಟ ಸ್ಥಳಗಳಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ಇವೂ ಇಂಥ ಇತರ ಕಲಮುಗಳೂ ಈಗಾಗಲೆ ಇರುವ ಜಾತೀಯ ರಾಜಕಾರಣವನ್ನು ಶಾಶ್ವತಗೊಳಿಸುವದು ಖಂಡಿತ.

ಇನ್ನು ಸಮತೆ, ಸ್ವಾತಂತ್ರ್ಯ, ಸೊತ್ತಿನ ಒಡೆತನಗಳ ಹಕ್ಕುಗಳಲ್ಲದೆ ಧಾರ್ಮಿಕ ಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯಗಳೂ ಕೊಡಲ್ಪಟ್ಟಿವೆ. ಆದರೆ ಧರ್ಮಪ್ರಚಾರದ ಸ್ವಾತಂತ್ರ್ಯ ಕೊಟ್ಟಿದ್ದು [illegible] ಅಲ್ಲಿಲ್ಲದಿರುವದೇ ಲೇಸು

ಈ ಎಲ್ಲ ಹಕ್ಕುಗಳು ನ್ಯಾಯಸ್ಥಾನದಲ್ಲಿ ಸ್ಥಾಪಿಸಲ್ಪಡಬಹುದಾದವು. ಅಂದರೆ ಅವಕ್ಕೆ ವ್ಯತ್ಯಯ ಬಂದರೆ ನ್ಯಾಯಸ್ಥಾನಕ್ಕೆ ಹೋಗಿ ನಾಗರಿಕನು ಅವನ್ನು [illegible]

[illegible] ಉದ್ಯೋಗ ಕೊಡುವದು, [illegible] ಸಹಾಯ ಮಾಡ್ಯುವದು, [illegible] ಆಪತ್ತಿ ಮೊದಲಾದ [illegible] ಗಳಲ್ಲಿ ಸಹಾಯ ಕೊಡುವದೇ [illegible] ಕರ್ತವ್ಯಗಳನ್ನು ಸರಕಾರಕ್ಕೆ [illegible]. ಆದರೆ ಇವು [illegible] ಒಡನೆ ಸಾಧಿಸಬರುವಂಥವಲ್ಲ. ಅವಕ್ಕೆ [illegible] ಬೇಕಾದುದರಿಂದ ಅವನ್ನು ನ್ಯಾಯಸ್ಥಾನದ ಕಕ್ಷೆಯಿಂದ ಹೊರಗಿರಿಸಲಾಗಿದೆ.

ಒಕ್ಕೂಟ ಆಡಳಿತ

ಈ ವರೆಗೆ ಘಟನೆಯ ಕರಡಿಗೆ ಆಧಾರವಾಗಿರುವ ಮೂಲ ತತ್ವಗಳನ್ನು ಚರ್ಚಿಸಿದ್ದಾಯಿತು. ಈಗ ಅದು ಸಂಕಲ್ಪಿಸಿದ ಸರಕಾರದ [illegible] ಪರಾಮರ್ಶಿಸಬೇಕು. ಮೇಲೆ ಹೇಳಿದ ಮೂಲ ತತ್ವಗಳನ್ನು ಕೃತಿಗಿಳಿಸಲು ಅದು ಎಷ್ಟುಮಟ್ಟಿಗೆ ಸಮರ್ಥವಿದೆಯೆಂದು ಆಗ ತಿಳಿಯುವದು.

ಮೊದಲು ಕೇಂದ್ರದ ಅಥವಾ ಒಕ್ಕೂಟದ ರಾಜ್ಯಪದ್ಧತಿಯನ್ನು ತೆಗೆದುಕೊಳ್ಳೋಣ.

ಪ್ರತಿಯೊಂದು ಆಧುನಿಕ ಸರಕಾರದಲ್ಲೂ ಕಾರ್ಯನಿರ್ವಹಣ ಶಾಖೆ, ಶಾಸನ ಸಭೆ, ನ್ಯಾಯ ಶಾಖೆ ಮತ್ತು ನೌಕರವರ್ಗ ಎಂಬ ನಾಲ್ಕು ಅಂಗಗಳಿವೆ. ಒಕ್ಕೂಟ ಸರಕಾರದ ಕಾರ್ಯನಿರ್ವಹಣ ಶಾಖೆ ಸರಕಾರದ ಮುಖ್ಯಸ್ಥನಾದ ಅಧ್ಯಕ್ಷ ಮತ್ತು ಅವನ ಮಂತ್ರಿ ಮಂಡಲದಿಂದೊಡಗೂಡಿದೆ. ಕೇಂದ್ರ ಪಾರ್ಲಮೆಂಟಿನ ಮೇಲ್ಮನೆ ಮತ್ತು ಕೆಳಮನೆಯ ಎಲ್ಲ ಸದಸ್ಯರೂ ಸಂಸ್ಥಾನಗಳ (ಘಟಕ) ಶಾಸನ ಸಭೆಗಳ ಚುನಾಯಿತ ಸದಸ್ಯರೂ ಸೇರಿ ಅಧ್ಯಕ್ಷನನ್ನು ಆರಿಸುತ್ತಾರೆ. ಹೀಗೆ ಅಧ್ಯಕ್ಷನು ಬರಿ ಕೇಂದ್ರದಿಂದ ಆರಿಸಲ್ಪಡದೆ ಘಟಕಗಳ ಪ್ರತಿನಿಧಿಯೂ ಆಗಿರುತ್ತಾನೆ. ಅವನು ಭಾರತದ ನಾಗರಿಕನಾಗಿರಬೇಕು, ೩೫ ವಯಸ್ಸು ಮೀರಿದವನಾಗಿರಬೇಕು ಮತ್ತು ಒಕ್ಕೂಟ ಪಾರ್ಲಮೆಂಟಿನ ಕೆಳಮನೆಗೆ ಆರಿಸಲ್ಪಡಲು ಅರ್ಹನಾಗಿರಬೇಕು. ಅವನ ಅಧಿಕಾರಾವಧಿ ೫ವರ್ಷ. ಆದರೆ ಪಾರ್ಲಮೆಂಟು (ಎರಡೂ ಮನೆ ಸೇರಿ) ೨/೩ ಅಂಶ ಬಹುಮತದಿಂದ ಅವನ ಮೇಲೆ ಘಟನೆಯನ್ನುಲ್ಲಂಗಿಸಿದ ಆರೋಪ ಸ್ಥಾಪಿಸಿ ಅವನನ್ನು ಕಿತ್ತಿಹಾಕಬಹುದು. ಒಬ್ಬನು ಎರಡು ಸಲಕ್ಕಿಂತ ಹೆಚ್ಚು ಅಧ್ಯಕ್ಷ ಪಟ್ಟಕ್ಕೆ ಆರಿಸಲ್ಪಡಲಾರನು. ಅವನಲ್ಲಿ ಔಪಚಾರಿಕವಾಗಿ ಒಕ್ಕೂಟದ ಸಮಸ್ತ ಕಾರ್ಯಾಧಿಕಾರವೂ ಸೈನ್ಯದ ದಂಡನಾಯಕತ್ವವೂ ನಿಹಿತವಾಗಿದೆ. ಇವನಲ್ಲದೆ ಉಪಾಧ್ಯಕ್ಷನೂ ಇದ್ದು ಅವನು ಮೇಲ್ಮನೆಯ ಶಾಶ್ವತ ಅಧ್ಯಕ್ಷನಾಗಿರುವನಲ್ಲದೆ ಅಧ್ಯಕ್ಷನ ಗೈರಹಾಜರಿಯಲ್ಲಿ ಅವನ ಅಧಿಕಾರಗಳನ್ನು ನಡೆಸುವನು. ಅವನನ್ನು ಪಾರ್ಲಮೆಂಟು ಆರಿಸುವದು.

ನಿಜವಾದ ಅಧಿಕಾರ ಮಂತ್ರಿಮಂಡಲದಲ್ಲಿರುವದು. ಅದು ಬ್ರಿಟಿಶ ಮಂತ್ರಿ ಮಂಡಲದಂತೆ ಪಾರ್ಲಮೆಂಟಿನ ಕೆಳಮನೆಗೆ ಹೊಣೆಗಾರವಾಗಿರುವದರಿಂದ ಬಹುಮತದ ಬೆಂಬಲವುಳ್ಳವನನ್ನೇ, ಬೆಂಬಲವಿದಷ್ಟು ಕಾಲ ಮಾತ್ರ, ಮುಖ್ಯಮಂತ್ರಿಯಾಗಿ ಅಧ್ಯಕ್ಷನು ನೇಮಿಸಬೇಕು. ಮತ್ತು ಅವನು ಮಂತ್ರಿಮಂಡಲದ ಸಲಹೆಯಂತೆ ನಡೆದುಕೊಳ್ಳಬೇಕು.

ಹೀಗೆ ಹೊಣೆಗಾರ ಮಂತ್ರಿ ಮಂಡಲವೇ ನಿಜವಾದ ರಾಜ್ಯಭಾರ ಮಾಡುವದು. ಈ ಪಾರ್ಲಮೆಂಟರಿ ಪದ್ಧತಿಯನ್ನು ಅಂಗೀಕರಿಸಲಾಗಿದ್ದರೂ ಯಾವುದೊಂದು ಮಸೂದೆಯ ವಿಷಯಕ್ಕೆ ಅಧ್ಯಕ್ಷನಿಗೆ ಅಸಮಾಧಾನವಿದ್ದರೆ ಆ ಬಗ್ಗೆ ಅವನು ನೇರವಾಗಿ ಪಾರ್ಲಮೆಂಟಿಗೆ ಸಂದೇಶ ಕಳಿಸಬಹುದೆಂದು ವಿಧಿಸಲ್ಪಟ್ಟಿರುವದರಿಂದ ಮಂತ್ರಿ ಮಂಡಲಕ್ಕೂ ಅಧ್ಯಕ್ಷನಿಗೂ ತಿಕ್ಕಾಟವುಂಟಾಗದಿರದು. ಅಮೇರಿಕೆಯಲ್ಲಿ ಈ ಪದ್ಧತಿಯಿರುವದು ನಿಜ. ಆದರೆ ಅಲ್ಲಿ ಅಧ್ಯಕ್ಷನ ಮಂತ್ರಿಮಂಡಲ ಶಾಸನ ಸಭೆಗೆ ಹೊಣೆಗಾರವೂ ಅಲ್ಲ. ಶಾಸನ ಸಭೆಯ ಕಾರ್ಯಕಲಾಪಗಳ ಲಗಾಮೂ ಮಂತ್ರಿ ಮಂಡಲದ ಕೈಲಿಲ್ಲ. ಅದರಿಂದ ಶಾಸನ ಸಭೆ ಪಾರಿತಪ್ಪಿಸಾಗ ಅಧ್ಯಕ್ಷನು ಸಂದೇಶ ಕಳಿಸುವದು ಉಚಿತ. ಆದರೆ ಭಾರತದ ಮಂತ್ರಿ ಮಂಡಲ ಹೊಣೆಗಾರವಾಗಿದೆ. ಅದು ಸ್ವಾಭಾವಿಕವಾಗಿಯೆ ಪಾರ್ಲಮೆಂಟಿನ ಎಲ್ಲ ಕಾರ್ಯಕಲಾಪಗಳ ನೇತೃತ್ವ ವಹಿಸುವದು. ಹೀಗಾಗಿರುವಾಗ ಪಾರ್ಲಮೆಂಟಿಗೆ ಅಧ್ಯಕ್ಷನು ಸಂದೇಶ ಕಳಿಸುವದೆಂದರೆ ಮಂತ್ರಿ ಮಂಡಲದ ವಿರುದ್ಧವೇ ಸಂದೇಶ ಕಳಿಸಿದಂತೆ. ಆಗ ಮಂತ್ರಿ ಮಂಡಲಕ್ಕೂ ಅಧ್ಯಕ್ಷನಿಗೂ ತಿಕ್ಕಾಟ ಬರುವದಲ್ಲದೆ ಇವರಿಬ್ಬರಲ್ಲಿ ಯಾರಿಗೆ ಮನ್ನಣೆ ಕೊಡಬೇಕೆಂದು ಪಾರ್ಲಮೆಂಟಿಗೆ ಸಮಸ್ಯೆಯುಂಟಾಗುವದು. ಹೀಗಾದರೆ ಆಡಳಿತ ಸುಸೂತ್ರವಾಗಿ ಸಾಗಲಾರದು. ಅಲ್ಲದೆ ಪಾರ್ಲಮೆಂಟು ಪಾಸುಮಾಡಿ ಕಳಿಸಿದ ಮಸೂದೆಯನ್ನು ಪುನರ್ವಿಚಾರಿಸಬೇಕೆಂದು ಅಧ್ಯಕ್ಷನು ತಿರುಗಿ ಪಾರ್ಲಮೆಂಟಿಗೆ ಕಳಿಸಬಹುದೆಂದು ಹೇಳಲಾಗಿದೆ. ಆದರೆ ಪಾರ್ಲಮೆಂಟು ತಿರುಗಿ ಅದನ್ನು ಅದ್ದಕ್ಕದ್ದಂತೆಯೆ ಪಾಸುಮಾಡಿದರೆ ಅಧ್ಯಕ್ಷನು ಅದನ್ನೊಪ್ಪಲೇಬೇಕೆಂಬ ಸ್ಪಷ್ಟ ನಿರ್ದೇಶವಿಲ್ಲದ್ದರಿಂದ ದೊಡ್ಡ ಗಂಡಾಂತರವುಂಟು. ಇಂಥ ನಿರ್ದೇಶವಿರಲೇಬೇಕು. ಇಲ್ಲದಿದ್ದರೆ ಅಧ್ಯಕ್ಷನು ಪಾರ್ಲಮೆಂಟನ್ನು ಧಿಕ್ಕರಿಸಿ ಮನಬಂದಂತೆ ನಡೆಯಬಹುದು. ಇದು ಸರ್ವಾಧಿಕಾರವಲ್ಲದೆ ಮತ್ತೇನು?

ಒಕ್ಕೂಟದ ಶಾಸನ ಸಭೆಗೆ ಪಾರ್ಲಮೆಂಟೆಂದು ಹೆಸರಿಡಲಾಗಿದೆ. ಅದರಲ್ಲಿ ಎರಡು ಭವನಗಳು-ಮೇಲ್ಮನೆ ಅಥವಾ ಸಂಸ್ಥಾನ ಮಂಡಲ ಮತ್ತು ಕೆಳಮನೆ ಅಥವಾ ಜನತಾ ಸಭೆ.

ಮೇಲ್ಮನೆಯಲ್ಲಿ ೨೫೦ ಸದಸ್ಯರು. ಅವರಲ್ಲಿ ೧೫ ಜನರನ್ನು ಅವರ ತಜ್ಞತೆಯನ್ನು ನೋಡಿ ಅಧ್ಯಕ್ಷನೇ ನೇಮಿಸುವನು. ಉಳಿದ ೨೩೫ರಲ್ಲಿ ನೂರಕ್ಕೆ ೪೦ ಕ್ಕಿಂತ ಹೆಚ್ಚಾಗದಂತೆ ನರೇಂದ್ರರ ಸಂಸ್ಥಾನಗಳಿಂದಲೂ (ಅಂದರೆ ಈಗಿನ ಪ್ರಾಂತಗಳು) ಆರಿಸಲಾಗುವದು. ಸಂಸ್ಥಾನ ಶಾಸನ ಸಭೆಗಳ ಚುನಾಯಿತ ಸದಸ್ಯರು ಇವರನ್ನು ಆರಿಸುವರು. ಹೀಗೆ ಮೇಲ್ಮನೆಯೆಂಬುದು ಸಂಸ್ಥಾನಗಳ ಪ್ರತಿನಿಧಿಯಾಗಿರುವದು. ಅದು ಶಾಶ್ವತ ಸಂಸ್ಥೆ. ಅಮೇರಿಕದ ಸಿನೇಟಿನಂತೆ ಇದರಲ್ಲಿಯೂ ಎರಡು ವರ್ಷಕ್ಕೊಮ್ಮೆ ಮೂವರಲ್ಲಿ ಒಂದಂಶ ಸದಸ್ಯರು ನಿವೃತ್ತರಾಗಿ ಅವರ ಸ್ಥಾನಕ್ಕೆ ಹೊಸ ಚುನಾವಣೆಗಳಾಗುವವು.

ಜನತಾ ಸಭೆ ಅಥವಾ ಕೆಳಮನೆಯಲ್ಲಿ ೫೦೦ಕ್ಕಿಂತ ಹೆಚ್ಚು ಸದಸ್ಯರಾಗದಂತೆ, ಇಡಿ ಭಾರತದಲ್ಲಿ ೨೧ ವಯಸ್ಸಿಗಿಂತ ಹೆಚ್ಚಾದ ಎಲ್ಲ ಪ್ರೌಢರಿಂದೊಡಗೂಡಿದ ಪ್ರಾದೇಶಿಕ ಮತದಾರ ಸಂಘಗಳಿಂದ ಆಯ್ಕೆಗಳು ಜರಗುವವು. ಜಾತೀಯ ಮತದಾರ ಸಂಘಗಳು ರದ್ದಾಗುವವು. ಜನತಾ ಸಭೆಯ ಅವಧಿ ೫ ವರ್ಷ. ಅವಶ್ಯಬಿದ್ದಲ್ಲಿ ಆದರ ಅವಧಿಯನ್ನು ಹೆಚ್ಚಿಸಬಹುದು. ಇಲ್ಲವೆ ಪ್ರಸಂಗ ಬಂದಲ್ಲಿ ಅದನ್ನು ೫ ವರ್ಷಕ್ಕಿಂತ ಮೊದಲೇ ವಿಸರ್ಜಿಸಬಹುದು. ಮಂತ್ರಿಗಳ ಮೇಲೆ ಅವಿಶ್ವಾಸ ಗೊತ್ತುವಳಿ ಮೊದಲಾದವುಗಳಿಗೆ ಸಂಬಂಧಿಸಿದ ಕಲಮುಗಳಿಲ್ಲ ಸ್ಪಷ್ಟವಾಗಿವೆ.

ಹಣಕಾಸಿನ ಮಸೂದೆಗಳನ್ನು ಹೊರತು ಉಳಿದ ಮಸೂದೆಗಳಿಗೆ ಎರಡೂ ಸಭೆಗಳ ಸಮ್ಮತಿ ಬೇಕು. ಹಣಕಾಸಿನ ಮಸೂದೆ ಮಾತ್ರ ಮೇಲ್ಮನೆಯ ಸಮ್ಮತಿ ದೊರೆಯದಿದ್ದರೂ ಕಾಯದೆಯಾಗುವದು. ಪಾರ್ಲಮೆಂಟಿನ ಅಧಿವೇಶನ ನಡೆಯುತ್ತ ಇಲ್ಲದ ಸಮಯದಲ್ಲಿ ಅಧ್ಯಕ್ಷನು ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು. ಆದರೆ ೬ ತಿಂಗಳಿಗೊಮ್ಮೆ ಯಾದರೂ ಪಾರ್ಲಮೆಂಟನ್ನು ಕೂಡಿಸಲೇಬೇಕಾಗುವದು. ಮತ್ತು ಪಾರ್ಲಮೆಂಟು ಕೂಡಿ ೬ ವಾರದೊಳಗೆ ಸುಗ್ರೀವಾಜ್ಞೆಗೆ ಅದರ ಸಮ್ಮತಿ ದೊರೆಯದಿದ್ದರೆ ಅದು ತಾನಾಗಿಯೆ ರದ್ದಾಗುವದು.

ನ್ಯಾಯದಾನವನ್ನು ಛಿನಕೆ, ಸ್ವಾತಂತ್ರ್ಯ [illegible]

[illegible]

ಕೇಳುವ ಅಧಿಕಾರವಿದೆ.

[illegible]

[illegible] ಇಷ್ಟಿದ್ದೂ [illegible] ಕ್ರಮಕ್ಕೆ ಅತಂಕ [illegible] ಮುಂದಿನ ಸೌಕರ್ಯಗಳಿಗೆ [illegible] ಕಾರ ಪಡೆಯದೇ ಬಡಜನಾಗುವ [illegible] ಲಗಳಿರಕ್ಕಲ್ಲವೆಂದು. [illegible] ನಿಂದಲೂ [illegible] ನೇಮಿಸಲ್ಪಡುವ ಪಬ್ಲಿಕ್ ಸರ್ವಿಸ ಕಮಿಶನ್ ಇಲ್ಲದೆ ನೌಕರಿ [illegible] ವ್ಯವಸ್ಥೆ ಮಾಡಲಾಗಿದೆ. [illegible] ಜಾತೀಯ [illegible] ತತ್ವವನ್ನು ಹೊಸ ಘಟನೆ [illegible] ಯಾಗಿ [illegible] ಕಮಿಶನ್‌ಗಳ ಕಾರ್ಯ [illegible] ವಾಗಿ ಆಗಲಾರದು. [illegible] ಮೇಲೆ ನೌಕರಿ [illegible] ತಿಯ ಹಿತಸಂಬಂಧಗಳಿಗೆ [illegible] ಕೊಡುವದು ಸ್ವಾಭಾವಿಕ.

"ಗಂಡಾಂತರ [illegible] ಒಂದು ದೊಡ್ಡ ಭಾಗವೇ ಘಟನೆಯು ಇದೆ. ಯುದ್ಧದಿಂದಾಗಲಿ [illegible] ರದಿಂದಾಗಲಿ [illegible] ಗಂಡಾಂತರವುಂಟಾದರೆ [illegible] ಬಂದಿದೆ" ಎಂದು ಸಾರಿ ಅಧ್ಯಕ್ಷನು [illegible] ಆಸಾಮಾನ್ಯವಾದ ಅಧಿಕಾರ [illegible] ದನು. ಇಂಥ ನಿಯಮಗಳು [illegible] ಗಳನ್ನು ಎದುರಿಸಲು ಅವಶ್ಯವಾದ [illegible] ನಲ್ಲಿ ಸೂಚಿಸಲ್ಪಟ್ಟಂತೆಯೆ [illegible] ಉಳಿದರೆ ಸರ್ವಾಧಿಕಾರಿ ರಾಜ್ಯ [illegible] ಮಾಡಿಕೊಟ್ಟಂತಾಗುವದು.

ಕಾಲದಲ್ಲಿ ಘಟಕಗಳು ಹೀಗೆಯೇ [illegible] ಬೇಕೆಂದು ಅಧ್ಯಕ್ಷನು ಆಜ್ಞಾಪಿಸಬ[illegible] ಘಟಕಗಳಿಗೆ ಕೊಡಬೇಕಾದ ಧನಸಹಾಯ[illegible] ವನ್ನು ನಿಲ್ಲಿಸಿಬಿಡಬಹುದು; [illegible] ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಎಲ್ಲ [illegible] ಘೂತ ಹಕ್ಕುಗಳನ್ನು ರದ್ದುಗೊಳಿಸಬಹುದು. ಹೀಗಾದಾಗ ಘಟಕಗಳ ಹಕ್ಕುಗಳೆಲ್ಲ [illegible] ಕೇಂದ್ರವೇ ಸರ್ವಶಕ್ತವಾಗುವದೇ [illegible] ಗಂಡಾಂತರಸ್ಥಿತಿ ನಿಜವಾಗಿ [illegible] ಮೊದಲೇ ದೇಶಾದರೆ ಅಧ್ಯಕ್ಷನು ಇಂಥ [illegible] ಕೈಕೊಳ್ಳಬಹುದು. ಆಗ ಅವನೂ [illegible] ಪಾರ್ಲಮೆಂಟೂ ಸರ್ವಾಧಿಕಾರಿಗಳಾ[illegible] ಅಷ್ಟೇ, ಪಾರ್ಲಮೆಂಟನ್ನು [illegible] ಅವನು ಗಂಡಾಂತರವನ್ನು ಸಾರಲು [illegible] ವಾಗಿರುವದರಿಂದ ಅಧ್ಯಕ್ಷನೇ [illegible]

[illegible] ಘಟನೆಯಲ್ಲಿ ಇಂಥ [illegible] ವಲೇ ಅದು ಕೊನೆಗೆ ಸರ್ವಾ[illegible] ವಾಯಿತು. ೧೯೩೩ ರಿಂದ ೧೯[illegible] ಜರ್ಮನ್ ಅಧ್ಯಕ್ಷನು [illegible]

[illegible]

ಘಟಕಗಳ ಆಡಳಿತ

[illegible]

[illegible] ಸರ್ವಾಧಿಕಾರದ [illegible]

(೧೧ ನೇಯ ಪುಟದಿಂದ)

ಹಾಗೆ [illegible]ಗಳಾದ ಮೇಲೆ ಗವರ್ನರ ಸಂಸ್ಥಾನಗಳ ಸಂಖ್ಯೆ ಹೆಚ್ಚಾಗುವದು. [illegible] ಆಡಳಿತದ ಬಗ್ಗೆ ಮಾತಿಲ್ಲಿಲ್ಲ [illegible] ಗವರ್ನರ ಸಂಸ್ಥಾನಗಳಿಗೆ ಮಾತ್ರ ಅನ್ವಯಿಸುವವು. ಪರೀಂದ್ರ ಸಂಸ್ಥಾನಗಳು ಕೇಂದ್ರಕ್ಕೆ ಬಿಟ್ಟು ಕೊಟ್ಟ ಅಧಿಕಾರಗಳಲ್ಲದೆ ಉಳಿದವುಗಳ ಬಗ್ಗೆ ತಾವೇ ಕಾಯದೆಗಳನ್ನು ಮಾಡಿಕೊಳ್ಳಬಹುದು.

[illegible] ಸಂಸ್ಥಾನಗಳಲ್ಲಿ ಗವರ್ನರನು ಸರಕಾರದ ಮುಖ್ಯ. ಅವನ ಅಧಿಕಾರಾವಧಿ ೫ ವರ್ಷ. ಅವನ ನೇಮಕದ ವಿಷಯದಲ್ಲಿ ಎರಡು ರೀತಿಗಳನ್ನು ಸೂಚಿಸಲಾಗಿದ್ದು ಇದರಲ್ಲಿ ಯಾವುದು [illegible] ಸ್ವೀಕರಿಸಲ್ಪಡುವದೋ ಗೊತ್ತಿಲ್ಲ. ಸಂಸ್ಥಾನದ ಎಲ್ಲ ಮತದಾರರು ನೇರ ಆವನ [illegible] ನೇರವಾಗಿ ಆರಿಸುವದೊಂದು; ಆ [illegible] ಶಾಸನಸಭೆ ನಾಲ್ಕು ಹೆಸರು [illegible] ಸೂಚಿಸಿ, ಅವರಲ್ಲೊಬ್ಬನನ್ನು [illegible] ಅಧ್ಯಕ್ಷನು ನೇಮಿಸುವದೊಂದು. ಮೊದಲನೆಯ ಪ್ರಸಂಗದಲ್ಲಿ ಅಧ್ಯಕ್ಷನೂ ಮಂತ್ರಿಮಂಡಲವೂ ಇಬ್ಬರೂ ಜನರಿಂದ ಆರಿಸಲ್ಪಡುವುದರಿಂದ ಅವರೊಳಗೆ ತಿಕ್ಕಾಟ [illegible] ಇಬ್ಬರೂ ಜನತೆಯ ಬೆಂಬಲ ತಮಗಿದೆಂದು ಸಾಧಿಸಿ ಅನವಶ್ಯಕ ತೊಂದರೆ ಯಾಗಬಹುದು. ಆದುದರಿಂದ ಎರಡನೆಯ ದಾರಿಯೇ ಸಾಕು. ಅದರಲ್ಲಿಯೂ ಅಧ್ಯಕ್ಷ ತನ್ನ [illegible]. ನಿಜವಾದ ಅಧಿಕಾರವೆಲ್ಲ ಸಂಸ್ಥಾನದ ಮಂತ್ರಿಮಂಡಲದ ಲ್ಲಿರುವಾಗ ಗವರ್ನರರ ಆಯ್ಕೆಯಲ್ಲಿ ಶಾಸನ ಸಭೆಗೆ ಕೈಯ ಇರುವದು ಅವಶ್ಯವಿಲ್ಲ.

ಒಕ್ಕೂಟದಲ್ಲಿರುವಂತೆ ಗವರ್ನರಸಂಸ್ಥಾನದಲ್ಲಿಯೂ ನಿಜವಾದ ಆಡಳಿತಾಧಿಕಾರ ಮಂತ್ರಿಮಂಡಲದಲ್ಲಿರುವದು. ಆದರೆ ಮಂತ್ರಿಗಳನ್ನು ನೇಮಿಸಿಕೊಳ್ಳುವಲ್ಲಿ ಗವರ್ನರನಿಗೆ [illegible] ಹೆಚ್ಚು ಅಧಿಕಾರ ಕೊಡಲಾಗಿದೆ. ಮುಖ್ಯವಾಗಿ ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾಕ ಜಾತಿಗಳಿಗೆ ಪ್ರಾತಿನಿಧ್ಯ ದೊರಕು [illegible] ಅವನಿಗೆ [illegible]. [illegible] ಇದು ಕಾಣ್ಣಿತವಾಗಿ [illegible]. ಮಂತ್ರಿಮಂಡಲದಲ್ಲಿ ಅನ್ಯೋನ್ಯಕ್ಕೂ ಕಾರಣವಾಗುವದು. ಅದೇ ಪ್ರಕಾರ ಕೇಂದ್ರದ ಅಧ್ಯಕ್ಷನಿಗಿರುವಂತೆ ಶಾಸನ ಸಭೆಗೆ [illegible] ಕರೆಸಲು ಗವರ್ನರನಿಗಿರುವ [illegible] ಆಡಳಿತಕ್ಕೆ ತೊಡಕೇ ಸರಿ. ಶಾಸನಸಭೆ ಮತ್ತು ಮಂತ್ರಿಮಂಡಲಗಳನ್ನು ವಿಸರ್ಜಿಸುವ ಅವನ ಅಧಿಕಾರವೂ ಅಪೇಕ್ಷಣೀಯ.

ಸಂಸ್ಥಾನ ಶಾಸನ ಸಭೆಗಳಲ್ಲಿ [illegible] ಕೈತ [illegible] ಹೆಚ್ಚಾಗದಷ್ಟು ಸದಸ್ಯರು [illegible] ಪದ್ಧತಿಯಿಂದ ಆರಿಸಿ ಬರುವರು. ಮುಸ್ಲಿಮರಿಗೂ ಹರಿಜನರಿಗೂ ಎಲ್ಲಿ [illegible] ಕಾದಿಡಲ್ಪಟ್ಟ [illegible] ಮತದಾರ [illegible] ಮಾತ್ರ ಬೇರೆ ಬೇರೆ ಇಲ್ಲ. ಶಾಸನ [illegible] ಅವಧಿ ೫ ವರ್ಷ. ಸಂಸ್ಥಾನಗಳು ಇಷ್ಟ [illegible] ವಿವಿಧ ಕ್ಷೇತ್ರಗಳಲ್ಲಿ ತಜ್ಞರಾದವರಿಗೆ [illegible] ಕೊಟ್ಟು ಮೇಲ್ಮನೆಯನ್ನೂ ರಚಿಸಬಹುದು. ಇಂಥ ಮೇಲ್ಮನೆ ಅನವಶ್ಯ [illegible]. ಶಾಸನ ಸಭೆಗಳ ಅಧ್ಯಕ್ಷನು [illegible] ಆರಿಸಲ್ಪಡುವನು. ಸಂಸ್ಥಾನ ಶಾಸನ ಸಭಾಸದಸ್ಯತ್ವಕ್ಕೆ ೨೫ ವರ್ಷಕ್ಕಿಂತ [illegible] ವಯಸ್ಸಿನವನು ಅರ್ಹ. ಕೇಂದ್ರ [illegible] ಇಂಥ ಧಿಯದು ಇಲ್ಲದಿರುವಾಗ ಘಟಕ [illegible]?

ಘಟಕಗಳಲ್ಲಿ ಹೈಕೋರ್ಟುಗಳಿರುವವು. [illegible] ನ್ಯಾಯಾಧೀಶರ [illegible] ಸಂಸ್ಥಾನದ ಶಾಸನ ಸಭೆ [illegible] ಅವರನ್ನು ತೆಗೆದುಹಾಕುವ ಅಧಿಕಾರ ಒಕ್ಕೂಟ ಅಧ್ಯಕ್ಷನಿಗೆ [illegible]. ಅವರು ಮುಖ್ಯವಾಗಿರುವರು. [illegible] ಧಂಗ ಬಾರದಂತೆ [illegible] ವ್ಯವಸ್ಥೆಗೊಳಿಸಿ [illegible] ಪೌರಶಾಸ್ತ್ರ [illegible] ವ್ಯವಸ್ಥೆಯಲ್ಲಿ [illegible].

ಗವರ್ನರನಿಗೆ ತನ್ನ ಸಂಸ್ಥಾನದಲ್ಲಿ ಗಂಡಾಂತರ ಪ್ರಸಂಗವುಂಟಾದಾಗ [illegible] ಮಂತ್ರಿಮಂಡಲ, ಶಾಸನಸಭೆ ಮೊದಲಾದವುಗಳ [illegible] ತಾನೇ ಸರ್ವಾಧಿಕಾರ ನಡೆ

ಜನಮತ

ಸ್ತ್ರೀ ಯೋಧರು

[illegible]

ರಾಜಕುವರಾದಿ ಅಮೃತಕೌರ್ [illegible] ಪ್ರತಿಭಟನೆಯಿಂದ ಪೋಲೀಸು ಮುಂತಾದ ಕಾರ್ಯನಿರ್ವಾಹಕ ಶಾಖೆಯಲ್ಲಿ ಹೆಂಗಸರನ್ನು ತೆಗೆದುಕೊಳ್ಳಬಾರದೆಂದು ಆದ ಮೊದಲಿನ ನಿರ್ಧಾರನ ಬದಲಾಗಿ ಅವರಿಗೆ ಭಾರತದ ಎಲ್ಲ ಸರಕಾರೀ ನೌಕರಿಗಳಲ್ಲಿಯೂ ಕೆಲಸಮಾಡುವ ಅರ್ಹತೆಯಿದೆ ಎಂದು ಸಂಬಂಧಪಟ್ಟ ಸಮಿತಿಯು ಉಪಪ್ರಧಾನ ಸರದಾರ ಪಟೇಲರು ಮತ್ತು ಪ್ರಾಂತೀಯ ಮುಖ್ಯ ಮಂತ್ರಿಗಳ ಮುಖಾಮುಖಿ ಸಾರಿದೆಯೆಂದು ತಿಳಿಯುತ್ತದೆ. ಇದು ಬಹಳ ಸಂತೋಷದ ಸಂಗತಿ. ಸ್ತ್ರೀ ಪುರುಷರಲ್ಲಿ ಹಕ್ಕಿನ ಸಾಮ್ಯವನ್ನು ಸ್ಥಾಪಿಸಿದ ಕೀರ್ತಿಯು ಸ್ವತಂತ್ರ ಭಾರತಕ್ಕೆ ಸಲ್ಲುತ್ತದೆ. ಈಗ ಇಲ್ಲಿಯ ವರೆಗೆ ನಿರ್ಬಂಧದ ದೆಸೆಯಿಂದ ಸುಪ್ತವಾಗಿದ್ದ ಅದಮ್ಯ ಸ್ತ್ರೀಶಕ್ತಿಯಿಂದು ದ್ವಿಗುಣಿತ ಉತ್ಸಾಹದಿಂದ ಹೊರಬೀಳಲಿದೆ ಯಾದುದರಿಂದ ಕೇವಲ ಪೋಲೀಸಿನಲ್ಲಲ್ಲದೆ ಮಿಲಿಟರಿಯಲ್ಲಿಯೂ ಹೆಂಗಸರನ್ನು ಸೇರಿಸಿಕೊಂಡು (ಗಡಿಗಳಲ್ಲಿರುವ ಪುರುಷಪೋಲೀಸರು ಮತ್ತು ಪುರುಷ ಸೈನಿಕರು ರಜಾಕಾರರನ್ನು ಎದುರಿಸುವಲ್ಲಿ ಯಶಸ್ವಿಗಳಾಗಲಿಲ್ಲೆಂಬ ದೂರಿರುವುದರಿಂದ) ಹೈದರಾಬಾದಿನ ಗಡಿಗಳಲ್ಲಿ ಕಾವಲಿಗಿಟ್ಟರೆ ರಜಾಕಾರರಿಗೆ ಬೇಗ ಬುದ್ಧಿಗಲಿಸಿ ಹೈದರಾಬಾದನ್ನು ಹಣ್ಣಿಗೆ ತರಬಹುದೆಂದು ನನಗನಿಸುತ್ತದೆ. ಸರಕಾರದವರು ಇತ್ತ ಗಮನಕೊಡುವರೆ?

ಹುಬ್ಬಳ್ಳಿ — ಸುಭದ್ರೆ

ಸುವ ಮಹಾ ಅಧಿಕಾರವಿದೆ. ಆದರೆ ಹೀಗೆ ಮಾಡಿದೊಡನೆ ಅವನು ಒಕ್ಕೂಟದಲ್ಲಿರುವ ಅಧ್ಯಕ್ಷನಿಗೆ ಈ ಸಮಾಚಾರವನ್ನು ತಿಳಿಸಬೇಕು. ಆ ಮೇಲೆ ಎಲ್ಲ ಅಧಿಕಾರ ಅಧ್ಯಕ್ಷನಿಗೆ ಸೇರುವದು. ಅವನು ಆಜ್ಞಾಪಿಸಿದಂತೆ ಗವರ್ನರನು ನಡೆಯಕೊಳ್ಳಬೇಕು. ಹೀಗೆ ಮಂತ್ರಿಮಂಡಲವನ್ನು ಲಕ್ಷಿಸದೆಸಾಗುವ ಸರ್ವಾಧಿಕಾರ ಅವನಿಗಿದ್ದರೂ ಅವನು ಸರ್ವಾಧಿಕಾರವನ್ನು ತನಗೇ ಉಳಿಸಿಕೊಳ್ಳಲಾರ. ಅದರಿಂದ ಈ ಕಲಮು ಅಷ್ಟು ಗಂಡಾಂತರದ್ದಿಲ್ಲ. ಆದರೂ ಇಂಥ ಅಧಿಕಾರವನ್ನು ಕೇಂದ್ರಕ್ಕೆ ಮೀಸಲಿಡುವದು [illegible].

ಶ್ರೀ ವೆಂಕಟರಂಗಯ್ಯನವರು ತಮ್ಮ ಪುಸ್ತಕದಲ್ಲಿ ಘಟನೆಯ ಗುಣದೋಷಗಳನ್ನು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. ಅವರು ಸಂಯುಕ್ತರಾಜ್ಯ ಪದ್ಧತಿಯ ಪಕ್ಷಪಾತಿ. ಅವರ ಅಭಿಪ್ರಾಯಗಳನ್ನು ಆ ಪಂಗಡದವರೆಲ್ಲರೂ ಒಪ್ಪದಿರಲಾರರು. ಆದರೆ ಇಂದು ಹಲವು ಒಡಕಿನ ತತ್ವಗಳು ರಾಜಕಾರಣದಲ್ಲಿ ಮೆರೆದಾಡುತಿರುವದನ್ನು ಕಂಡು ಪ್ರಾಂತಗಳನ್ನೇ ಅಥವಾ ಹೊಸ ಶಬ್ದದಲ್ಲಿ, ಸಂಸ್ಥಾನಗಳನ್ನೇ ರದ್ದುಪಡಿಸಿ ಒಂದೇ ಕೇಂದ್ರ ಆಡಳಿತ ಇಡಿ ದೇಶದ ಮ್ಯಾಲುಂಟಾಗಬೇಕೆಂಬ ಒಂದು ವಿಚಾರಧಾರೆಯಿದ್ದು ಅದರ ಪ್ರತಿಪಾದಕರು ಲೇಖಕರ ಅಭಿಪ್ರಾಯಗಳನ್ನು ವಿರೋಧಿಸುವದು ನಿಶ್ಚಯ. ಆದರೆ ಆ ಮಾತು ಇಲ್ಲಿ ಅಪ್ರಸ್ತುತ. ಅಂಥದರ ಬಗ್ಗೆ ಲೇಖಕರು ಕೆಲವೆಡೆ ತೋರಿಸುವ ಅಕಾರಣ ಪಕ್ಷಪಾತವನ್ನು ಒತ್ತಟ್ಟಿಗಿರಿಸಿದರೆ ಅವರು ವಿಷಯವನ್ನು ತುಂಬ ಸ್ಪಷ್ಟವಾಗಿಯೂ ನಿರ್ಲಿಪ್ತಿಯಿಂದಲೂ ವಿವೇಚಿಸಿದಾರೆಂದು ಒಪ್ಪಲೇಬೇಕು.

ಲೇಖಕರು ಪುಸ್ತಕದ ಕೊನೆಯಲ್ಲಿ ಹೇಳಿದ ಮಾತುಗಳು ಅತ್ಯಂತ ಗಮನಾರ್ಹವಾಗಿವೆ. ಈ ಘಟನೆಯಿಂದ ನಮಗೆ ಬೇಕಾದ ಸುಖ ಶಾಂತಿಯ ರಾಜ್ಯ ಲಭಿಸೀತೆ? ಇದಕ್ಕೆ ಹೌದು, ಇಲ್ಲವೆಂದು ಹೇಳುವ ಕಾಲ ಮುಂದೆ ಇದೆ. ನಾವು ಜಾತ್ಯತೀತ ಲೌಕಿಕ ರಾಜ್ಯವನ್ನು ಸ್ಥಾಪಿಸಹೊರಟಿದ್ದರೂ ದೇಶದಲ್ಲಿ ಹಿಂದು-ಮುಸ್ಲಿಂ, ಉಚ್ಚ-ನೀಚ ಜಾತಿಗಳೆಂಬ ವೈಷಮ್ಯ ಇನ್ನೂ ಬಹಳ ಇದೆ. ರಾಜಕಾರಣದಲ್ಲಿ ಜಾತೀಯತೆಯು ಗಂಡಾಂತರವನ್ನು ಬದಿಗಿರಿಸಿದರೂ ಬಹಿರಂಗವಾಗಿ ಪ್ರಜಾತಂತ್ರವನ್ನು ಕೊಂಡಾಡಿ ಒಳಗೆ ಸರ್ವಾಧಿಕಾರಕ್ಕೆ ಮನಸೋತ ಪಂಗಡಗಳ ಭೀತಿಯೂ ಇಲ್ಲದಿಲ್ಲ. ವರ್ಗ-ವರ್ಗಗಳ ವೈಷಮ್ಯವೂ ಕಡಿಮೆಯಿಲ್ಲ. ಈ ಕಾರಣಗಳಿಂದ ಯಾವ ಸಮಯದಲ್ಲಿಯೂ ಕ್ರಾಂತಿಕಾರಿ ಸ್ಥಿತಿ ತಲೆಯೆತ್ತಬಹುದು. ಘಟನೆ ಎಷ್ಟೇ ನಿರ್ದುಷ್ಟವಾಗಿದ್ದರೂ ಅದನ್ನು ಅಚರಣೆಗೆ ತರುವವರು ಯೋಗ್ಯರಾಗಿರದಿದ್ದರೆ ಕೆಟ್ಟ ರಕ್ತೆಯಲ್ಲಿ ಹರಿವೆಯಿಲ್ಲದ ದೈವರನ ಕೈಯಲ್ಲಿ

ಸಹಶಿಕ್ಷಣ

[illegible]

[illegible] ದಾಳಿಗೆ ಕಾರಣ. ಇದಕ್ಕೆ ಮಾತಾ[illegible] ಬಹುಮಟ್ಟಿಗೆ ಕಾರಣರಾಗುತ್ತಾರೆ. [illegible]ಲ್ಲಿ ಹೆಣ್ಣು ಗಂಡುಗಳನ್ನು ಭಿನ್ನಭಾವ[illegible]ದೆಸಿಕೊಂಡ ಅವರ ತಪ್ಪಿಗೆಳ ಹುಡುಗ[illegible]ಯರು ಹೊರಜಗದಲ್ಲಿ ಇಂಥ ಕಷ್ಟಕ್ಕೆ [illegible] ಕ್ಕೊಳಗಾಗುವರು, ಅಮ್ಮಂದಿರು ಪ್ರಯತ್ನಿಸುತ್ತಿರುವದು ಇಂದಿಗೂ ಕಂಡುಬರುತ್ತದೆ. ಆದರಿಂದಲೇ ಗಂಡಸಿನೆದುರು ಅನಗತ್ಯವಾಗಿ [illegible] ಸರಿಮಾಡಿಕೊಳ್ಳುವದು, ಕೂದಲು [illegible] ಕೊಳ್ಳುವದು ಇತ್ಯಾದಿ [illegible]! [illegible] ಭಾವ [illegible] ಹುಡುಗಿಯರು ತಮ್ಮ [illegible] ಪ್ರದರ್ಶಿಸುತ್ತಾರೆ. ಇದೇ ಅವರ ಆಭರಣ, ಇದೇ ಅವರಸ್ವಾತಂತ್ರ್ಯಕ್ಕೆ [illegible] ಇದೇ ಅವರ ಗೆಲುವು, ಇದೇ ಅವರ ಪ್ರಾಸ್ಯದ ಊರುಗೋಲು! ಇಂಥದನ್ನು ಕಾಲೇಜು ಹುಡುಗರು ಸೌಂದರ್ಯ, ಆಕರ್ಷಕತೆ ಎಂದು ಗ್ರಹಿಸಿ ಅಂಥ ಹುಡುಗಿಯನ್ನು ಆಗ ಹುಡುಗಿಯನ್ನೆಂದಲ್ಲದೆ ತಮ್ಮ ಗೆಳತಿ, ಸಹವಿದ್ಯಾರ್ಥಿನಿ ಎಂದು ಗುರುತಿಸಲಾರದವರಾಗುವುದು ಸ್ವಾಭಾವಿಕ.

ಆದುದರಿಂದ ಮುನಸಿಯವರು ಹುಡುಗಿಯರು ಹಾಸಿಗೆಯಿಂದ ಏಳುವುದರ ಮೊದಲೇ ಆತ್ಮವಿಶ್ವಾಸ ಮತ್ತು (ಹೆಂಗಸರನ್ನು ಕಂಡಂತೆಯೇ ಗಂಡಸನ್ನು ಕಾಣುವ) ಇತರಭಾವ ಮೂಡದಂತೆ ಮನಸ್ಥೈರ್ಯವನ್ನು ಪಡೆದೇ ಸಹ ವಿದ್ಯಾಭ್ಯಾಸದ ಶಾಲೆಗಳಿಗೆ ಹೋಗಬೇಕು ಎಂದು ಹೇಳಿರುವುದು ತರ್ಕಶುದ್ಧವಾಗಿದೆ. ಕಾಮವೊಂದನ್ನುಳಿದು ಹುಡುಗಿಯರು ಉಳಿದೆಲ್ಲ ವಿಷಯಗಳಲ್ಲೂ ಹುಡುಗರೊಡನೆ ಸಮರಸವಾಗಿ ಬೆರೆತು ಹುಡುಗರಂತೆಯೇ ವರ್ತಿಸುವುದನ್ನು ಕಲಿತರೆ ಹುಡುಗರೂ ಸುಧಾರಿಸುವರು, ತಾವೂ ಅವರನ್ನು ಹೆಚ್ಚು ಹೆಚ್ಚಾಗಿ ಅರ್ಥಮಾಡಿ ಕೊಳ್ಳಲು ಕಲಿತು ಮುಂದೆ ಅವರೊಡನೆ ವಿವಾಹಜೀವನದಲ್ಲಿ ಸಮರ್ಪಕವಾಗಿ, ಉಭಯ ಹಿತಕರವಾಗಿ ಇರುವುದನ್ನು ಕಲಿಯುವರು. ಆದರೆ ಅವರು ಗಂಡುತನದ ಸ್ಪರ್ಧೆಗೆ ಬಿದ್ದು (Tom-boys)- ಗಂಡುಬೀರಿಯರಾಗಕೂಡದು. ಅದು ಅವರಿಗೂ, ಮುಂದೆ ಅವರ ಗಂಡಂದಿರಿಗೂ ಅಹಿತಕರ. ಗಂಡಸಿಗೆ ಸಾಮರ್ಥ್ಯ ಮತ್ತು ವಿನಯಗಳು ಭೂಷಣವಾದವುಗಳು; ಹೆಂಗಸಿಗೆ ಸೌಕುಮಾರ್ಯ ಮತ್ತು ದರ್ಶನೀಯತೆ ಭೂಷಣವಾದವುಗಳು; ವಿದ್ಯೆ ಈ ಗುಣಗಳನ್ನು ಮಾತ್ರ ಭಂಗಪಡಿಸಕೂಡದು. ಅದರಿಂದ ಹುಡುಗ ಹುಡುಗಿ[illegible] ಅನವಶ್ಯ[illegible]ದೆ.

[illegible] ಭಾಗವಹಿಸಲು ಕಲಿಯುವದೆ [illegible] ಅವರಿಗೆ ಸಹಾಯಮಾಡಿದಂತಾಗುವುದಲ್ಲದೆ, ಅವರೊಡನೆ ಹೆಚ್ಚು ಸಮರಸದಿಂದ ಬದುಕಲು ಅಭ್ಯಾಸವಾಗಿ, (ಕರ್ತವ್ಯದ ಫಲವಾದ) ಸುಖದುಃಖಗಳ ಸ್ವತಂತ್ರ ಭಾಗವನ್ನು, ಗಂಡನೊಡನೆ ಉಭಯ ಸಂತೋಷವಾಗುವಂತೆ, ಅನುಭವಿಸಲು ಬರುವುದು. ಆದರೆ ಈಯೆಲ್ಲದರ ನಡುವೆ ಹುಡುಗಿಯರು ಒಳ್ಳೆಯ ಗೃಹಿಣಿಯರಾಗುವುದನ್ನು ಮಾತ್ರ ಎಂದಿಗೂ ಮರೆಯಬಾರದೆಂದು ಲೇಖಕರು ಎಚ್ಚರಿಕೆ ಕೊಟ್ಟಿದ್ದಾರೆ. ಮುಖ್ಯವಾದುದೆಂದರೆ, ಸ್ತ್ರೀ-ಪುರುಷರು ತಾವು ಲಿಂಗತಃ ಭಿನ್ನರೆಂಬುದನ್ನು ೨೫ ತಾಸೂ ತಿಳಿಯುವುದನ್ನು ಬಿಟ್ಟು ಅದನ್ನು ಕೆಲವೇ ಕಾಲ (ಅತ್ಯಂತ ಪ್ರಥಮಾವಧಿಕಕಾಲ) ತಿಳಿದರೆ ಸಾಕು. ಆದರಿಂದ ಹೆಂಗಸಿನ (ಅದರ ಜೊತೆಗೆ ಗಂಡಸಿನದೂ) ಜೀವನ ಉತ್ತಮೋತ್ತಮವೂ ಆದರ್ಶವೂ ಆಗುವುದು. ಗೆಳೆತನವು ಪ್ರಣಯವಾದಲ್ಲಿ ಅದು ಗಂಭೀರವಾಗಿ ವಿವಾಹದಲ್ಲಿ ಪರಿಣಮಿಸಬೇಕಲ್ಲದೆ, ಹುಡುಗ ಹುಚ್ಚನೂ ಹುಡುಗಿ ಶೀಲೂ ಆಗುವಂತೆ ಅವರು ವ್ಯವಹರಿಸಬಾರದೆಂದೂ ಅವರು ಕೊನೆಯ ಎಚ್ಚರಿಕೆ ಕೊಟ್ಟಿದ್ದಾರೆ. ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತ್ತ ಲಕ್ಷ್ಯಕೊಟ್ಟು ಅದರಂತೆ ನಡೆದುಕೊಳ್ಳದಿದ್ದರೆ ಅವರ ಬಾಳು ಎಂದಿನಂತೆ ಹಾಳೇ ಎಂಬುದು ಸ್ವತಃಸಿದ್ಧ ಸಂಗತಿಯಲ್ಲವೆ?

— ಅರ್ಜುನ

ಒಳ್ಳೆಯ ● ಮೋಟಾರು ಕೊಟ್ಟರೂ ಅದು ನಿಂತುಹೋಗುವಂತೆ ಇದರ ಗತಿಯೂ ಆಗಬಹುದು. ಹಾಗಾಗದಂತೆ ನೋಡುವದು ಜನತೆಯ ವಿವೇಕಕ್ಕೆ ಸೇರಿದ ಮಾತು.

ರಸಪರಂಗ

ಮಕ್ಕಳಿಗೆ ಸಿನೆಮಾ

[illegible] ಮಕ್ಕಳಿಗೆ [illegible] ಹೊಸದು ರುಚಿಕರವೂ ಎನಿಸಿದ ಎಲ್ಲವನ್ನೂ ಅವು ಸ್ವೀಕರಿಸುತ್ತವೆ.

ಮಕ್ಕಳಿಗೆ ರಂಜಿಸಬಹುದಾದ ವಸ್ತುಗಳು ಬಹಳವಿದ್ದರೂ ಅಂಥವನ್ನು ಚಿತ್ರತೆಗೆಯುವುದು ಬಹಳ ಕಠಿನವಾದ ಕೆಲಸ ಎಂದು [illegible]



[illegible]

ಧೊಂದಿ ಬರೆಯುತ್ತಾರೆ. ಮಕ್ಕಳಿಗೆ ಪದ್ಯ ಬರೆಯ ಹೊರಟು ಎಷ್ಟೋ ಕವಿಮನ್ಯರು ಮಕ್ಕಳಿಗೆ ತಿಳಿಯದ, ದೊಡ್ಡವರಿಗೆ ಬೇಸರ ಬರುವುದು ಎನ್ನುವಂಥ ಪದ್ಯಗಳನ್ನು ರಚಿಸಿದಂತಾಗುತ್ತದೆ. ಮಕ್ಕಳೊಡನೆ ಮಕ್ಕಳಾಗಿ ಅವುಗಳ ಭಾವನಾ ಲೋಕದಲ್ಲಿಯ ರಸಿಕತೆಯನ್ನರಿತು ಅದಕ್ಕೆ ತಕ್ಕ ಆಹಾರವನ್ನು ಒದಗಿಸುವುದು ವಿಶೇಷಜ್ಞರಿಗೆ ಮಾತ್ರ ಸಾಧ್ಯ. ಮಕ್ಕಳೊಡನೆ ಸಾಮರಸ್ಯ ಹೊಂದಿಯೂ ಅದೇ ಕಾಲದಲ್ಲಿ ಅವುಗಳ ಮನದ ಮೇಲಾಗುವ ಪರಿಣಾಮವನ್ನು ತಿಳಿದ ದೊಡ್ಡ ಬುದ್ಧಿ ಇದ್ದವರಿಗೆ ಮಾತ್ರ ಮಕ್ಕಳನ್ನು ರಂಜಿಸಲು ಬರುವುದು. ಇದು ಕವಿತ್ವಧರ್ಮವುಳ್ಳ ಮನಸ್ಸಿನ [illegible] ಮೂಲಕ ಬರತಕ್ಕ ಶಕ್ತಿ.

[illegible] ಮಕ್ಕಳು [illegible] ಬಹಳ [illegible] ತ್ತವೆ; [illegible] ತ್ತವೆ. ತಮ್ಮದೇ ಆದ ಮಾನದಂಡದಿಂದ ಅವು ಚಿತ್ರವನ್ನು ಅಳೆದು ನೋಡುತ್ತವೆ. ತಪ್ಪಿದರೆ ಬಹಳ ಕ್ರೋಧ ಮತ್ತು ತಿರಸ್ಕಾರ ಭಾವದಿಂದ ನೋಡುತ್ತವೆ. ಹೊಸದು ಯಾವುದು ಬಂದರೂ ಅವನ್ನು ಸ್ವಾಗತಿಸಿದರೂ ಕಡೆಯಲ್ಲಿ ತಮ್ಮ ಹಳೆಯ ಪ್ರಿಯ ಭಾವಗಳಿಗೆ ಅಂಟಿಕೊಳ್ಳುತ್ತವೆ ಎಂದೂ ಧೊಂದಿಯವರೆ ಹೇಳುತ್ತಾರೆ.

ಮಕ್ಕಳಿಗೆ ಸಂತೋಷವನ್ನೂ ವಿದ್ಯೆಯನ್ನೂ ಏಕ ಕಾಲದಲ್ಲಿ ಕೊಡತಕ್ಕ ಚಿತ್ರಗಳನ್ನು ಹೆಚ್ಚಾಗಿ ತಯಾರಿಸಿದ ದೇಶಗಳಲ್ಲಿ ಇಂಗ್ಲೆಂಡ್, ರಶಿಯ ಮತ್ತು ಅಮೇರಿಕಗಳು ಮುಖ್ಯವಾದವು ಭಾರತವು ಇದರಲ್ಲಿ ಅತ್ಯಂತ ಹಿಂದುಳಿದ ನಾಡು. ಈ ವಿಷಯವನ್ನು ಚೆನ್ನಾಗಿ ಬಲ್ಲವರೆಂದರೆ ಇಂಗ್ಲಂಡಿನ ಮೇರಿ ಫೀಲ್ಡ್. ೧೯೪೭ರಲ್ಲಿ ಆಕಳು "ಜೀವನದ ರಹಸ್ಯಗಳು" ಮತ್ತು "ನಿಸರ್ಗ ಗುಟ್ಟುಗಳು" ಎಂಬ ಚಿತ್ರಮಾಲೆಯನ್ನು ತಯಾರಿಸಿ ಪ್ರದರ್ಶಿಸಿದಳು.

ಆದರೆ ಒಂದು ಮಾತು. ಸಾಮಾಜಿಕ ನಾಗರಿಕ ರೀತಿ ನೀತಿಯ ಸದ್ಭಾವನೆಗಳಿಗೆ ಭಂಗ ತರುವಂತಹ ಸಿನೆಮಾಗಳನ್ನು ಚಿಕ್ಕಂದಿನಿಂದ ಮಕ್ಕಳು ಅಷ್ಟೇ ಏಕೆ, ದೊಡ್ಡವರೂ ನೋಡಕೂಡದು. ಈ ದೃಷ್ಟಿಯಿಂದ ಸರಕಾರೀ ಪರಿಶೀಲಕರು ಸಿನೆಮಾಗಳ ತಯಾರಿಕೆಯನ್ನು ನಿಯಂತ್ರಿಸುವುದು ಅವಶ್ಯಕ ಕಲೆಯಲ್ಲಿ ಸ್ವಾತಂತ್ರ್ಯ ಎಂಬ ಹೆಸರಿಂದ ಜಗತ್ತಿನಲ್ಲಿಂದು ನಾನಾ ಬಗೆಯ ಹೀನ ನಡತೆಗಳಿಗೆ [illegible] ಪ್ರೋತ್ಸಾಹ ಕೊಟ್ಟಿರುವುದು ಖಂಡನೀಯ ಎಂಬು ಯಾವ ಸಭ್ಯನು ಹೇಳದಿರುವನು?

— ಕಲಾಕೋವಿದ

ಕರ್ನಾಟಕ

ಧಾರವಾಡ

೧-೮-೪೮ ಕ್ಕೆ ವರ್ಧಾದಲ್ಲಿ ಪ್ರಾರಂಭವಾಗುವ ಮೂಲ ಶಿಕ್ಷಣ ತರಬೇತಿಗೂ ಸಪ್ಟೆಂಬರ ಪ್ರಾರಂಭದಲ್ಲಿ ಠಾಣಾ ಜಿಲ್ಲೆಯ ಬೋರ್ಡಿಯಲ್ಲಿ ಆರಂಭವಾಗುವ ಬಾಲವಾಡಿ ಶಿಕ್ಷಣ ತರಬೇತಿಗೂ ಹೋಗಬಯಸುವ ಕನ್ನಡ ಮಹಿಳೆಯರು ವಿವರಗಳಿಗಾಗಿ ಕರ್ನಾಟಕ ಕಸ್ತೂರಬಾ ಸ್ಮಾರಕ ನಿಧಿಯ ಪ್ರತಿನಿಧಿ ಶ್ರೀಮತಿ ಉಮಾಬಾಯಿ ಕುಂದಾಪುರ ಅವರಿಗೆ ಬರೆಯಬಹುದು. ಎಲ್ಲ ವೆಚ್ಚಗಳು ನಿಧಿಯಿಂದ ವಹಿಸಲ್ಪಟ್ಟು ನಿಧಿಯೇ ಅವರಿಗೆ ನೌಕರಿಯನ್ನೂ ಕೊಡುವದು. ಮೂಲ ಶಿಕ್ಷಣಕ್ಕೆ ಮ್ಯಾಟ್ರಿಕ್ ಮತ್ತು ಬಾಲವಾಡಿ ತರಬೇತಿಗೆ ಮುಲ್ಕಿ ಹಾಗು ಹಿಂದೀ ಭಾಷಾಜ್ಞಾನ ಇವು ಅವಶ್ಯ ಅರ್ಹತೆಗಳು.

ಮಾಧ್ಯಮಿಕ ಶಾಲೆಗಳಿಗೆ ಗ್ರ್ಯಾಂಟ್ ದೊರೆಯಬೇಕಾದರೆ ಘಾಟೆ ಪರುಳೇಕರ ಶಿಫಾರಸುಗಳನ್ವಯ ಶಿಕ್ಷಕರಿಗೆ ಹೊಸ ಸಂಬಳ ಸ್ಕೇಲುಗಳನ್ನು ಅವು ಜಾರಿಯಲ್ಲಿ ತರಬೇಕಾಗುವದರಿಂದ ಬೇಗನೆ ಅವನ್ನು ಶಾಲೆಗಳು ಜಾರಿಯಲ್ಲಿ ತರಬೇಕೆಂದು ಕರ್ನಾಟಕದ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಮುಂಡರಗಿ ಭಾಗದ ಹಳ್ಳಿಗುಡಿಯಲ್ಲಿ ಕಂಟಿ ಹೊಡೆಯುತ್ತಿದ್ದ ಗಂಟಿಪ್ಪಾ ಕನಕಪ್ಪಾ ಮುದ್ಲಾಪೂರ ಎಂಬವನಿಗೆ ನಿಜಾಮ ಗಡಿಯಿಂದ ಬಂದ ಪಠಾಣರು ಗುಂಡು ಹಾಕಿದರು. ಅವನು ಗದಗಿನ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟಿದ್ದಾನೆ. ಈ ಭಾಗದ ಇನ್ನೂ ಹಲವೆಡೆಗಳಲ್ಲಿ ಪಠಾಣರ ಪುಂಡಾಟಿಕೆ ನಡೆಯಿತು.

ರೋಣ ತಾಲೂಕಿನ ಹಿರೇಕೊಪ್ಪ ಮತ್ತು ರಾಮಪುರಹಳ್ಳಿಗಳಮೇಲೆ ನಿಜಾಮಿ ಪಠಾಣರು ಮಾಡಿದ ದಾಳಿಯಲ್ಲಿ ೮-೧೦ ಜನರಿಗೆ ಗಾಯಗಳಾಗಿದ್ದು ಇಬ್ಬರು ತಕ್ಷಣ ಮಡಿದರು. ಏಳಲಾಸಪುರದಲ್ಲಿ ಪಠಾಣರು ಮೂವರನ್ನು ನಿಜಾಮ ಗಡಿಯೊಳಗೆ ಓಡಿಸಿಕೊಂಡು ಹೋಗಿ ಕೊಂದು ಚೆಲ್ಲಿದರು.

ಘಟನಾ ಸಮಿತಿಯ ಸದಸ್ಯರಾದ ಶ್ರೀ ರಂ. ರಾ. ದಿವಾಕರರು ತಾ. ೨೨ ಕ್ಕೆ ಭಾರತದ ಹೊಸ ಘಟನೆಯನ್ನು ಕುರಿತು ಧಾರವಾಡ ನಗರ ಸಭೆಯ ಅಟ್ಟದಲ್ಲಿ ಇಂಗ್ಲೀಷಿನಲ್ಲಿ ಭಾಷಣ ಮಾಡಿದರು.

ಧಾರವಾಡದಲ್ಲಿ ಮಹಮ್ಮದ ಯುಸುಫನೆಂಬ ೨೫ ವರ್ಷದ ತರುಣನು ತನ್ನ ಮನೆಯಲ್ಲಿ ಉರುಲು ಹಾಕಿಕೊಂಡು ಸತ್ತನು.

ಮಂತ್ರಾಲಯ ಕ್ಷೇತ್ರ ಹೈದರಾಬಾದ ಗಡಿಯಲ್ಲಿದ್ದು ಶ್ರೀ ಸ್ವಾಮಿಗಳು ಅಲ್ಲಿಂದ ದಿಗ್ವಿಜಯ ಮಾಡಿರುವದರಿಂದಲೂ ಆದವಾನಿಯಲ್ಲಿ ಕೆಲವೆಡೆ ಕಾಲರಾ ಬೇನೆಯಿರುವದರಿಂದಲೂ ಆಹಾರ ತುಟಾಗ್ರತೆಯಿಂದಲೂ ಈ ಬಾರಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೋತ್ಸವ ಜರಗುವ ಸಂಭವ ಕಾಣದಿರುವದರಿಂದ ಯಾತ್ರಿಕರು ಅನಾವಶ್ಯಕವಾಗಿ ನುಗ್ಗಿ ಬಂದು ಕಷ್ಟಕ್ಕೆ ಗುರಿಯಾಗಬಾರದೆಂದು ಗದಗಿನ ಮಂತ್ರಾಲಯ ಯಾತ್ರಿಕ ಸಂಘದ ಅಧ್ಯಕ್ಷ ಶ್ರೀ ನವಲಿ ಗೋಪಾಲರಾಯರು ತಿಳಿಸುತ್ತಾರೆ.

ಕಳ್ಳತನದಿಂದ ಹೈದರಾಬಾದಕ್ಕೆ ರಿವಾಲ್ವರನ್ನು ಟೊಂಕದಲ್ಲಿ ಬಚ್ಚಿಟ್ಟುಕೊಂಡೊಯ್ಯುತ್ತಿದ್ದ ಮುಸ್ಲಿಮ ಮಹಿಳೆಯೊಬ್ಬಳು ಹುಬ್ಬಳ್ಳಿ ನಿಲ್ದಾಣದಲ್ಲಿ ಪೋಲೀಸರ ಕೈಯಲ್ಲಿ ಸಿಕ್ಕಿಬಿದ್ದಳು.

ಮೊಗಲಾಯಿಯಿಂದ ತಾ ೨೫ ಕ್ಕೆ ಮುಂಡರಗಿ ಪೇಠೆಯ ಹಳ್ಳೀಕೇರಿಗೆ ಬಂದ ಮೋಟಾರೊಂದನ್ನು ಸಂಶಯದಿಂದ ತಡೆದು ಹಾಕಲಾಗಿದೆ. ಅದರ ಒಡೆಯನು ಸಾಗರದ (ಮೈಸೂರು ಸಂಸ್ಥಾನ) ಒಬ್ಬ ಮುಸ್ಲಿಮನೆಂದು ತಿಳಿಯುತ್ತದೆ.

"ಹಿಂದಮಾತಾ ಇಂಡಸ್ಟ್ರೀಸ್ ಲಿಮಿಟೆಡ್" ಎಂಬ ಹೊಸ ಪಾಲು-ಬಂಡವಳದ ಕಂಪನಿಯೊಂದು ಹುಬ್ಬಳ್ಳಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು ಅದು ಬೇಗನೆ ಬೆಂಕಿ ಪೆಟ್ಟಿಗೆ ಕಾರಖಾನೆಯನ್ನು ತೆರೆಯಲಿದೆಯೆಂದು ತಿಳಿಯುತ್ತದೆ.

ಒಡ್ಡರ ಸಮಾಜದವರಿಗಾಗಿ ಧಾರವಾಡ ಕಿಲ್ಲೆಯ ದುರ್ಗಾದೇವಿಯ ಗುಡಿಯಲ್ಲಿ ಪ್ರೌಢ ಶಿಕ್ಷಣ ತರಗತಿಯನ್ನು ಶ್ರೀ ಅಂಗಡಿ ಹಣ್ಣುಬಪ್ಪನವರು ಉದ್ಘಾಟಿಸಿದರು. ಶ್ರೀ. ಬುರ್ಲಿ ಬಿಂದು ಮಾಧವ, ಶ್ರೀ ಹುಕ್ಕೇರಿಕರ ರಾಮರಾವ ಮೊದಲಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಹುಬ್ಬಳ್ಳಿಯ ಗವಿ ಓಣಿಯಲ್ಲಿರುವ ಒಬ್ಬ ಮುಸಲ್ಮಾನನ ಮನೆಯಲ್ಲಿ ಪೋಲೀಸರು ಶೋಧ ನಡೆಸಲು ಒಂದು ವಾಯರಲೆಸ್ ಯಂತ್ರ ಸಿಕ್ಕಿದೆ.

ಗದಗ, ರೋಣ ಮತ್ತು ನವಲಗುಂದ ತಾಲೂಕುಗಳ ಹೊಲದೊಡೆಯರ ಸಂಯುಕ್ತ ಸಭೆ ಹುಬ್ಬಳ್ಳಿ ನಗರ ಸಭೆಯ ಅಧ್ಯಕ್ಷ ಶ್ರೀ ರಾಮರಾವ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಗದಗಿನಲ್ಲಿ ಜರಗಿ ಜೂನ್ ೫ ಕ್ಕೆ ಮಾನ್ಯ ಮುರಾರಜಿಯವರು ಪ್ರಕಟಗೊಳಿಸಿದ ಧೋರಣೆಯನ್ನು ನಿಷೇಧಿಸಿತು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ೫೮ ನೆ ಸಂಸ್ಥಾಪನಾ ದಿನೋತ್ಸವ ತಾ. ೨೦ ನೆ ದಿನ ಶ್ರೀ ಕಲ್ಲಾಪುರ ನರಸಿಂಗರಾವ್ ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಕಾವ್ಯ ವಾಚನ, ಆಶುಕಥಾ ಸ್ಪರ್ಧೆ, ಆಶುಕಾವ್ಯ ಸ್ಪರ್ಧೆ ಮೊದಲಾದವುಗಳೊಡನೆ ಸಾಂಗವಾಯಿತು.

ವಿಜಾಪುರ

ಭಗವಾನ ಬಸವಜಯಂತಿಯ ದಿನ ಸಾರ್ವತ್ರಿಕ ಸೂಟಿ ಕೊಡಬೇಕೆಂದು ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ. ಡಿ. ಪಾಟೀಲರು ಮುಂಬಯಿ ಸರಕಾರಕ್ಕೆ ಬಿನ್ನವಿಸಿದ್ದಾರೆ.

ಬಾಗಲಕೋಟೆಯಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ವಸತಿಗೃಹದಲ್ಲಿ ಸಂಗ್ರಹಿಸಿದ್ದ ೩ ಚೀಲ ಬಿಳಿಜೋಳ, ೧॥ ಚೀಲ ಕೆಂಪು ಜೋಳ ಸಹಿತ ನಾನಾ ಧಾನ್ಯಗಳನ್ನು ಕಳ್ಳರು ಅಪಹರಿಸಿದ್ದಾರೆ. ಬಡ ವಿದ್ಯಾರ್ಥಿಗಳ ಕಾಳು ಕದ್ದವರನ್ನು ಹಿಡಿಯಲು ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಜನರಲ್ಲಿ ವಿನಂತಿ ಮಾಡಿಕೊಂಡಿದ್ದಾರೆ.

ಹೈದ್ರಾಬಾದ ನಿರಾಶ್ರಿತ ವಿದ್ಯಾರ್ಥಿಗಳ ಸಲುವಾಗಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಅಭ್ಯಾಸ ಕ್ರಮವನ್ನೇ ಅನುಸರಿಸಿ ಶಿಕ್ಷಣ ಕೊಡುವ "ನರೇಂದ್ರ ಮಾಧ್ಯಮಿಕ ಶಾಲೆ"ಯೊಂದು ಸೊಲ್ಲಾಪುರದ ಹೈದ್ರಾಬಾದ ಎಜ್ಯುಕೇಶನ್ ಸೊಸಾಯಿಟಿಯವರಿಂದ ವಿಜಾಪುರದಲ್ಲಿ ಸ್ಥಾಪಿಸಲ್ಪಟ್ಟಿದ್ದು ಸಿದ್ಧೇಶ್ವರ ಹೈಸ್ಕೂಲ ಸಂಸ್ಥೆಯವರು ಅದಕ್ಕೆ ಔದಾರ್ಯದಿಂದ ಸ್ಥಳ ಒದಗಿಸಿದ್ದಾರೆ.

ಹಿಂದೀ ಒಕ್ಕೂಟ ಪ್ರದೇಶದ ಮಿಲಿಟರಿ ಗೋಪ್ಯಗಳನ್ನು ಸಂಗ್ರಹಿಸಲು ಬಂದಿದ್ದ ಕಲಬುರ್ಗಿಯ ಒಬ್ಬ ರಜಾಕಾರನನ್ನು ಹೈದ್ರಾಬಾದ ಕಾಂಗ್ರೆಸ್ಸಿನ ಕಾರ್ಯಕರ್ತರು ಗುರುತು ಹಿಡಿದದ್ದರಿಂದ ವಿಜಾಪುರದಲ್ಲಿ ಅವನು ಪೋಲೀಸರ ಕೈಯಲ್ಲಿ ಸಿಕ್ಕನು.

ಶ್ರೀ ಆನಂದರಾವ ಹೊದ್ಲೂರರೆಂಬ ಹೈದರಾಬಾದ ಕಾಂಗ್ರೆಸ್ಸಿಗರು ಆನಂದ ತಾಲೂಕಿನ ಖಾಸಗಿ ಎಂಬ ಹಳ್ಳಿಯಲ್ಲಿ ರಜಾಕಾರರನ್ನು ಶೌರ್ಯದಿಂದ ಎದುರಿಸಿ ಮರಣ ಹೊಂದಿದರು.

ಗುಳೇದಗುಡ್ಡದಲ್ಲಿ ಮೌಲವಿ ವೇಷದಿಂದ ತಿರುಗುತ್ತಿದ್ದ ಕಮರ ಅಲ್ಲಿ ಬಿಲಾವಲ ಎಂಬ ರಜಾಕಾರನನ್ನು ಗ್ರಾಮರಕ್ಷಕಾಧಿಕಾರಿಗಳು ಹಿಡಿದು ಪೋಲೀಸರಿಗೊಪ್ಪಿಸಿದರು.

ಉತ್ತರ ಕನ್ನಡ

ಕುಮಟಾ ತಾಲೂಕ ಮೂರೂರ ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆಯನ್ನು ಬೆಳೆಸುವ ಬಗ್ಗೆ ಒಂದು ಬಹುಮಾನ ಕೊಡಲ್ಪಟ್ಟಿತು. ಆಡುವಾಗ್ಗೆ ತನಗೆ ಸಿಕ್ಕಿದ ಇನ್ನೊಬ್ಬ ಹುಡುಗನ ಚಿನ್ನದ ಒಡವೆಯನ್ನು ಹೆಡ್ ಮಾಸ್ತರರ ಹತ್ತಿರ ತಂದು ಕೊಟ್ಟು ನಾರಾಯಣ ಗಣಪತಿ ಭಟ್ಟನೆಂಬ ೮ ವರ್ಷದ ಹುಡುಗನು ಪ್ರಾಮಾಣಿಕತೆಗಾಗಿ ಬಹುಮಾನ ಪಡೆದನು. ೨॥ ರೂಪಾಯಿಯ ಈ ಬಹುಮಾನವನ್ನು ಮಾಮಲೇದಾರ ಶ್ರೀ ಸಬನೀಸರಿಂದ ಹುಡುಗನಿಗೆ ಕೊಡಿಸಲಾಯಿತು.

ತಾ. ೨೩ ರಾತ್ರಿ ಶೇಜವಾಡ ಹಳ್ಳಿಯಲ್ಲಿ ನಾಲ್ಕು ದನಗಳು ಹುಲಿಯಿಂದ ಕೊಲ್ಲಲ್ಪಟ್ಟವು.

ಗಜೇಂದ್ರಗಡದಲ್ಲಿ ಈ ಹುಟ್ಟಿಯ ಕಾಲದಲ್ಲಿಯೂ ನೇಕಾರ-ಸಾವುಕಾರರು ನೇಕಾರರಿಗೆ ಕೊಡುವ ಕೂಲಿಯಲ್ಲಿ ಸೀರಿಗೆ ಒಂದು ರೂಪಾಯಿಯಂತೆ ಕಡಿಮೆ ಮಾಡಿರುವದರಿಂದ ಬಡ ನೇಕಾರರು ಸಂಕಷ್ಟಕ್ಕೀಡಾಗಿದ್ದಾರೆ. ಸರಕಾರ ಇತ್ತ ಗಮನಿಸಬೇಕು. ಅಗ್ಗ ದರದ ಕಾಳಿನಂಗಡಿಗೆ ಒಪ್ಪಿಗೆ ದೊರೆತಿದ್ದರೂ ಅದಿನ್ನೂ ತೆರೆದಿಲ್ಲ.

ದಕ್ಷಿಣ ಕನ್ನಡ

ಕೆನರಾ ಹಾಯಸ್ಕೂಲ, ಬೆಸೆಂಟ ಬಾಲಿಕಾ ಪಾಠಶಾಲೆ, ಕೆನರಾ ಬ್ಯಾಂಕ ಮೊದಲಾದ ಸಂಸ್ಥೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಕಾರಣರಾದ ಮಂಗಳೂರಿನ ಪ್ರಸಿದ್ಧ ವಕೀಲ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಯವರು ತಮ್ಮ ೭೬ ನೆ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ.

ಕಮ್ಯುನಿಸ್ಟ ನಾಯಕರಾದ ಶ್ರೀ ಎಸ್. ಎನ್. ಹೊಳ್ಳರ ಸಂಗಡಿಗರೂ ಅವರನ್ನು ಮುಂಜೇಶ್ವರ ನಿಲ್ದಾಣದಲ್ಲಿ ಪೋಲೀಸರ ಕೈಯಿಂದ ಪಾರು ಮಾಡಿಕೊಂಡೊಯ್ದವರೂ ಆದ ಶ್ರೀ ಚನ್ನಯ್ಯ ಪೂಜಾರಿಯವರನ್ನು ಮಂಗಳೂರಿನ ಸಮೀಪದ ಕಳ್ಳಿಗೆ ಹಳ್ಳಿಯಲ್ಲಿ ಪೋಲೀಸರು ಬಂಧಿಸಿದರು.

ಜಿಲ್ಲಾ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು ತಮ್ಮ ಕಾರ್ಯಕಾರಿ ಮಂಡಲದ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ್ದು ಶ್ರೀ ಕೆ. ಕೆ. ಶೆಟ್ಟರನ್ನು ಕಾರ್ಯದರ್ಶಿಯಾಗಿ ಆರಿಸಿದ್ದಾರೆ.

ಕಾಸರಗೋಡಿನ ಕಾರ್ಕೋಡು ಮಾರಿಗುಡಿಯ ಕಾಣಿಕೆಯ ಭಂಡಾರವನ್ನು ರಾತ್ರಿಯಲ್ಲಿ ಕಳ್ಳರು ದೋಚಿಕೊಂಡು ಹೋದರು.

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ಶ್ರೀ ಎನ್. ಸುಬ್ಬರಾಯರು ನಿವೃತ್ತರಾಗುವ ನಿಮಿತ್ತ ದಿನಾಂಕ ೧೭ ರಂದು ಅವರನ್ನು ಬೀಳ್ಕೊಡುವ ಸತ್ಕಾರಕೂಟವು ಮಂಗಳೂರಿನ ಹುಡುಗರ ಟ್ರೈನಿಂಗ ಶಾಲೆಯಲ್ಲಿ ಜರುಗಿತು. ಹಲವು ಮಹನೀಯರು ನಿವೃತ್ತ ವಿದ್ಯಾಧಿಕಾರಿಗಳ ಕುರಿತು ಮಾತನಾಡಿದರು.

ದಕ್ಷಿಣ ಕನ್ನಡದಲ್ಲಿ ಉಂಟಾದ ಬೀಡಿ ಎಲೆಯ ಅಭಾವದಿಂದಾಗಿ ಮಂಗಳೂರಿನ ಗಣೇಶ ಬೀಡಿ ವರ್ಕ್ಸನವರು ತಮ್ಮ ಮಂಗಳೂರು, ಪಾಣೆಮಂಗಳೂರು, ಪುತ್ತೂರು ಮೊದಲಾದೆಡೆಗಳ ೧೨ ಶಾಖೆಗಳನ್ನು ಮುಚ್ಚಿರುವರು.

ಮಂಗಳೂರು ಪೌರಸಭೆಯು ದಿನಾಂಕ ೧೭ ರಂದು ಉಪಾಧ್ಯಕ್ಷ ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸ ಸರಕಾರವು ಹರಿಜನರ ಉನ್ನತಿಗಾಗಿ ತೆಗೆದಿಟ್ಟ ೧ ಕೋಟಿ ರೂಪಾಯಿಯಿಂದ ಮಂಗಳೂರಲ್ಲಿ ಹರಿಜನ ವಸತಿ ಗೃಹಗಳನ್ನು ನಿರ್ಮಿಸಲು ಸಹಾಯ ಕೇಳಲಾಯಿತು.

ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಪ್ರಥಮ ಕಮಿಶನರ್ ಶ್ರೀ. ಎ. ಎಸ್. ನಾಯರು ದಿನಾಂಕ ೧೭ ರಂದು ಉಡುಪಿಗೆ ಬಂದು ೨೨ ರ ವರೆಗೆ ಶ್ರೀ ಕೃಷ್ಣಮಠ ಮತ್ತು ಇತರ ದೇವಾಲಯಗಳನ್ನು ಸಂದರ್ಶಿಸಿದರು.

ಬೆಳಗಾವಿ

ಚಿಕ್ಕೋಡಿ ಕರ್ನಾಟಕ ಸಂಘದ ವಾರ್ಷಿಕ ಸಾಧಾರಣ ಸಭೆ ತಾ. ೨೨ ಕ್ಕೆ ಅಲ್ಲಿಯ ಇಂಗ್ಲಿಷ ಶಾಲೆಯ ಹೆಡ್ ಮಾಸ್ತರರಾದ ಶ್ರೀ ಕಾಥವಟೆ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ವರದಿ ಓದಲ್ಪಟ್ಟು ಹೊಸ ವರ್ಷಕ್ಕೆ ಶ್ರೀ ಸದರ ಜೋಶಿ ವಾಮನರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಗೋಕಾಕ ತಾಲೂಕಿನ ಮುಗಳಖೋಡದಲ್ಲಿ ರಾಮಪ್ಪಾ ಕುರುಬರ ಎಂಬವನನ್ನು ಅವನ ಹೆಂಡತಿಯೂ (ವಯಸ್ಸು ೨೨) ಅವಳ ಪ್ರಿಯತಮನೆಂದು ಹೇಳಲಾದ ನೆರೆಮನೆಯ ಶಿವಮಲ್ಲಪ್ಪನೂ ಸೇರಿ ಕೊಡಲಿಯಿಂದ ತಲೆ ಕಡಿದು ಬಾವಿಯಲ್ಲಿ ಒಗೆದಿದ್ದರೆಂದು ಪೋಲೀಸರು ಅವರಿಬ್ಬರನ್ನೂ ಬಂಧಿಸಿದ್ದಾರೆ.

ಗೋಕಾಕ ರಾಷ್ಟ್ರೀಯ ಗಿರಣಿ ಮಜದೂರ ಸಂಘಕ್ಕೆ ಸರಕಾರದ ಮನ್ನಣೆ ದೊರೆಕಿತು.

ಮೈಸೂರ ಸಂಸ್ಥಾನ

ಮೈಸೂರಿನ ಶ್ರೀಮನ್ಮಹಾರಾಜರು ತಾ. ೨೬ ಕ್ಕೆ ಮೈಸೂರಲ್ಲಿ ಕನ್ನಡ ರಂಗಭೂಮಿಯ ಶತಸಾಂವತ್ಸರಿಕ ಹಾಗು ಗುಬ್ಬಿ ನಾಟಕ ಮಂಡಲಿಯ ಹೀರಕ ಮಹೋತ್ಸವವನ್ನು ಉದ್ಘಾಟನ ಮಾಡಿದರು. ಜನವನ್ನು ಸನ್ಮಾರ್ಗಕ್ಕೆ ಹಚ್ಚಲು ನಾಟಕವೇ ಶ್ರೇಷ್ಠ ಸಾಧನವೆಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು.

ಹೈದರಾಬಾದಿನಿಂದ ಮೈಸೂರಿಗೆ ಬಂದು ನೆಲಸಿದ ಶ್ರೀ ಆರ್. ಸಿ. ಅಯ್ಯಂಗಾರರ ಮನೆಯಲ್ಲಿ ನುಗ್ಗಿ ಕಳ್ಳರು ವಜ್ರ ವೈಡೂರ್ಯ ಚಿನ್ನ ಆಭರಣಗಳನ್ನು ಅಪಹರಿಸಿದರು.

ಬೆಂಗಳೂರಿನ ೮ ಕಾಲೇಜಿಗೆ ಜಾತಿಯನ್ನು ಲೇಖಿಸಿ ವಿದ್ಯಾರ್ಥಿಗಳು ಹಾಕಿದ ಅರ್ಜಿಗಳನ್ನು ಕಾಲೇಜು ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಆದರೆ ಮತದಾರ ಯಾದಿಗಳಿಗಾಗಿ ಅಧಿಕಾರಿಗಳು ಜಾತಿ ಯಾವುದೆಂದು ಕೇಳುತ್ತಾರೆ.

ತಾ. ೧೮ ಕ್ಕೆ ಮೈಸೂರು ಸಂಸ್ಥಾನದ ಸರಕಾರಿನ ಮಂತ್ರಿಗಳಾದ ಶ್ರೀ ಎಚ್. ಸಿ. ದಾಸಪ್ಪನವರು ಹೊಸದುರ್ಗಕ್ಕೆ ಭೆಟ್ಟಿಕೊಟ್ಟಿದ್ದಾಗ ಆ ಊರಿಗೆ ನೀರಿನ ಹಾಗು ವಿದ್ಯುಚ್ಛಕ್ತಿಯ ಸೌಕರ್ಯ ಒದಗಿಸಬೇಕೆಂದು ಅವರಲ್ಲಿ ಬೇಡಿಕೊಳ್ಳಲಾಯಿತು. ಸಮೀಪದ ವೇದಾವತಿ ನದಿಯ ತೀರದಲ್ಲಿ ಒಂದು ಸಿಮೆಂಟ ಕಾರಖಾನೆ ತೆರೆಯುವ ಅನುಕೂಲತೆಗಳನ್ನೂ ಅವರ ಲಕ್ಷಕ್ಕೆ ತರಲಾಯಿತು. ಮಂತ್ರಿಗಳು ಸಹಾನುಭೂತಿಪರ ಉತ್ತರವಿತ್ತರು.

ಹಿಂದುಸ್ತಾನ

ಮುಂಬಯಿ

ಹೈದರಾಬಾದ ಸಂಸ್ಥಾನದ ... ಜಿಲ್ಲೆಯ ಕೋಡಕೋಡ ಎಂಬ ಹಳ್ಳಿಯ ಮೇಲೆ ರಜಾಕಾರರು ಮತ್ತು ನಿಜಾಮ ಪೋಲೀಸರು ನಡೆಸಿದ ದಾಳಿಯ ಪರಿಣಾಮವಾಗಿ ಆ ಇಡೀ ಹಳ್ಳಿಯೇ ಉಧ್ವಸ್ತವಾಗಿರುವದೆಂದು ಅಲ್ಲಿಂದ ಮುಂಬಯಿಗೆ ಬಂದ ಒಬ್ಬ ಮನುಷ್ಯನಿಂದ ತಿಳಿಯುತ್ತದೆ.

ಬಾರ್ಸಿ ತಾಲೂಕಿನ ನಾಮದಗಾವ ಹಳ್ಳಿಯ ಮೇಲೆ ಹೈದರಾಬಾದದ ೨೦೦ ಸಶಸ್ತ್ರ ಅರಬರು ದಾಳಿಮಾಡಲು ಬಂದಾಗ ಅಲ್ಲಿಯ ಸಂರಕ್ಷಣದಳದವರು ಅವರನ್ನು ಎದುರಿಸಿ ೨೦ ಅರಬರನ್ನು ಕೊಂದರೆಂದೂ ಉಳಿದವರನ್ನು ಓಡಿಸಿದರೆಂದೂ ವರದಿಯಾಗಿದೆ.

ತಾ ೨೪ ಕ್ಕೆ ಮುಂಬಯಿಯಲ್ಲಿ ಪ್ರಾಂತದ ಎಲ್ಲ ಜಿಲ್ಲೆಗಳ ಕಲೆಕ್ಟರರ ಮತ್ತು ಅಧಿಕಾರಿಗಳ ಸಮ್ಮೇಲನ ಸೇರಿತ್ತು. ಆಗ ಮುಖ್ಯಮಂತ್ರಿ ಶ್ರೀ. ಬಿ. ಜಿ. ಖೇರರು ಮಾತನಾಡುತ್ತ, ದೇಶದಲ್ಲಿ ಗಲಭೆ ಎದ್ದರೆ ಅದನ್ನು ಉಗ್ರಉಪಾಯದಿಂದ ಕೂಡಲೇ ಹತ್ತಿಕ್ಕಬೇಕು. ಇದಕ್ಕೆ ಸರಕಾರದ ಮತ್ತು ಜನತೆಯ ಬೆಂಬಲವಿದೆ. ಪ್ರಾಂತದ ಶಾಂತಿಸುವ್ಯವಸ್ಥೆ ಕಾಯುವದು ಅತ್ಯಂತ ಮಹತ್ವದ ಮಾತು ಎಂದು ಮೊದಲಾಗಿ ಹೇಳಿದರಲ್ಲದೆ ಕಾಂಗ್ರೆಸಿಗರು ದೈನಂದಿನ ಆಡಳಿತದಲ್ಲಿ ಕೈಹಾಕದಂತೆ ನಾನು ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನ ಕೊಟ್ಟರು.

ಹೊಸದಿಲ್ಲಿ

ಹಿಂದುಸ್ತಾನ ಕೇಂದ್ರ ಮಂತ್ರಿಮಂಡಲದಲ್ಲಿ ಇನ್ನೂ ೪-೫ ಮಂತ್ರಿಗಳನ್ನು ನೇಮಿಸಿಕೊಳ್ಳಲಾಗುವದೆಂದೂ ಹೊಸ ಮಂತ್ರಿಗಳಿಗೆ ಒಂದೊಂದು ಖಾತೆಯನ್ನು ಒಪ್ಪಿಸಿಕೊಡಲಾಗುವದೆಂದೂ ತಿಳಿಯುತ್ತದೆ.

ಸರ್ ಮಿರ್ಜಾ ಇಸ್ಮಾಯಿಲರು ಫ್ರಾನ್ಸದಲ್ಲಿ ಹಿಂದೀ ರಾಯಭಾರಿಗಳಾಗಿ ನೇಮಕ ಹೊಂದುವರೆಂದು ತಿಳಿದು ಬರುತ್ತದೆ.

ಗಾಂಧಿ ರಾಷ್ಟ್ರೀಯ ಸ್ಮಾರಕ ಸಮಿತಿಯ ಸಭೆಯು ಜುಲೈ ೨೨ ಕ್ಕೆ ಸೇರಿ ವಿಶ್ವಸ್ತರನ್ನು ನೇಮಿಸಲು ನಿರ್ಧರಿಸಿತು. ಶ್ರೀ ಮಂಗಲದಾಸ ಪಕ್ವಾಸಾ ಅವರಿಗೆ ವಿಶ್ವಸ್ತ ನಿಧಿ ನೋಡಿಕೊಳ್ಳಲು ವಹಿಸಲಾಗಿದೆ.

ಹಿಂದುಸ್ತಾನ ಸರಕಾರದ ಸಂಸ್ಥಾನ ಖಾತೆಯವರು ಜುಲೈ ೨೨ ಕ್ಕೆ ಒಂದು ಪ್ರಕಟನೆ ಹೊರಡಿಸಿ ಹೈದರಾಬಾದಕ್ಕೆ ಔಷಧ ಮತ್ತು ಅವಶ್ಯಕ ವಸ್ತುಗಳನ್ನು ಹಿಂದುಸ್ತಾನ ಸರಕಾರವು ದಿಗ್ಬಂಧನ ಹಾಕಿ ತಳೆಯುವದನ್ನು ನಿಲ್ಲಿಸಿದೆಯೆಂದು ನಿಜಾಮ ಸರಕಾರವು ಅಪಪ್ರಚಾರ ನಡೆಸಿದ್ದನ್ನು ಖಂಡಿಸಿದ್ದಾರೆ. ಹಾಗೂ ಅವಶ್ಯಕ ಪದಾರ್ಥಗಳ ಪೂರೈಕೆಯನ್ನು ನಿಲ್ಲಿಸಿಲ್ಲವೆಂದು ಸ್ಪಷ್ಟೀಕರಣ ಕೊಟ್ಟಿದ್ದಾರೆ.

ಹಿಂದುಸ್ತಾನ ಸರಕಾರದ ಸಂರಕ್ಷಣ ಖಾತೆಯು ಒಂದು ಪ್ರಕಟನೆ ಹೊರಡಿಸಿ, ಕೊಲ್ಹಾಪುರ ದಾರ್ಸಿ ನಡುವೆ ನಾನಜ ಎಂಬ ಹಳ್ಳಿಯ ಹತ್ತಿರ ತಾ. ೨೫ ರಂದು ರಜಾಕಾರರು ದಾಳಿ ಮಾಡಲು ಹಿಂದೀ ಸೈನಿಕರು ಅವರನ್ನು ಎದುರಿಸಿ ೩೦ ರಜಾಕಾರರನ್ನು ಕೊಂದು ಉಳಿದವರನ್ನು ಓಡಿಸಿದರೆಂದೂ ಅವರ ಬಳಿಯಿದ್ದ ಬಂದೂಕುಗಳನ್ನು ಕಸಿದರೆಂದೂ ಸಾರಿದೆ.

ನಾನಜಹಳ್ಳಿಯನ್ನು ಹಿಂದುಸ್ತಾನದ ಸೈನಿಕರು ತಾ. ೨೭ ಕ್ಕೆ ಆಕ್ರಮಿಸಿದರೆಂದು ಸುದ್ದಿ ಬಂದಿದೆ.

ಮಧ್ಯಪ್ರಾಂತ

ಮಧ್ಯಪ್ರಾಂತ ವರ್‍ಹಾಡಗಳಲ್ಲಿ ಹಿಂದೀ ಸರಕಾರೀ ಭಾಷೆಯಾಗಲಿದೆ. ಇಲ್ಲಿ ಹಿಂದೀ ಮರಾಠಿ ಎರಡೂ ಪ್ರಚಲಿತವಿದ್ದ ಮೂಲಕ ಈ ಭಾಷೆಗಳ ಪಾರಿಭಾಷಿಕ ಶಬ್ದಗಳನ್ನು ಕಂಡು ಹಿಡಿಯಲು ಗೃಹಮಂತ್ರಿಗಳಾದ ಪಂ. ಡಿ. ಪಿ. ಮಿಶ್ರರ ನೇತೃತ್ವದಲ್ಲಿ ಒಂದು ಪ್ರತ್ಯೇಕ ಖಾತೆಯನ್ನು ತೆರೆಯಲಾಗುವದೆಂದು ತಿಳಿಯುತ್ತದೆ.

ಪ. ಬಂಗಾಲ

ನೇತಾಜಿ ಸುಭಾಷಚಂದ್ರ ಬೋಸರ ಎಲ್ಲರಿಗೂ ಹಿರಿಯ ಅಣ್ಣ ಶ್ರೀ ಸತೀಶಚಂದ್ರ ಬೋಸರು ತಾ ೩೧ ಜುಲೈ ದಿನ ಬೆಳಿಗ್ಗೆ ಕಲಕತ್ತೆಯ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಇವರಿಗೆ ಮರಣ ಕಾಲಕ್ಕೆ ೭೦ ವರ್ಷ ವಯಸ್ಸಾಗಿದ್ದವು. ಇವರು ಪಶ್ಚಿಮ ಬಂಗಾಲ ಶಾಸನ ಸಭೆಯ ಸದಸ್ಯರಾಗಿದ್ದರು.

ಮದ್ರಾಸ

ತಾ ೨೬ ರ ಮುಂಜಾನೆ ಮದ್ರಾಸದ ಕಾರ್ಪೋರೇಶನ್ ಮೈದಾನದಲ್ಲಿ ನೆರೆದ ಸುಮಾರು ೧ ಲಕ್ಷ ಕೆಲಸಗಾರರ ಸಭೆಯಲ್ಲಿ ಪಂ. ಜವಾಹರಲಾಲರು ಭಾಷಣ ಮಾಡುತ್ತ ಕಮ್ಯುನಿಸ್ಟರೂ ಅವರನ್ನು ಅನುಸರಿಸಿರುವ ಕೆಲಸಗಾರರೂ ರಾಷ್ಟ್ರಕಂಟಕರೆಂದು ಹೇಳಿದರಲ್ಲದೆ ಕಮ್ಯುನಿಸ್ಟರ ವಿಘಾತಕ ಚಟುವಟಿಕೆಗಳನ್ನು ಯಾವ ಸರಕಾರವೂ ಸಹಿಸದೆಂದೂ ಅಧಿಕ ಸಮತೆಯ ಹೆಸರಿನಲ್ಲಿ ನಡೆದ ಇವರ ಹಿಂಸಾಚಾರವನ್ನೂ ರಜಾಕಾರರೊಡನೆ ಬೆರೆತು ಸ್ವಾರ್ಥ ಸಾಧಿಸುತ್ತಿರುವದನ್ನೂ ತೀವ್ರವಾಗಿ ಖಂಡಿಸಿದರು. ಮತ್ತು ಕೆಲಸಗಾರರು ಉತ್ಪಾದನೆಯನ್ನು ಹೆಚ್ಚಿಸಿ ರಾಷ್ಟ್ರವನ್ನು ಬಲಪಡಿಸಬೇಕೆಂದು ಬಿನ್ನವಿಸಿಕೊಂಡರು.

ಪ್ರೊ. ಘನಸಾಲಿಯವರು ಹೈದರಾಬಾದ ಸಂಸ್ಥಾನದಲ್ಲಿ ಸಂಚರಿಸುವ ತಮ್ಮ ನಿರ್ಧಾರವನ್ನು ವ್ಯಕ್ತಪಡಿಸಿ ತಾ. ೨೬ ಕ್ಕೆ ಮದಿರಾಕ್ಕೆ ಹೊರಟರು. ಅವರು ಸಂಗಡ ಕಸಬರಿಗೆಗಳನ್ನು ತೆಗೆದುಕೊಂಡಿದ್ದಾರೆ. ಇವೇಕೆಂದು ಕೇಳಲು ಹೋದಲ್ಲೆಲ್ಲ ಹರಿಜನ ಕೇರಿಗಳನ್ನು ಉಡುಗಲೆಂದು ಉತ್ತರ ಕೊಟ್ಟರು.

ಮದ್ರಾಸ ಶಾಸನ ಸಭೆಯ ಭವನದಲ್ಲಿ ತಾ. ೨೪ ಕ್ಕೆ ಹಿಂದುಸ್ತಾನದ ಗವರ್ನರ ಜನರಲ್‌ರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ಭಾವ ಚಿತ್ರದ ಅನಾವರಣ ಮಾಡುತ್ತ ಪಂ. ನೆಹರೂ ಅವರು ಶ್ರೀ ರಾಜಗೋಪಾಲಾಚಾರ್ಯರ ತ್ಯಾಗ, ಬುದ್ಧಿಮತ್ತೆ, ಸೇವೆ, ಮೊದಲಾದ ಅವರ ಗುಣಗಳನ್ನು ಹೊಗಳಿದರು.

ಮದ್ರಾಸ ಕಾರ್ಪೋರೇಶನ್ನವರು ತಾ ೨೪ ಕ್ಕೆ ಕೊಟ್ಟ ಮಾನ ಪತ್ರಕ್ಕೆ ಉತ್ತರ ಕೊಡುತ್ತ ಪಂ. ಜವಾಹರಲಾಲರು, ಹಿಂದುಸ್ತಾನವು ಧಾರ್ಮಿಕ ರಾಷ್ಟ್ರವೆಂಬುದನ್ನು ಎಲ್ಲರೂ ಲಕ್ಷದಲ್ಲಿಟ್ಟು ಅದರಂತೆ ವರ್ತಿಸಬೇಕೆಂದೂ ತಾವು ಜಾತೀಯತೆಯ ವಿರುದ್ಧ ಯುದ್ಧ ಹೂಡಿರುವೆವೆಂದೂ ಪ್ರಾಂತೀಯತೆಯನ್ನು ತಮ್ಮ ಶಕ್ತಿ ಸರ್ವಸ್ವದಿಂದ ವಿರೋಧಿಸುವೆನೆಂದೂ ಸಾರಿದರು.

ಹೈದರಾಬಾದ

ಹೈದ್ರಾಬಾದ ಸಂಸ್ಥಾನ ಕಾಂಗ್ರೆಸ ಕಾರ್ಯಕರ್ತರ ಆಸ್ತಿಯನ್ನೆಲ್ಲ ಜಪ್ತಮಾಡಬೇಕೆಂದು ನಿಜಾಮ ಸರಕಾರವು ಸುಗ್ರೀವಾಜ್ಞೆ ಹೊರಡಿಸಿದೆಯೆಂದು ತಿಳಿಯುತ್ತದೆ.

ನಿಜಾಮ ಸರಕಾರದ ಸಮಪ್ರಾತಿನಿಧ್ಯದ ಘಟನಾಸಮಿತಿಯ ಯೋಜನೆಯು ಕುಟಿಲತನದ್ದಾಗಿದ್ದು ಹಿಂದುಳಿದ ವರ್ಗದವರು ಅದನ್ನು ಒಪ್ಪುವದಿಲ್ಲವೆಂದು ಹಿಂದುಳಿದ ವರ್ಗದ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಸುಬ್ಬಯ್ಯನವರು ಒಂದು ಹೇಳಿಕೆ ಕೊಟ್ಟಿದ್ದಾರೆ.

ಹೈದರಾಬಾದದ ಪ್ರಶ್ನೆಯನ್ನು ಯುದ್ಧದಿಂದಲೇ ನಿರ್ಣಯಿಸಬೇಕೆಂಬುದು ಈಗ ಸ್ಪಷ್ಟವಾಗಹತ್ತಿದೆಯೆಂದು ಅ. ಭಾ. ಕಾಂ. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ನಾಗಪುರದ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಹೇಳಿದರು.

ರಾತ್ರಿ ಗಾಡಿಗಳ ಮೇಲೆ ದಾಳಿ ನಡೆದ ವರದಿ ಬಂದದ್ದರಿಂದ ದೋರನಕಲ್ಲ ಬಿಜವಾಡಗಳ ನಡುವೆ ಓಡಾಡುವ ಎಕ್ಸಪ್ರೆಸ್ ಗಾಡಿಯನ್ನು ನಿಜಾಮ ಗಡಿಯಲ್ಲಿಯ ಕಾಜಿಪೇಟ ಬಿಜವಾಡಗಳ ನಡುವೆ ಜುಲೈ ೨೫ ರಿಂದ ಓಡಾಡಗೊಡುವದಿಲ್ಲವೆಂದು ನಿಜಾಂ ಸಂಸ್ಥಾನ ರೇಲ್ವೆಯು ಪ್ರಕಟನ ಹೊರಟಿದೆ.

ನಿಜಾಮರು ಇಂಗ್ಲಂಡದ ಅರಸರಿಗೆ ಒಂದು ಪತ್ರ ಬರೆದು ಹಿಂದ—ಹೈದ್ರಾಬಾದ ಪ್ರಶ್ನೆಯಲ್ಲಿ ಕೈಹಾಕಬೇಕೆಂದು ಬೇಡಿದ್ದಾಗಿ ತಿಳಿಯುತ್ತದೆ.

ನಿರ್ಬಂಧಿತ ಸೊಲಸ್ನು ಹೈದರಾಬಾದಿಗೆ ಸಾಗಿಸುತ್ತಿದ್ದರೆಂದು ಹೈದರಾಬಾದ ನಿವಾಸಿಗ ಕೆಲಸುಮಾರ ಜನರನ್ನು ಕೊಲ್ಹಾಪುರದಲ್ಲಿ ಬಂಧಿಸಲಾಯಿತು.

ಸಂಯುಕ್ತ ಪ್ರಾಂತ

ಅಲಿಗಡಾದ ವಿದ್ಯಾಪೀಠದ ವಿದ್ಯಾರ್ಥಿಗಳು ಶ್ರೀ ಹೆಬ್ಬಸಿದ್ದನ್ನು ವಿರೋಧಿಸಲು ೨ ದಿನ ಸಾಂಕೇತಿಕ ಸಂಪು ಹೂಡಿದರೆಂದು ತಿಳಿಯುತ್ತದೆ.

ಹೈದ್ರಾಬಾದ ವಾಣಿಜ್ಯ ಮಂತ್ರಿ ಶ್ರೀ ಜೋಶಿಯವರ ರಾಜೀನಾಮೆ

ಸರಕಾರ ಕರ್ತವ್ಯಚ್ಯುತವಾಗಿದೆ

ರಜಾಕಾರರ ರಾಕ್ಷಸೀ ಕೃತ್ಯ!

ಹೈದ್ರಾಬಾದ ಸರಕಾರದ ವಾಣಿಜ್ಯಮಂತ್ರಿಗಳಾದ ಶ್ರೀ ಜೋಶಿಯವರು ಸರಕಾರದ ನಿರಂಕುಶ ಪುಂಡಾಟಿಕೆಯ ಆಡಳಿತವನ್ನು ನೋಡಲಾರದೆ ತಿಂಗಳೂ ಆರದೆ ರಾಜೀನಾಮೆ ಕೊಟ್ಟಿದ್ದಾರೆ. ತಾ ೨೬ ಕ್ಕೆ ಅವರ ರಾಜೀನಾಮೆಯು ಸ್ವೀಕೃತವೂ ಆಯಿತು. ಅವರು ರಾಜೀನಾಮೆ ಕೊಡುವ ಮೊದಲು ಸಂಸ್ಥಾನದ ಜಾಲ್ನಾ, ಔರಂಗಾಬಾದ, ಪರಭಣಿ, ನಾಂದೇಡ ಜಿಲ್ಲೆಗಳಲ್ಲಿ ಅಡ್ಡಾಡಿ ರಜಾಕಾರರ ಅನನ್ವಿತ ಅತ್ಯಾಚಾರಗಳನ್ನೆಲ್ಲ ಕಣ್ಣಾರೆ ಕಂಡು ಒಂದು ಹೇಳಿಕೆ ಹೊರಡಿಸಿದ್ದರಲ್ಲದೆ ಸರಕಾರಕ್ಕೂ ಇದನ್ನೆಲ್ಲ ತಿಳಿಸಿ ಇದನ್ನು ಸಂಪಡಿಸದಿದ್ದರೆ ನಿಜಾಮ ಸರಕಾರದ ಪತ್ತೇ ಹಾಳಾಗುವದೆಂದೂ ಹೇಳಿದರು. ಇದರ ಫಲವಾಗಿ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾದ್ದರಿಂದ ತಿದ್ದಿಕೊಳ್ಳಲೊಲ್ಲದ ಸರಕಾರದ ಅನ್ಯಾಯಗಳ ಹೊಣೆಗಾರಿಕೆ ತಮಗೆ ಬೇಡವೆಂದು ರಾಜೀನಾಮೆ ಸಲ್ಲಿಸಿದರು. ಅವರು ತಮ್ಮ ಹೇಳಿಕೆಯಲ್ಲಿ ತಾವು ಕಂಡ ಅನೇಕ ಹೃದಯದ್ರಾವಕ ದೃಶ್ಯಗಳ ಉಲ್ಲೇಖ ಮಾಡಿದ್ದಾರೆ. ರಜಾಕಾರರು ಅಸಂಖ್ಯಾತ ಹಿಂದೂ ಜನರ ಅದರಲ್ಲೂ ಬ್ರಾಹ್ಮಣರ ಕಣ್ಣುಕಿತ್ತು ಹಾಕಿದ, ಸ್ತ್ರೀಮಾನಭಂಗದ, ಆಸ್ತಿ, ಮನೆಮಾರು, ಸಂಗ್ರಹಿಸಿದ ಅನ್ನಸಾಮಗ್ರಿ ಮೊದಲು ಮಾಡಿ ಸರ್ವಸ್ವವನ್ನೂ ಸುಲಿದ ಉದಾಹರಣೆಗಳನ್ನೂ ಅನೇಕ ಹಳ್ಳಿಗಳನ್ನು ಸುಟ್ಟು ಬೂದಿ ಮಾಡಿದ್ದನ್ನೂ ವರ್ಣಿಸಿ ಹೇಳಿದ್ದಾರೆ. ನಿಜಾಮ ಸರಕಾರದ ಬಗ್ಗೆಯೂ ಕಾಶೀಂ ರಜವಿಯ ಬಗ್ಗೆಯೂ ತಮಗೆ ಗೌರವವಿದ್ದುದರಿಂದ ಅತ್ಯಾಚಾರಗಳ ಬಗ್ಗೆ ಬಂದ ದೂರುಗಳು ಸುಳ್ಳೆಂದುತಾವು ತಿಳಿದಿದ್ದರೆಂದೂ ಕಣ್ಣಾರೆ ಕಂಡಾಗ ನಿಜ ಸಂಗತಿಯಿಂದ ತಮ್ಮ ಎದೆಯೊಡೆದು ಹೋಯಿತೆಂದೂ ಎಷ್ಟೋ ದಿನ ರಾತ್ರಿ ನಿದ್ರೆ ಸಹ ಬಾರದಾಯಿತೆಂದೂ ಗೋಳಿಟ್ಟಿದ್ದಾರೆ. ಸರ್ವಾಧಿಕಾರಿತ್ವವನ್ನು ತಡೆಯಲು ಅಸಮರ್ಥವಾದ ಸರಕಾರದಲ್ಲಿದ್ದು ಪ್ರಯೋಜನವಿಲ್ಲವೆಂದು ರಾಜೀನಾಮೆ ಕೊಟ್ಟಿರುವೆನೆಂದು ಅವರು ಸ್ಪಷ್ಟೋಕ್ತಿಗಳನ್ನು ನುಡಿದಿದ್ದಾರೆ. ಅವರು ಈ ಬಗ್ಗೆ ಮುಖ್ಯ ಮಂತ್ರಿಗಳಾದ ಮೀರಲಾಯಕ ಅಲ್ಲಿ ಅವರಿಗೆ ಬರೆದ ಪತ್ರಕ್ಕೆ ಒಂದು ಪರಿಶಿಷ್ಟವನ್ನು ಜೋಡಿಸಿ ಅದರಲ್ಲಿ ತಾವು ಕಂಡ ೫೦ ಕ್ಕೆ ಮೇಲ್ಪಟ್ಟು ರಜಾಕಾರರ ಅತ್ಯಾಚಾರದ ಘಟನೆಗಳನ್ನು ಉದಾಹರಿಸಿದ್ದಾರೆ.

ಗೋವೆಯ ಮೇಲೆ ನಿಜಾಮರ ಕಣ್ಣಿತ್ತು!

ನಿಜಾಮರು ಗೋವೆಯ ಬಂದರದ ಮೇಲೆ ಕಣ್ಣಿಟ್ಟದ್ದರೆಂಬ ಸಂಗತಿಯು ಹೈದ್ರಾಬಾದದಲ್ಲಿ ಪ್ರಸಿದ್ಧವಾದ ಒಂದು ಕಾಗದದಿಂದ ಖಂಡಿತವಾಗಿದೆ. ಹಿಂದುಸ್ತಾನ ಹೈದ್ರಾಬಾದದ ಸಂಬಂಧವು ಹೇಗಿರಬೇಕೆಂಬ ಬಗ್ಗೆ ನಿಜಾಮ ಸರಕಾರವು ಹೊರಡಿಸಿದ ಶ್ವೇತಪತ್ರದಲ್ಲಿ ಗೋವೆಯ ಬಂದರವನ್ನು ಉಪಯೋಗಿಸಲು ಕೊಡಬೇಕೆಂದು ಉಲ್ಲೇಖಿಸಲಾಗಿದೆ. ನಿಜಾಮರು ೧೯೪೭ ಸಪ್ಟೆಂಬರ ೧೮ ಕ್ಕೆ ಈ ಬಗ್ಗೆ ಆಗಿನ ಗವರ್ನರ ಜನರಲ್ಲರಾದ ಲಾರ್ಡ ಮೌಂಟಬ್ಯಾಟನ್ನರಿಗೆ ಒಂದು ಪತ್ರ ಬರೆದಿದ್ದರು. ಆದರೆ ಹಿಂದುಸ್ತಾನದ ಸಂಸ್ಥಾನ ಖಾತೆಯು ಈ ಕರಾರುಗಳನ್ನು ಒಪ್ಪಲಿಲ್ಲ.

ಸರ್ ಮಿರ್ಜಾರು ನಿಜಾಮರಿಗಾಗಿ ದಿಲ್ಲಿಗೆ ಹೊರಟರೆ ?

ನಿಜಾಮರು ತಮ್ಮ ಹಿಂದಿನ ಮುಖ್ಯ ಮಂತ್ರಿಗಳಾದ ಸರ್ ಮಿರ್ಜಾ ಇಸ್ಮಾಯಿಲರೊಂದಿಗೆ ಪತ್ರವ್ಯವಹಾರ ನಡೆಸಿರುವರೆಂದು ತಿಳಿಯುತ್ತದೆ. ಹೈದರಾಬಾದದ ವಿಷಯದಲ್ಲಿಯೇ ಸರ್ ಮಿರ್ಜಾರು ತಾ. ೨೭ ಕ್ಕೆ ದಿಲ್ಲಿಗೆ ಪ್ರಯಾಣ ಬೆಳೆಸಿದರೆಂದೂ ಊಹಿಸಲಾಗಿ.

---

೫ ತಿಂಗಳಿಂದಲೂ ಸಂಬಳ ಬಾಕಿಯುದ್ದುದರಿಂದ ಜುಲೈ ೧೨ ರಿಂದಲೂ ಸಂಪು ಹೂಡಿದ್ದ ಹಿರಿಯೂರಿನ ಲಕ್ಷ್ಮೇಶ್ವರ ತಾಲೂಕಿನ ಪ್ರಾಥಮಿಕ ಶಿಕ್ಷಕರಿಗೆ ಕೂಡಲೆ ಬಾಕಿ ಪಗಾರವನ್ನು ಕೊಟ್ಟುಬಿಡಬೇಕೆಂದು ಮಿರಜ ಜಿಲ್ಹಾಬೋರ್ಡ ನಿರ್ಧರಿಸಿತು.

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತು

ಶ್ರೀ ದೇವದಾಸ ಗಾಂಧಿಯವರ ಭಾಷಣ

ಮುಂಬಯಿಯಲ್ಲಿ ತಾ. ೨೪ ಕ್ಕೆ ಅ. ಭಾ. ಪತ್ರಿಕಾ ಸಂಪಾದಕರ ೭ನೆಯ ಪರಿಷತ್ತು ಶ್ರೀ ದೇವದಾಸ ಗಾಂಧಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಹೋದ ವರ್ಷ ಅಧ್ಯಕ್ಷರಾಗಿದ್ದ ಇವರೇ ಈ ವರ್ಷವೂ ಮತ್ತೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಇವರು ಹಿಂದುಸ್ತಾನ ಟಾಯಿಮ್ಸ ಪತ್ರಿಕೆಯ ಸಂಪಾದಕರು. ರಾಯಟರ ಜೋಡಿಗನವರ ಸಂಗಡ ಸಂಧಾನ ನಡೆಸಲು ಹಿಂದೀ ಶಿಷ್ಟಮಂಡಳದ ಧುರೀಣರಾಗಿ ಇವರು ಲಂಡನಕ್ಕೆ ಹೋಗಿ ಯುರೋಪದಲ್ಲಿ ಸಂಚರಿಸಿ ಬಂದರು.

ಈ ಸಂಧಾನದ ಬಗ್ಗೆ ಮಾತನಾಡುತ್ತ ಹಿಂದುಸ್ತಾನದ ಆಂತರಿಕ ಸುದ್ದಿ ಸಂಸ್ಥೆಯ ಒಡೆತನವು ಹಿಂದುಸ್ತಾನಕ್ಕೆ ಬರಲಿದೆ ಎಂದು ಹೇಳಿದರು.

ಅಧ್ಯಕ್ಷರ ಭಾಷಣ ಸಾರ

ಈಗ ನಾವು ಸ್ವಾತಂತ್ರ್ಯಾನಂತರ ಕೂಡಿದ್ದೇವೆ. ದೇಶದ ಸ್ವಾತಂತ್ರ್ಯಕ್ಕಾಗಿ ದೇವರಿಗೆ ಕೃತಜ್ಞರಾಗಿರುವಷ್ಟರಲ್ಲಿಯೇ ನಾವು ಬಾಪೂ ಅವರನ್ನು ಕಳೆದುಕೊಂಡೆವು. ನಮ್ಮ ಸ್ವಾತಂತ್ರ್ಯವನ್ನು ಭದ್ರಗೊಳಿಸಲು ಅವರ ಅವಶ್ಯಕತೆ ಇನ್ನೂ ಇತ್ತು.

ರಾಷ್ಟ್ರದ ಸ್ವಾತಂತ್ರ್ಯ ಸಮರದಲ್ಲಿ ಪತ್ರಿಕೆಗಳು ತೋರಿದ ತ್ಯಾಗ ಮಾಡಿದ ಸೇವೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದಾಗಿದೆ. ರಾಷ್ಟ್ರ ವಿಭಜನೆಯು ಬೆಲೆಕೊಟ್ಟು ಮತ್ತು ವಿಭಜನೆಯ ಬೆನ್ನ ಹಿಂದೆ ಬಂದ ಅಸಂಖ್ಯಾತ ನರಬಲಿಯ ಮೂಲಕ ನಾವು ಸ್ವಾತಂತ್ರ್ಯ ಪಡೆದೆವು. ಈ ಸಂದರ್ಭದಲ್ಲಿ ಜಾತೀಯ ಜ್ವಾಲೆಯನ್ನು ತಡೆಯಲು ಪತ್ರಿಕೆಗಳು ಶಕ್ತಿ ಮೀರಿ ಪ್ರಯತ್ನಿಸಿದವು. ಇದಕ್ಕೆ ಅಪವಾದವಾಗಿದ್ದರೂ ಅಂತಹ ಪತ್ರಿಕೆಗಳ ಸಂಖ್ಯೆ ಬಹಳ ವಿರಳ. ಅಸತ್ಯವಾದ ಘಟನೆಗಳನ್ನು ವಿವರಿಸಿ ಪತ್ರಿಕೆಗಳು ಜನತೆಯನ್ನು ಉದ್ರೇಕಗೊಳಿಸಬಾರದು. ಈ ಬಗ್ಗೆ ನಮ್ಮ ಮೇಲೆ ನಾವೇ ನಿರ್ಬಂಧ ಹಾಕಿಕೊಳ್ಳಬೇಕು ಮತ್ತು ಸರಕಾರದೊಡನೆ ಮಾಡಿಕೊಂಡ ೭ ಕಲಮುಗಳ ಒಪ್ಪಂದವನ್ನು ಈಗಲೂ ನಾವು ಅಕ್ಷರಶಃ ಪಾಲಿಸಬೇಕು:

ಈಗ ಓದುಗರ ಸಂಖ್ಯೆ ಬೆಳೆದಿದ್ದು ಹೊಸ ಪತ್ರಿಕೆಗಳೂ ಹುಟ್ಟುತ್ತಿವೆ. ಈ ಬಗ್ಗೆ ನುರಿತ ಕೆಲಸಗಾರರ ಅವಶ್ಯಕತೆ ಬಿದ್ದಾಗಲೆಲ್ಲ ಆದಷ್ಟು ನಿರಾಶ್ರಿತರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕು.

ಕಾಗದದ ಅಭಾವದಿಂದ ೮ ಪುಟಕ್ಕಿಂತ ಹೆಚ್ಚು ಪುಟ ಕೊಡುವದು ನಮಗೆ ಅಗುತ್ತಿಲ್ಲ. ಅರ್ಧಮರ್ಧ ಸುದ್ದಿ ಪ್ರಕಟಿಸುವದು ಗಂಡಾಂತರದ್ದು. ಬಂದ ಸುದ್ದಿಗಳಲ್ಲಿ ಬಹುಭಾಗವನ್ನು ಬಿಟ್ಟುಕೊಡಲಾಗುತ್ತದೆ. ಅಮೇರಿಕೆಯಲ್ಲಿ ದಿನಾಲು ೩೨ ರಿಂದ ೬೪ ಪುಟಗಳ ಪತ್ರಿಕೆ ಹೊರಡುತ್ತಿವೆ. ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಕಾಗದದ ಹಂಚಿಕೆ ಸರಿಯಾಗಿ ಆಗಬೇಕೆಂದು ಪ್ರಯತ್ನಿಸಬೇಕಾಗಿದೆಯಲ್ಲದೆ ನಮ್ಮ ದೇಶದಲ್ಲಿಯೇ ಕಾಗದದ ಉತ್ಪಾದನವಾಗುವಂತೆ ಮಾಡಬೇಕು. ಈ ಬಗ್ಗೆ ಪ್ರಯತ್ನ ನಡೆದಿದ್ದು ಸಂತೋಷದ ಸಂಗತಿ

ಪತ್ರಿಕಾ ಸ್ವಾತಂತ್ರವನ್ನು ಹತ್ತಿಕ್ಕುವ ಕಾನೂನುಗಳೆಲ್ಲ ಇಲ್ಲದಾಗುವದು ಅವಶ್ಯವಿದೆ. ಪ್ರಜಾಪ್ರಭುತ್ವದ ತತ್ತ್ವಕ್ಕನುಗುಣ ಪತ್ರಿಕಾ ಕಾನೂನು ಮಾಡಲು ಸರದಾರ ವಲ್ಲಭಭಾಯಿಯವರು ಒಂದು ಸಮಿತಿ ನೇಮಿಸಿದರು. ಈ ಸಮಿತಿಯ ವರದಿ ಈಗ ಸಿದ್ಧವಾಗಿದ್ದು ಸರಕಾರವು ಅದನ್ನು ಬೇಗ ಸ್ವೀಕರಿಸುವದೆಂದು ಆಶಿಸುತ್ತೇನೆ ಎಂದು ಮೊದಲಾಗಿ ಹೇಳಿದರು.

ಮರುದಿನ ಸಮಾರೋಪ ಭಾಷಣ ಮಾಡುತ್ತ ಅಧ್ಯಕ್ಷರು ಹೀಗೆ ಹೇಳಿದರು:—ಕೆಲಪ್ರಾಂತದಲ್ಲಿದ್ದ ಸಾರ್ವಜನಿಕ ಸುರಕ್ಷಿತತೆಯ ಕಾನೂನನ್ನು ಇನ್ನೂ ಇರಗೊಡುವದು ನ್ಯಾಯವಲ್ಲ. ಇದರಿಂದ ಪತ್ರಿಕೆಗಳ ಹಕ್ಕುಬಾಧ್ಯತೆಗೆ ಅಘಾತವುಂಟು. ಇದನ್ನು ಸರಕಾರ ಪುನಃ ಪರಿಶೀಲಿಸಬೇಕು ಎಂದು ಮುಂತಾಗಿ ಹೇಳಿದರು. ಈ ಬಗ್ಗೆ ಮತ್ತು ಕೆಲ ಪತ್ರಿಕೆಗಳು ಕೀಳು ಪ್ರಚಾರ ಮಾಡುವದನ್ನು ಖಂಡಿಸುವ ಇನ್ನೂ ಕೆಲವು ಗೊತ್ತುವಳಿಯಾಗಿ ಪರಿಷತ್ತು ಮುಕ್ತಾಯವಾಯಿತು.

ಶಿವಮೊಗ್ಗೆಯ ಜೇಲಿನಲ್ಲಿರಿಸಲ್ಪಟ್ಟಿರುವ ಕಮ್ಯುನಿಸ್ಟರು ತಮಗೆ ಹವೆ ತಡೆಯುವದಿಲ್ಲೆಂದು ಅನ್ನತ್ಯಾಗ ಪ್ರಾರಂಭಿಸಿದ್ದಾರೆ.

ಚಿಕ್ಕಕತೆ

ಬಿ. ವ್ಹಿ. ಪಪ್ಪು ಪುಣೆ

★

ಮೃಗಜಲ

"ಖಡ್ ಖಡ್... ಖಡ್ ಖಡ್... ಎಂದು ಉಗಿಬಂಡಿಯು ಒಂದು ಹಳಿಯನ್ನು ಬದಲಾಯಿಸಿ ಮತ್ತೊಂದು ಹಳಿಯ ಮೇಲೆ ಹೋಗುವಾಗ್ಗೆ ಆಗುವ ಸಪ್ಪಳವು ಮುಂದಿನ ಸ್ಟೇಶನ್ನು ಬಂದಿತೆಂದು ಸೂಚಿಸಿತು. ನಾರಾಯಣ ಕಿಡಿಕಿಯಲ್ಲಿ ಮೋರೆಹಾಕಿ ನೋಡಿದನು. ಉಗಿಬಂಡಿಯು ಸ್ಟೇಶನ್ನಿನ ಆವಾರವನ್ನು ಒಳನುಗ್ಗಹತ್ತಿತ್ತು.

"ರಾಮೂ, ನೀನು ಆ ಮೂಲೆಯಲ್ಲಿಯ ಕಿಡಿಕಿಯನ್ನು ನೋಡಿಕೊ. ಏ, ಶ್ಯಾಮು, ಗೋವಿಂದ, ಕೃಷ್ಣ ನೀವೆಲ್ಲರೂ ಈ ನಡುವಿನ ಕಿಡಿಕಿಗಳನ್ನು ಸಂಭಾಳಿಸಿರಿ. ನಾನು ಈ ಬಾಗಿಲವನ್ನು ನೋಡಿಕೊಳ್ಳುತ್ತೇನೆ. ಇದು ದೊಡ್ಡ ಜಂಕ್ಶನ್‌ದ ಸ್ಟೇಶನ್ನಿದ್ದುದರಿಂದ ಜನದಟ್ಟಣೆಯು ವಿಶೇಷವಾಗಿರಬಹುದು. ಆದ್ದರಿಂದ ಈ ಸ್ಟೇಶನ್ನಿನಲ್ಲಿ ಯಾರೂ ನಮ್ಮ ಡಬ್ಬಿಯಲ್ಲಿ ಏರದಂತೆ ಒಳ್ಳೇ ದಕ್ಷತೆಯಿಂದ ನೋಡಿಕೊಳ್ಳಬೇಕು" ಎಂದು ನಾರಾಯಣನು ಎಲ್ಲರನ್ನುದ್ದೇಶಿಸಿ ಗರ್ಜಿಸಿದನು.

"ನೀನು ಅದರ ಕಾಳಜಿಯನ್ನು ಬಿಡು. ನಾವೆಲ್ಲರೂ ಪೂರ್ಣ ತಯಾರಿಯಲ್ಲಿ ಇರುವೆವು" ಎಂದು ಗೋವಿಂದನಂದನು.

ಸ್ಟೇಶನ್ನಿನ ಮೇಲೆ ಅದೆಂಥ ಗದ್ದಲ. ಕಿಡಿಕಿಯೊಳಗಿಂದ ಹೊರಗೆ ನೋಡಿದರೆ ಜನಸಮೂಹದ ಮಹಾಸಾಗರವನ್ನು ಕಂಡಂತಾಗುತ್ತಿತ್ತು. ಎಲ್ಲರೂ ನಮ್ಮ ಕೈಯಲ್ಲಿ ಹಿಡಿಯಲಿಕ್ಕೆ ಶಕ್ಯವಿದ್ದಷ್ಟು ಸಾಮಾನುಗಳನ್ನು ಹಿಡಿದುಕೊಂಡು ಒಂದು ಸೇನೆಯು ಎರಡನೆಯ ಸೇನೆಯ ಮೇಲೆ ಏರಿ ದಾಳಿ ಮಾಡಲು ಹೋಗುವವರ ಹಾಗೆ, ಗಾಡಿಯು ನಿಂತ ಕೂಡಲೆ ಒಳಗೆ ನುಗ್ಗಲು ಸಿದ್ಧರಾಗಿದ್ದರು. ಜನರ ಕೂಗಾಟ, ಪೋರ್ಟರರ ಓಡಾಟ, ಗಾಡಿಯ ಫಳಿಯ ಮೇಲೆ ಏರಿ "ರಾವಸಾಹೇಬ ಹಮಾಲ ಬೇಕೇನು" ಎಂದು ಹಮಾಲರು ಮಾಡುವ ಗಡಿಬಿಡಿ, ಮಿತ್ರರು ಮಿತ್ರರನ್ನು ಗುರುತಿಸಿ ಒದರುವದು, ಇವೆಲ್ಲ ಗದ್ದಲದಲ್ಲಿ "ಪಾನಪಟ್ಟಿ, ಬೀಡಿ, ಚಹಾ..." ಎಂದು ಒದರುವ ಕರ್ಕಶ ಧ್ವನಿ ಇವೆಲ್ಲವುಗಳಿಂದ ಆದ ಒಂದು ಸಮ್ಮಿಶ್ರವಾದ ಧ್ವನಿಯಿಂದ ಕಿವಿಗಳು ಗಡಚಿಕ್ಕಿದವು.

"ನಾನು ಈ ಬಾಗಿಲದ ಹತ್ತಿರ ನಿಂತಿರುವ ತನಕ ಒಬ್ಬರನ್ನ ಒಳಗೆ ಬಿಡುವದಿಲ್ಲ" ಎಂದು ನಾರಾಯಣನು ಆತ್ಮವಿಶ್ವಾಸದಿಂದ ನುಡಿದನು.

ಈ ಐವರು ಕಾಲೇಜದಲ್ಲಿ ಓದು ಕಲಿಯುತ್ತಿದ್ದ ತರುಣರು. ಕಾಲೇಜಕ್ಕೆ ಸೂಟಿ ಆದುದರಿಂದ ಅವರು ಒಂದು "Pleasure trip" (ಆನಂದ ವಿಹಾರ) ಮಾಡಲಿಕ್ಕೆ ನಡೆದಿದ್ದರು. ಉಗಿಬಂಡಿಯಲ್ಲಿ ಕುಳಿತಾಗಿನಿಂದ ಅವರು ತಮ್ಮ ವಿಚಾರಕ್ಕೆ ಆಚಾರಕ್ಕೆ, ಮನಸ್ಸಿಗೆ, ಮಾತಿಗೆ, ಮತ್ತು ತಿನಸಿಗೆ ಯಾವ ತರದ ನಿರ್ಬಂಧವನ್ನೂ ಇಟ್ಟುಕೊಂಡಿದ್ದಿಲ್ಲ. ಒಂದು ಇಡೀ ಮೂರನೆಯ ತರಗತಿಯ ಡಬ್ಬಿಯನ್ನು ಅವರು ತಮ್ಮ ಸಲುವಾಗಿ ಕಾಯ್ದುಕೊಂಡಿದ್ದರು. ಇದುವರೆಗೆ ಅವರು ಇತರ ಪ್ರವಾಸಿಕರನ್ನು ಯಾವ ಸ್ಟೇಶನ್ನಿನ ಮೇಲೂ ತಮ್ಮ ಡಬ್ಬಿಯಲ್ಲಿ ಬರಗೊಟ್ಟಿದ್ದಿಲ್ಲ. ಪ್ರತಿಯೊಂದು ಸ್ಟೇಶನ್ನಿನ ಮೇಲೆ ಈ ಐವರೂ ಕಿಡಿಕಿಯಲ್ಲಿ ಮೋರೆಹಾಕಿಕೊಂಡು ಕುಳಿತುಬಿಡುತ್ತಿದ್ದರು, ಮತ್ತು "ಒಳಗೆ ಜನರ ಗದ್ದಲ ಬಹಳ ಇರುತ್ತದೆ. ನಾವು ಹೇಗಾದರೂ ಈ ಕಿಡಿಕಿ ಹತ್ತಿರ ಬಹು ಪ್ರಯಾಸದಿಂದ ಕುಳಿತಿರುತ್ತೇವೆ" ಎಂದು ತಮ್ಮ ಡಬ್ಬಿಯಲ್ಲಿ ಹತ್ತಲಿಕ್ಕೆ ಬಂದ ಜನರಿಗೆ ಸಾರಿ ಸಾರಿ ಹೇಳುತ್ತಿದ್ದರು. ಡಬ್ಬಿಯ ಒಳಗಿನ ದೃಶ್ಯವನ್ನು ಹೊರಗಿನ ಪ್ರಯಾಣಿಕರಿಗೆ ತೋರಗೊಡುತ್ತಿದ್ದಿಲ್ಲ. ಪ್ರತಿಯೊಂದು ಸ್ಟೇಶನ್ನಿನಲ್ಲಿ ಏನು ತಿನ್ನಲಿಕ್ಕೆ ಸಿಕ್ಕುತ್ತದೆ ಅದನ್ನು ಮನಸೋಕ್ತವಾಗಿ ತಿನ್ನುವದು, ಸೋಡಾ, ಲೇಮನ್, ಕಾಫಿ, ಚಹಾ ಇವೆಲ್ಲ ಪೇಯಗಳನ್ನು ಬಾರಿಬಾರಿಗೆ ಕುಡಿಯುವದು ಮತ್ತು ತಿನಸು ಇಲ್ಲದ ವೇಳೆಯಲ್ಲಿ ಯಾವಳಾದರೂ ಸಿನೆಮಾ ನಟಿಯ ಬಗ್ಗೆ ಅಥವಾ ಸ್ಟೇಶನ್ನಿನ ಮೇಲೆ ಕಂಡ ಯಾವಳಾದರೂ ತರುಣಿಯ ಬಗ್ಗೆ ಅಥವಾ ಕಾಲೇಜದಲ್ಲಿಯ ತಮ್ಮ ಕೂಡ ಕಲಿಯುತ್ತಿದ್ದ ಯಾವಳಾದರೂ ವಿದ್ಯಾರ್ಥಿನಿಯ ಬಗ್ಗೆ— ಅವರ ಸೌಂದರ್ಯ, ಉಡಿಗೆ ತೊಡಿಗೆ, ಅವರ ಹಾವಭಾವ ಇವುಗಳ ಬಗ್ಗೆ— ಹೊಟ್ಟೆತುಂಬ ಮಾತನಾಡುವದು ಅವರ ಕಾರ್ಯಕ್ರಮವಾಗಿತ್ತು. ಇದಲ್ಲದೇ ಡಬ್ಬಿಯಲ್ಲಿ ಚಹಾ, ತಿಂಡಿ ಮಾರಲಿಕ್ಕೆ ಬಂದ ಹುಡುಗನ ಕೂಡ ಅಥವಾ ಅವರ ಡಬ್ಬಿಯಲ್ಲಿ ಯಾವನಾದರೂಬ್ಬನು ಏರಲಿಕ್ಕೆ ಬಂದರೆ ಅವನ ಕೂಡ ಯಾವದಾವದರೊಂದು ಕಾರಣದಿಂದ ನ್ಯಾಯವನ್ನು ತೆಗೆದು ತಮಾಶೆ ಮಾಡುವದೂ ಅವರ ಕಾರ್ಯಕ್ರಮದಲ್ಲಿ ಒಂದಾಗಿತ್ತು.

ಗಾಡಿಯು ಸರಿಯಾಗಿ ಪ್ಲಾಟ್‌ಫಾರ್ಮಿನ ಮೇಲೆ ಬಂದು ನಿಂತಿತು. ಜನರು ತಮ್ಮ ಗಂಟು ಗಡಡಿಗಳನ್ನು ತಕ್ಕೊಂಡು ಒಳನುಗ್ಗಹತ್ತಿದರು. ಮುದುಕರು, ತರುಣರು, ಹೆಂಗಸರು, ಹುಡುಗರು ಎಲ್ಲರೂ ಗಾಡಿಯನ್ನು ಏರಹತ್ತಿದರು. ಈ ಐವರ ಡಬ್ಬಿಯ ಹತ್ತರ ಮಾತ್ರ ಜನರು ಬಂದ ಕೂಡಲೇ ಇವರ ವೇಷಭೂಷಣ ಇವರು ಕಿಡಿಕಿಯಲ್ಲಿ ಕುಳಿತಿರುವರೀತಿ ಇವೆಲ್ಲವುಗಳನ್ನು ನೋಡಿ ವಿಶೇಷ ಗದ್ದಲ ಏರಲಿಕ್ಕೆ ಸಾಕು ಅದ್ದರಿಂದಲೇ ಇವರು ಇಷ್ಟು ಹತ್ತಿಕ್ಕಿ ಕಿಡಿಕಿಯಲ್ಲಿ ಕುಳಿತಿರುತ್ತಾರೆ ಎಂದು ಮನಸ್ಸಿಗೆ ಸಮಾಧಾನ ಹಚ್ಚಿಕೊಂಡವರಂತೆ ಮುಖ ಚರ್ಯೆ ಮಾಡಿಕೊಂಡು ಮುಂದೆ ಸಾಗುತ್ತಿದ್ದರು. ಅಂತೂ ಇಂತೂ ಜನರ ಮೊದಲಿನ ಮಹಾಪೂರದಿಂದ ಅವರು ಕುಳಿತ ಡಬ್ಬಿಯು ಉಳಕೊಂಡಿತು. ಕೆಲ ನಿಮಿಷದ ಮೇಲೆ ಒಬ್ಬ ಗಟ್ಟಿಗನು ಅವರ ಡಬ್ಬಿಯನ್ನು ಏರಲಿಕ್ಕೆ ಬಂದನು. ನಾರಾಯಣನು "ಜಾಗೆ ಇಲ್ಲ" ಎಂದು ಎಷ್ಟು ಹೇಳಿದರೂ ಕೇಳದಾದನು. ನಾರಾಯಣನಿಗೂ ಅವನಿಗೂ ಕೈಗೆ ಕೈ ಹತ್ತಿತು. ಕಡೆಗೆ ನಾರಾಯಣನ ಮುಂದೆ ಅವನದೇನೂ ಸಾಗದಾಯಿತು. ಅವನು ಸಿಟ್ಟಿನಿಂದ "ನಾನು ನೋಡಿಕೊಳ್ಳುತ್ತೇನೆ: ಸ್ಟೇಶನ್ ಮಾಸ್ತರರಿಗೆ ಹೇಳಿ ನಿನಗೆ ತೋರಿಸುತ್ತೇನೆ" ಎಂದು ಗುರುಗುಟ್ಟುತ್ತಾ ಮುಂದೆ ಸಾಗಿದನು.

ಗಾಡಿಯು ಬಂದು ನಿಂತು ೧೦ ನಿಮಿಷಗಳಾಗಿದ್ದವು. ಪ್ಲಾಟ್‌ಫಾರ್ಮಿನ ಮೇಲಿನ ಗದ್ದಲವು ಸ್ವಲ್ಪ ಕಡಿಮೆ ಆಗಿತ್ತು: ಬಹುಶಃ ಎಲ್ಲ ಡಬ್ಬಿಗಳು ಕಿಕ್ಕಿರಿದು ತುಂಬಿದ್ದವು. ಅಷ್ಟರಲ್ಲಿ ಒಬ್ಬ ಮುದುಕಿಯು ಟೊಂಕದಲ್ಲಿ ಒಂದು ಟ್ರಂಕನ್ನಿಟ್ಟುಕೊಂಡು ಒಬ್ಬ ಯುವತಿಯನ್ನು ಸಂಗಡ ಕರೆದುಕೊಂಡು ಗಾಡಿಯಲ್ಲಿ ಜಾಗೆಯನ್ನು ಹುಡುಕುತ್ತ ಬರುವದನ್ನು ನಾರಾಯಣನು ಕಂಡನು. ಆ ತರುಣಿಯು ಒಂದು ಸಣ್ಣ ಹಾಸಿಗೆ ಸುರಳಿಯನ್ನು ಮತ್ತು ಒಂದು ಗಂಟನ್ನು ಹಿಡಿದುಕೊಂಡು ಪ್ರಯಾಸದಿಂದ ಮುದಿಕೆಯನ್ನು ಹಿಂಬಾಲಿಸಿ ಬರುತ್ತಿದ್ದಳು: ಅವರ ಮುಖದ ಮೇಲಿಂದ ಎಷ್ಟು ಪ್ರಯತ್ನಬಟ್ಟರೂ ಎಲ್ಲೆಲ್ಲಿಯೂ ಜಾಗೆಯು ಸಿಗದಂತೆ ತೋರುತ್ತಿತ್ತು. ಆ ಮುದಿಕಿಯು ಎಷ್ಟು ಕುರೂಪಿಯಿದ್ದಳೋ ಅಷ್ಟೇ ಆ ತರುಣಿಯು ಸುಂದರಳಾಗಿದ್ದಳು. ಅವಳು ಸಾಧಾರಣ ೨೦–೨೨ ವಯಸ್ಸಿನವಳಿರಬಹುದು. ನಾರಾಯಣನ ದೃಷ್ಟಿಯು ತಟ್ಟನೆ ಆ ತರುಣಿಯ ಕಡೆಗೆ ಹೋಯಿತು. ಒಮ್ಮಿಂದೊಮ್ಮೆ ಸ್ತ್ರೀದಾಕ್ಷಿಣ್ಯವು ಅವನಲ್ಲಿ ಉಕ್ಕೇರಿ ಬಂದಿತು. ಅವನು ಕಿಡಿಕಿಯೊಳಗಿಂದ ಪ್ಲಾಟಫಾರ್ಮಿನ ಮೇಲೆ ಟಣ್ಣನೆ ಜಿಗಿದು ಆ ಮುದುಕಿಯ ಹತ್ತರ ಹೋಗಿ ನಿಂತನು. "ನಿಮಗೆ ಎಲ್ಲಿಯೂ ಜಾಗೆಯು ಸಿಗುವದಿಲ್ಲೆಂದು ತೋರುತ್ತದೆ. ನಮ್ಮ ಡಬ್ಬಿಯಲ್ಲಿ ಜಾಗೆ ಇರುತ್ತದೆ. ಬರುವಿರಾ?" ಎಂದು ಮುದಿಕಿಯನ್ನುದ್ದೇಶಿಸಿ ಆ ಯುವತಿಯ ಕಡೆಗೆ ನೋಡುತ್ತ ಅಂದನು. ನಾರಾಯಣನ ಈ ಚಟುವಟಿಕೆಯನ್ನು ನೋಡಿ ಅವನ ಇತರ ಮಿತ್ರರಿಗೆ ಅಸೂಯೆ ಆದುದು ಸ್ವಾಭಾವಿಕ. ಅವರು ಸಹ ಕಿಡಿಕಿಯೊಳಗಿಂದ ಜಿಗಿದು ನಾರಾಯಣನ ಹತ್ತರ ಹೋಗಿ ನಿಂತರು.

"ನಾವು ನಿಮಗೆ ಚನ್ನಾಗಿ ವ್ಯವಸ್ಥೆ ಮಾಡಿಕೊಡುತ್ತೇವೆ ಬರ್ರಿ, ಅಜ್ಜಿ" ಎಂದು ಕೃಷ್ಣನು ಮುಂದೆ ಬಂದನು.

"ನಾವು ಕುಳಿತ ಇಡೀ ಡಬ್ಬಿಯು ಖರೇ[illegible] ಇರುವದು. ನಿಮಗೆ ಯಾವ ತರದ ತ್ರಾಸವನ್ನು ಮಾಡಗೊಡುವದಿಲ್ಲ" ಗೋವಿಂದನು ತನ್ನ ಬೇರು ಧ್ವನಿಯನ್ನು ಕೂಡಿಸಿದನು.

"ನಮ್ಮ ಇಡೀ ಡಬ್ಬಿಯು ನಿಮ್ಮ ಸಲುವಾಗಿ ರಿಝರ್ವ ಮಾಡಿಸಿಟ್ಟ ಹಾಗೆ ಇದೆ" ಶ್ಯಾಮನು ಹೇಳಿದನು.

"ನಿಮಗೆ ನಾವು ಬೇಕಾದ ಸಹಾಯವನ್ನು ಮಾಡುತ್ತೇವೆ. ಕಾಳಜೀ ಮಾಡಬೇಡಿರಿ ಬರ್ರಿ" ಎಂದೆನ್ನುತ್ತ ರಾಮನು ಮುಂದಾಗಿ ಮುದಿಕೆಯ ಕೈಯಲ್ಲಿಯ ಗಂಟನ್ನು ತಕ್ಕೊಂಡನು. ಪರಿಸ್ಥಿತಿ ಅಗ್ರಹಕ್ಕೆ ಆ ಮುದಿಗೆಗಾಗಲೀ ಹುಡುಗೆಗಾಗಲೀ ಸಮ್ಮತಿಯನ್ನು ಕೊಡಲಿಕ್ಕೆ ಕೂಡ ಆಸ್ಪದ ಉಳಿಯಲಿಲ್ಲ. ಮುದಿಕೆಯೂ ತರುಣಿಯೂ ಏನೂ ಮಾತನ್ನಾಡದೇ ಇವರನ್ನು ಹಿಂಬಾಲಿಸಿದರು.

ತಮ್ಮ ಡಬ್ಬಿಯಲ್ಲಿ ಬಂದ ಕೂಡಲೇ ನಾರಾಯಣನು ತನ್ನ ಹಾಸಿಗೆಯನ್ನು ಉಚ್ಚಿ ಮುದಿಕಿಗೆ ಆರಾಮಾಗಿ ಕುಳಿತುಕೊಳ್ಳಲು ಹೇಳಿದನು. ಮುದಿಕಿಯ ಮೇಲೆ ಮನುಚಿಯನ್ನು ಮಾಡಿದಷ್ಟು ಆ ತರುಣಿಯು ತಾನೆ ಪ್ರಸನ್ನಳಾಗುವಳೆಂದು ಅವರೆಲ್ಲರಿಗೆ ದೃಢ ವಿಶ್ವಾಸ.

ಆ ತರುಣಿಯು ಅತಿಶಯ ಸಾದಾ ಉಡಿಗೆ ತೊಡಿಗೆ ಮಾಡಿದ್ದರೂ ಕೂಡ ಸುಂದರಳಾಗಿದ್ದಳು. ಮೋರೆಯ ಮೇಲೆ ಮುಗುಳು ನಗೆ ಮಿಂಚಿ ಹಾಕುತ್ತಿತ್ತು. ಬಲಗೈ ತರ್ಜನಿಯಲ್ಲಿ ಒಂದು ಹರಳಿನ ಉಂಗುರು, ಹೆರಳಿನಲ್ಲಿ ಒಂದು ಗುಲಾಬೀ ಹೂ ಕೈಯಲ್ಲಿ ಎರಡು ಭಂಗಾರದ ಬಳೆಗಳು. ಅವಳ ವೇಷ ಭೂಷಣ ಇಷ್ಟು ಸಾದಾ ಇದ್ದರೂ ಅವಳ ಸೌಂದರ್ಯವು ಮಾತ್ರ ಎದ್ದು ಕಾಣುತ್ತಿತ್ತು. ಅವಳ ಕಣ್ಣುಗಳು ನೇರಲಹಣ್ಣಿನಂತಿದ್ದು ಅವುಗಳಲ್ಲಿ ಅಸಾಮಾನ್ಯ ತೇಜವಿತ್ತು.

"ಜಗತ್ತಿನಲ್ಲಿ ಇಷ್ಟು ಸ್ತ್ರೀದಾಕ್ಷಿಣ್ಯವು ಮತ್ತು ಪರೋಪಕಾರ ತುಂಬಿರುವದೆಂಬ ನಂಬಿಗೆಯು ಸಹ ಒಮ್ಮೊಮ್ಮೆ ಹುಟ್ಟುವದಿಲ್ಲ" ಎಂದು ಆ ತರುಣಿಯು ಕಂಠದಿಂದ ಮಂಜುಳ ಶಬ್ದಗಳು ಹೊರಟವು. ಆ ಶಬ್ದಗಳಿಂದ ಆ ಐವರಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ತಮ್ಮ ಪ್ರವಾಸದಲ್ಲಿ ಒಬ್ಬ ಸುಂದರ ತರುಣಿಯ ಸಹವಾಸ ಲಭಿಸಿದ್ದಕ್ಕೆ ಅವರೆಲ್ಲರೂ ಹರ್ಷಭರಿತರಾದದ್ದು ಸ್ವಾಭಾವಿಕವಾಗಿತ್ತು.

"ಜಯಂತಿಯನ್ನು ತಕ್ಕೊಳ್ಳಿರಿ ಬೇಕಾದರೆ ಓದಲಿಕ್ಕೆ" ಎಂದು ರಾಮನು ಜಯಂತಿಯ ಹೊಸ ಸಂಚಿಕೆಯನ್ನು ಆ ತರುಣಿಯ ಮುಂದೆ ಒಗೆದನು. "Illustrated Weekly ಬೇಕೇನು" ಎಂದುಶಾಮನು "Illustrated-Weekly" ಯ ಒಂದು ಪ್ರತಿಯನ್ನು ಅವಳ ಹತ್ತರ ಇಟ್ಟನು. ಮುದಿಕೆಯು ಮಾತ್ರ ತನ್ನ ಜಾಗೆಯಲ್ಲಿ ಆರಾಮ ಕುಳಿತಳು. ಅವಳಿಗೆ ಇವೆಲ್ಲ ಸಂಗತಿಗಳಲ್ಲಿ ಅಸ್ವಾಭಾವಿಕತೆಯೇನೂ ತೋರಲಿಲ್ಲ.

"ಏ ಆಯಸ್ಕ್ರೀಮ... ಏಳು ಆಯಸ್ಕ್ರೀಮನ್ನು ತಕ್ಕೊಂಡು ಬಾ" ಎಂದು ಕೃಷ್ಣನು ತನ್ನ ಹುರುಪನ್ನು ವ್ಯಕ್ತ ಮಾಡುತ್ತ ಆಯಸ್ಕ್ರೀಮ ಮಾಡುವ ಹುಡುಗನಿಗೆ ಆಜ್ಞಾಪಿಸಿದನು.

"ತಕ್ಕೊಳ್ಳಿರಿ ಅಜ್ಜೀ ಆಯಸ್ಕ್ರೀಮನ್ನು... ನೀವು ತಕ್ಕೊಳ್ಳಿರಿ" ಎಂದು ಕೃಷ್ಣನು ಮುದುಕಿಗೆ ಮತ್ತೂ ಆ ತರುಣಿಗೆ ಹುಡುಗನು ತಂದ ಆಯಸ್ಕ್ರೀಮಿನ ಪ್ಲೇಟನ್ನು ಕೊಡುತ್ತ ಅಂದನು.

"ಊ... 'ಯುಸಲೆಸ್' ಇರುತ್ತದೆ" ಎಂದು ನಾರಾಯಣನು ಒಂದು ಚಮಚೆ ಆಯಸ್ಕ್ರೀಮನ್ನು ಬಾಯಲ್ಲಿ ತಕ್ಕೊಂಡಕೂಡಲೇ ಅಂದನು.

"ಇದರಲ್ಲಿ ಸಕ್ಕರಿಯ ಅಂಶ ಕೂಡ ಇದ್ದ ಹಾಗೆ ಕಾಣುವದಿಲ್ಲ" ರಾಮನಂದನು.

"ನಾವು ನಿಮಗೆ ಸುಮ್ಮನೇ ತ್ರಾಸಕೊಟ್ಟಂತಾಯಿತು" ಎಂದು ನಾರಾಯಣನು ತರುಣಿಯ ಕಡೆಗೆ ನೋಡಿ ಸ್ಮಿತ ಹಾಸ್ಯದಿಂದಂದನು.

"ತ್ರಾಸವೇತರದು? ಆಯಸ್ಕ್ರೀಮನ್ನು ನೀವು ನನಗೆ ತಿನ್ನಲಿಕ್ಕೆ ಕೊಟ್ಟರೆ ನನಗೆಯೇ ತ್ರಾಸವೇ? ಆಯಸ್ಕ್ರೀಮಾದರೂ ಕೆಟ್ಟಿಲ್ಲ" ಎಂದು ಹುಡಿಗೆಯು ಕಡೆಯ ಚಮಚೆಯನ್ನು ಬಾಯಲ್ಲಿ ಹಾಕಿಕೊಂಡು ಮಾತನಾಡಿದಳು.

ಅಷ್ಟರಲ್ಲಿ ಗಂಟೆಯಾಯಿತು. ಗಾರ್ಡನ್ "ವ್ಹಿಸಲ್" ಊದಿ ನಿಶಾನೆಯನ್ನು ಅಲ್ಲಾಡಿಸಿದನು.

"ಲಲಿತಾ, ಹೊತ್ತಾಯಿತು, ಇಳಿ. ಇನ್ನು ನನ್ನನ್ನು ಕಳಿಸಲಿಕ್ಕೆ ಬಂದ್ದ ಮರೆತಿದ್ದೆ ಏನು? ಹೋಗೆ" ಎಂದು ಮುದುಕಿ ಅಂದಳು.

ಲಲಿತೆಯು ಗ್ಯಾ[illegible]ಂದ ಕೆಳಗೆ ಇಳಿದಳು. ಆ ಹತ್ತು [illegible]ಗಳಲ್ಲಿಯ ದೃಷ್ಟಿಯು [illegible] ಮೇಲೆ [illegible]. ಗಾಡಿಯು ಸಾವಕಾಶವಾಗಿ ಸರಿಯುತ್ತಿ[illegible] ಲಲಿತೆಯು ದೇವೀದರ್ಶನ[illegible] ನಿಮಿಷಗಳಲ್ಲಿ ಮಾಯವಾಯಿತು.

ಆ ಮಿತ್ರ ಪಂಚಕರೊಬ್ಬರೊಬ್ಬರ [illegible] ಒಬ್ಬರೊಬ್ಬರಿಗೆ ತೋರಗೊಡುವ[illegible]. ಮುದುಕಿಯು ತನ್ನ [illegible] ಮಾತ್ರ ತೆರೆದಿಟ್ಟು ನಾರಾಯಣನು ಹಾಸಿಕೊಟ್ಟ ಹಾಸಿಗೆಯಲ್ಲಿ ಮಲಗಿ [illegible] ಗೊರಕೆ ಹೊಡೆದಳು. ಇಷ್ಟು [illegible] ಒಳ್ಳೆಯದು ಸಿದ್ಧರಿರುವಾಗ ಅವಳಿಗೇತರ [illegible]?

"ಅಸತ್ಯಂ ವದೇ"

(೩ ನೇ ಪುಟದಿಂದ)

[illegible]

ಸುಳ್ಳು ಹೇಳಲಿದ್ದರೆ ನಡೆದೀತೆ?

ಇನ್ನು ಹೆಣ್ಣನ್ನು ಗಂಡು ಅಗಲಿ ಗಂಡನ್ನು ಹೆಣ್ಣು ಅಗಲಿ ಒಲಿಸಿಕೊಳ್ಳಬೇಕಾದರೆ ಎಷ್ಟು ಸುಳ್ಳು ಹೇಳಬೇಕಾಗುವದೆಂಬುದನ್ನು ಯಾರಿಗೂ ಕಲಿಸಿಕೊಡಬೇಕಾಗಿಲ್ಲ. ಇದು ಒಬ್ಬರನ್ನೊಬ್ಬರು ಪ್ರೀತಿಸಿದರೆ ತಾನಾಗಿಯೇ ಉದ್ಭವಿಸುವದು. ಸಾವಿರ ಸುಳ್ಳುಗಳಿಂದಲ್ಲವೇ ಒಂದು ಗಂಡು ಹೆಣ್ಣು ಕೂಡುವದು. ಮುಂದೆ ಜೀವಮಾನವಿರುವವರೆಗೆ ಸುಳ್ಳಿನಿಂದಲೇ ಜೀವನ ಸಾಗಿಸಬೇಕು. ಒಟ್ಟಾರೆ ಜೀವಿಸಬೇಕಾದರೆ ಸುಳ್ಳೇ ಸುಖಕ್ಕೆ ಹಾದಿ. "ಜಗತ್ತು ಮಿಥ್ಯ" ಎಂದು ಹೇಳಿದ ಶಂಕರಾಚಾರ್ಯರ ಮಾತು ಇದನ್ನೇ ಸೂಚಿಸುತ್ತದೆ. "ಅಸತ್ಯೇನ ಪ್ರಥಿವೀ ತಿಷ್ಠತಿ" ಎನ್ನುವದೇ ಪರಂಪರಾಗತವಾದ ಮಾತು.

ಸುಳ್ಳು ಯಾರಿಗೂ ಪಕ್ಷಪಾತ ಮಾಡದು. ಸ್ವಲ್ಪವೂ ಕ್ರಮವಿಲ್ಲದೆ ಇದನ್ನು ಎಲ್ಲರೂ ಕಲಿಯಬಹುದು ಹುಡುಗರು, ಹಿರಿಯರು, ಮುದುಕರು, ಹೆಂಗಸರು, ಗಂಡಸರು ಶ್ರೀಮಂತರು, ದರಿದ್ರರು ಆ ಪಾರ್ಟಿಯವರು, ಈ ಪಾರ್ಟಿಯವರು ಯಾರು ಬೇಕಾದವರೂ ಕಲಿಯಬಹುದು. ಕಲಿಯಲೇಬೇಕು. ಸುಳ್ಳು ಮಾತಾಡಲು ಕಲಿತ ವಾಕ್ಯಗಳೇ ಮುಂದೆ ಬರುವವು. ಈಗಿನ ಯುಗದಲ್ಲಿಯಂತೂ ಯಾರು ಹೆಚ್ಚು ಸುಳ್ಳಾಡುವರೋ ಅವರೇ ಬಲಿಷ್ಠರು, ಅವರೇ ಅನುಕರಣೀಯರು, ಅವರೇ ದಂಷ್ಟ್ರರು ಆಗಿ ಕುಳಿತಿರುವರು. ಅಂದ ಮೇಲೆ ಸುಳ್ಳು ಮಾತನಾಡುವದು ಎಷ್ಟು ಅವಶ್ಯವಿದೆ ನೋಡಿರಿ.

ಹತ್ತು ಜನ ಸುಳ್ಳಾಡುವವರಲ್ಲಿ ಸಿಕ್ಕ ಒಬ್ಬ ಸತ್ಯವಂತನು ಸತ್ತೇ ಹೋಗುವನು. ಉಳಿದ [illegible] ಜನರಲ್ಲಿ ಹೆಚ್ಚು ಸುಳ್ಳಾಡುವವನು ಉಳಿದವರನ್ನು ಸ್ವಾಧೀನದಲ್ಲಿಟ್ಟುಕೊಳ್ಳುವನು. ಹೀಗಾಗಿದೆ ಈಗಿನ ಸ್ಥಿತಿ. ಆದ್ದರಿಂದ ದೇಶದ ತರುಣರೇ ತರುಣಿಯರೇ, ಅದನ್ನು ಸುಳ್ಳು ಮಾತನಾಡುವದನ್ನು ಕಲಿಯುವದು ನಿಮ್ಮ ಆದ್ಯ ಕರ್ತವ್ಯ. ನಮ್ಮ ದೇಶವನ್ನು [illegible] ಸ್ಥಿತಿಗೆ ತರುವದು ನಿಮ್ಮನ್ನೆ ಕೂಡಿದೆ. ಆದ್ದರಿಂದ ಹೆಚ್ಚು ಜನರನ್ನು ಈ ಕೆಲಸಕ್ಕೆ ಅಣಿ ಮಾಡಿರಿ. ಏಳಿರಿ, ಎಚ್ಚರಾಗಿರಿ! ನಿಮ್ಮ ಹೊಣೆಯನ್ನರಿತು ಕೆಲಸ ಮಾಡಿರಿ!

ವಾಚಕರೇ, ಇಲ್ಲಿಯ ವರೆಗೆ ನಾನು ಹೇಳಿದ್ದೆಲ್ಲ ಸುಳ್ಳು ಎಂದು ತಿಳಿಯುವವರು (ಯಾರೂ ಇಲ್ಲ ಆದರೂ) ಯಾರಾದರೂ ಇದ್ದರೆ ಅದು ನನ್ನ ತಪ್ಪಲ್ಲ. ಅವರ ಅನುಭವಕ್ಕೆ ಅವರ ಬುದ್ಧಿಗೆ ಹೇಳಿದ ಒಂದು ದೊಡ್ಡ ಸುಳ್ಳು ಮಾತು.

Reg. No. B. 3148

LICENCE No. 3
Licensed to Post without Prepayment

KARMAVEER 2-8-48

ನಾರದ ಭವಿಷ್ಯ

ಜ್ಯೋತಿಷಿ—ಕೃಷ್ಣಶಾಸ್ತ್ರಿ ಛಿತೆ, ಭವಿಷ್ಯಕಥನ ಆಫೀಸ ಖಡೇಬಜಾರ, ಬೆಳಗಾವಿ.

ಅಗಸ್ಟ ೨ ರಿಂದ ೮ ರ ವರೆಗೆ

ಮೇಷ

ಪ್ರಕೃತಿ ಉತ್ತಮ ಆದರೆ ಅದು ಮುಂದೆ ಕೆಡುವಂತೆ ಆಹಾರವಿಹಾರ. ಸ್ತ್ರೀಸುಖ ನೆಟ್ಟಗೆ. ಆದರೆ ಮಕ್ಕಳಿಗೆ ಕ್ಲೇಶ ಮತ್ತು ಅವರು ಮನಸ್ಸಿಗೆ ಕೆಡಕೆನಿಸುವಂತೆ ವರ್ತಿಸುವರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಒಳ್ಳೆಯದೆಂದೇ ಹೇಳಬಹುದು. ಸ್ಥಾವರದಲ್ಲಿ ಕೆಲವು ಅನುಕೂಲ ಮತ್ತು ಕೆಲವು ಪ್ರತಿಕೂಲ ಯೋಗ. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಸಾಧಾರಣವೇ. ಆದರೆ ಈ ಮಾನದಿಂದ ಲಾಭ ನೆಟ್ಟಗೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶ. ಶತ್ರುಗಳಿಗೆ ಕಾಟಾಚು ದೇವರೆ ಎನ್ನುವ ಪ್ರಸಂಗ. ಮಿತ್ರ ಸುಖವು ಮನಸ್ಸಿನಂತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಒಳ್ಳೇದು. ಅಶ್ವಿನಿಯ ೪ ನೇ ಚರಣದ ಮೊದಲಿನ ಮೂರು ಚರಣಗಳಿಗೆ ತೊಂದರೆ ಕಡಮೆ. ತಾ. ೨, ೩, ೬, ೭ ಇವು ಒಳ್ಳೆಯವು.

ವೃಷಭ

ಪ್ರಕೃತಿ ಸ್ತ್ರೀ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಮಕ್ಕಳು ಭಯಪ್ರದ ಸಾಹಸದ ಕಾರ್ಯ ಮಾಡುವದರಿಂದ ಮನಸ್ಸು ವ್ಯಗ್ರವಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಆದರೆ ವಿಶೇಷ ಸಂಬಂಧವಿಲ್ಲದವರಿಂದ ಕುಚೇಷ್ಟೆ ಮತ್ತು ದ್ವೇಷ. ಸ್ಥಾವರದಲ್ಲಿ ಒಂದಿಷ್ಟು ಹಾನಿ. ಮಿತ್ರಸುಖವು ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆಯಶ. ಆದರೆ ಶತ್ರುಗಳ ಬಲ ಹೆಚ್ಚುವದು. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ನೆಟ್ಟಗೆ. ಕೃತ್ತಿಕೆಯ ೪ ನೇ ರೋಹಿಣಿಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨, ೩, ೪, ೫ ಇವು ನೆಟ್ಟಗೆ.

ಮಿಥುನ

ಹೆಂಡತಿಗೆ ತುಸು ಕಷ್ಟ. ಇಬ್ಬರ ಮನಸ್ಸೂ ಚಿಂತೆಯಿಂದ ವ್ಯಗ್ರವಾಗುವದು. ...ರವಾಗುವ ಮತ್ತು ಬೇಡಾದ ಅತಿಥಿಗಳ ...ಲ, ನೌಕರ ಚಾಕರರು ಬೇಕೆಂದಾಗಲೇ ಅಡಚಣ ಉಂಟು ಮಾಡುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮ ಮತ್ತು ತೊಂದರೆಯಿಂದಲೇ ಅಗಲೊಲ್ಲದೇಕೆ ಲಾಭವೂ ಪ್ರತಿಷ್ಠೆಯೂ ಮನಸ್ಸಿನಂತೆ, ನೌಕರಿ ಮಾಡುವವರಿಗೆ ತ್ರಾಸ ಕಡಿಮೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಯಶವಿದ್ದರೂ ಅದರಿಂದಲೇ ಹೆಚ್ಚು ಲಾಭವಿದೆ. ಭೆಟ್ಟಿಗಿಂತ ಪ್ರವಾಸವೂ ಪತ್ರವ್ಯವಹಾರವೂ ನೆಟ್ಟಗೆ. ಮೃಗಾನಕ್ಷತ್ರದ ೪ ನೇ ಮತ್ತು ಆರ್ದ್ರಾದ ಮೊದಲಿನ ೩ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೨, ೩, ೪, ೫ ಇವು ಒಳ್ಳೆಯವು

ಕರ್ಕ

ಪ್ರಕೃತಿ ಅಷ್ಟಕ್ಕಷ್ಟೇ. ... ಹೆಂಡತಿಯದು ಹೆಚ್ಚು ಕೆಡುವ ... ಜಗಳವನ್ನು ... ಕಾರಣಗಳ ... ಪ್ರಯತ್ನ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ನೆಟ್ಟಗೆ ಆದರೆ ಲಾಭ ಬಹಳ ಕಡಿಮೆ. ಕೀರ್ತಿಗೆ ಕುಂದು ತಗಲ... ದೆಂದೂ ಕರ್ತವ್ಯವೇ ಎಂದೂ ಕೆಲ ವಿಷಯಕ್ಕಾಗಿ ಬಹಳ ಪೆಚ್ಚು ಮಾಡುವ ಪ್ರಸಂಗ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಕ್ಕೆ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸಗಳು ಸಾಮಾನ್ಯವಾಗಿ ನೆಟ್ಟಗೆ. ಪುಷ್ಯಾದ ೪ ನೇ ಮತ್ತು ಅಶ್ಲೇಷಾದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೪, ೫, ೮ ಇವು ನೆಟ್ಟಗೆ.

ಸಿಂಹ

ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಸ್ವಂತಕ್ಕೆ ತುಸು ಅಸ್ವಾಸ್ಥ್ಯ, ಅಲ್ಲದೆ ಇಬ್ಬರಲ್ಲಿಯೂ ಸಣ್ಣ ಪುಟ್ಟ ಸಂಗತಿಗಳ ಬಗ್ಗೆ ಮತಾಂತರ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ನೆಟ್ಟಗೆ. ಆದರೆ ಲಾಭ ಬಹಳ ಕಡಿಮೆ ಮತ್ತು ವೆಚ್ಚ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ, ಮಿತ್ರತ್ವದಲ್ಲಿ ಒಬ್ಬೊಬ್ಬರ ಬಗ್ಗೆ ತಪ್ಪು ಕಲ್ಪನೆಯಾಗಿ ಮಹತ್ವದ ಕೆಲಸಕ್ಕೆ ಆತಂಕವಾಗುವ ಪ್ರಸಂಗ, ಪ್ರವಾಸವೂ ಭೆಟ್ಟಿಯೂ ಪತ್ರವ್ಯವಹಾರಕ್ಕಿಂತ ನೆಟ್ಟಗೆ. ಮಘಾದ ೪ ನೆಯ ಮತ್ತು ಪೂರ್ವಾದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ, ೨, ೩, ೭, ೮ ಇವು ನೆಟ್ಟಗೆ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖವು ಉತ್ತಮ. ಆದರೆ ಮಕ್ಕಳಿಗೆ ಕಷ್ಟ ಮತ್ತು ಅವರ ವರ್ತನೆಯು ಮನಸ್ಸಿನ ವಿರುದ್ಧ. ಉಳಿದ ಸಂಗತಿಗಳಲ್ಲಿಯೂ ಪ್ರಾಪಂಚಿಕ ತೊಂದರೆ ಹೆಚ್ಚೆಂದೇ ಹೇಳಬೇಕು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚ ಬಹಳ. ಪುರುಷರಿಗಿಂತ ಸ್ತ್ರೀಯರಿಂದ ಹೆಚ್ಚು ಗೌರವ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಸಾಧಾರಣ. ತಾಳವಿಲ್ಲದ ಸ್ವಪ್ನಗಳು. ಪ್ರವಾಸಾದಿ ಕೆಲಸಗಳು ಮನಸ್ಸಿನಂತೆ. ಉತ್ತರಾದ ೪ನೇ ಮತ್ತು ಹಸ್ತಾದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨, ೩, ೪, ೫, ಇವು ಒಳ್ಳೆಯವು.

ತುಲಾ

ನಿಮ್ಮ ಪ್ರಕೃತಿ ನೆಟ್ಟಗೆ ಆದರೆ ಹೆಂಡತಿಯದು ಅಷ್ಟಕ್ಕಷ್ಟೇ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಆದರೆ ಒಂದು ನಿತ್ಯೋಪಯೋಗಿ ಪದಾರ್ಥವು ಹಾಳಾಗುವ ಇಲ್ಲವೆ ಕಳೆದು ಹೋಗುವ ಸಂಭವ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತ್ಯುತ್ತಮ. ವೆಚ್ಚವೂ ಕಡಿಮೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ನ್ಯಾಯ ಕೊಡುವವರ ಪಕ್ಷಪಾತದಿಂದ ಅಪಯಶದ ಸಂಭವ. ಮಿತ್ರ ಸುಖ ನೆಟ್ಟಗೆ, ಪ್ರವಾಸಾದಿ ಕಾರ್ಯಗಳೂ ಅನುಕೂಲ. ಚಿತ್ರಾದ ೪ ನೇ ಮತ್ತು ಸ್ವಾತಿಯ ಮೊದಲಿನ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೨, ೩, ೪, ೫ ಇವು ಒಳ್ಳೆಯವು.

ವೃಶ್ಚಿಕ

ಪ್ರಕೃತಿ ಉತ್ತಮ. ಸ್ತ್ರೀ ಮತ್ತು ಪ್ರಾಪಂಚಿಕ ಸುಖ ಸಾಮಾನ್ಯವೇ. ಮಕ್ಕಳಲ್ಲಿ ಒಬ್ಬರದು ವಿಶೇಷ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಹಾಗೂ ಲಾಭ ಬಹಳ ನೆಟ್ಟಗೆ. ಆದರೆ ಕೈಕೆಳಗಿನವರಿಂದ ಅಪಮಾನವಾಗುವ ಭೀತಿ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ ಹಾಗೂ ಪರಸ್ಪರರಲ್ಲಿ ರಾಜಿಯಾಗುವ ಯೋಗ. ಪ್ರವಾಸಕ್ಕಿಂತಲೂ ಪತ್ರವ್ಯವಹಾರವೂ ಭೆಟ್ಟಿಯೂ ಉತ್ತಮ. ಅನುರಾಧಾದ ೪ ನೇ ಮತ್ತು ಜ್ಯೇಷ್ಠಾದ ಮೊದಲಿನ ೩ ಚರಣಗಳಿಗೆ ಹೆಚ್ಚು ನೆಟ್ಟಗಿದೆ. ತಾ. ೪, ೫, ೭, ೮ ಇವು ಒಳ್ಳೆಯವು.

ಧನು

ತಿಮ್ಮ ಮತ್ತು ನಿಮ್ಮ ಹೆಂಡತಿಯ ಪ್ರಕೃತಿ ನೆಟ್ಟಗಿಲ್ಲದಿದ್ದರೂ ಪ್ರಾಪಂಚಿಕ ಸುಖ ಒಂದು ಉತ್ತಮವಾಗಿದೆ. ಸ್ಥಾವರದಲ್ಲಿ ಕೂಲ ಪಲ್ಲಟಿಸ್ಸಳವುಂಟಲ್ಲದೆ ಒಂದು ಅನುಗದಲ್ಲಿ ಪ್ರಗತಿ ಸ್ಥಿರ ಯೋಗವಿದೆ. ಉದ್ಯೋ... ಮತ್ತು ಲಾಭ ಎಲ್ಲವೂ ಒಳ್ಳೆ ಉತ್ತಮ. ವೆಚ್ಚ ಮಾತ್ರ ಹೆಚ್ಚು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿ. ಅವಶ್ಯಕ ಸಂಗತಿಗಳು ಅಯುಕ್ತ ಪ್ರಸಂಗದಲ್ಲಿ ಮರೆತು ಹೋಗುವದರಿಂದ ಬಹಳ ಗೊಂದಲ ವುಂಟಾಗುವದು. ಮಿತ್ರ ಸುಖ ನೆಟ್ಟಗೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ನೆಟ್ಟಗೆ. ಮೂಲಾದ ೪ ನೇ ಮತ್ತು ಪೂರ್ವಾಷಾಢದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨, ೩, ೬, ೭, ೮ ಇವು ಒಳ್ಳೆಯವು.

ಮಕರ

ಪ್ರಕೃತಿಗೆ ಬಹಳ ಕ್ಲೇಶ. ಸ್ತ್ರೀ ಸಾಮೀಪ್ಯವಿಲ್ಲ ಮತ್ತು ಇಬ್ಬರಲ್ಲಿಯೂ ಮೇಲಿಂದ ಮೇಲೆ ಮತಭೇದ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖವು ಅನಿಶ್ಚಿತವೇ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಪ್ರತಿಷ್ಠೆಗೆ ತುಸು ವ್ಯಾಘಾತ. ಮಿತ್ರಸುಖ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರಗಳು ಭೆಟ್ಟಿಗಿಂತ ನೆಟ್ಟಗೆ. ಉತ್ತರಾಷಾಢಾದ ೧ನೇ ಮತ್ತು ಶ್ರವಣಾದ ಮೊದಲಿನ ೩ಚರಣಗಳಿಗೆ ತೊಂದರೆ ಕಡಮೆ. ತಾ. ೪, ೫, ೮ ಇವುಗಳು ಒಳ್ಳೆಯವಾಗಿವೆ.

ಕುಂಭ

ನಿಮ್ಮ ಪ್ರಕೃತಿ ನೆಟ್ಟಗೆ ಆದರೆ ಹೆಂಡತಿಗೆ ಬಹಳ ಅನಾರೋಗ್ಯ. ಮಕ್ಕಳಲ್ಲಿ ಒಬ್ಬರದು ಬಹಳ ಉತ್ಕರ್ಷ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಹಿತಾವಹವಾಗಿದೆ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆಯೂ ಲಾಭವೂ ಕಡಮೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬಣಗಳಿಗೂ ಸಮಾನ ಹಾನಿ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ನೆಟ್ಟಗೆ. ಧನಿಷ್ಠಾದ ೪ನೇ ಮತ್ತು ಶತತಾರಕೆಯ ಮೊದಲಿನ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨, ೩, ೬, ೭ ಇವುಗಳು ಒಳ್ಳೆಯವಾಗಿವೆ.

ಮೀನ

ಪ್ರಕೃತಿ ಉತ್ತಮ. ಆದರೆ ಹೆಂಡತಿ ಮತ್ತು ಮಕ್ಕಳು ಮನಸ್ಸಿಗೆ ಬಾರದ ಕೆಲಸ ಮಾಡಲು ಹಟ ತೊಡುತ್ತಾರೆ. ಸ್ಥಾವರದಲ್ಲಿ ಅನುಕೂಲ ಪಲ್ಲಟವಾಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲ ಮನಸ್ಸಿಗೆತಕ್ಕಂತೆ ಮಿತ್ರರಲ್ಲಿ ವಿರೋಧ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ. ಪ್ರವಾಸಾದಿ ಕಾರ್ಯಗಳು ಉತ್ತಮ. ಉತ್ತರಾಭಾದ್ರಪದಾದ ೪ ನೇ ಮತ್ತು ರೇವತಿಯ ಮೊದಲಿನ ೩ ಚರಣಗಳಿಗೆ ಹೆಚ್ಚು ಉತ್ತಮ. ೪, ೫, ೮ ಇವು ಒಳ್ಳೆಯವು.

ಶಾಲೆಯ ಫೀ ಕಡಿಮೆ ಮಾಡಬೇಕೆಂದೂ ಶಿಕ್ಷಕರ ವೇತನವನ್ನು ಹೆಚ್ಚಿಸಬೇಕೆಂದೂ ಸರಕಾರವು ಶಾಲೆಗಳಿಗೆ ಹೆಚ್ಚು ಧನಸಹಾಯ ಮಾಡಬೇಕೆಂದೂ ಶಾಲೆಯ ಮೂವರು ವಿದ್ಯಾರ್ಥಿಗಳು ಒಂದು ಮನವಿಯನ್ನು ಮುಂಬಯಿಯ ಮುಖ್ಯ ಮಂತ್ರಿ ಶ್ರೀ. ಖೇರರಿಗೆ ಒಪ್ಪಿಸಿದರು. ತಾ. ೨೩ರಂದು ಈ ಬಗ್ಗೆ ಅನೇಕ ವಿದ್ಯಾರ್ಥಿಗಳು ಸೆಕ್ರೆಟರಿಯೇಟದ ಎದುರು ಮತಪ್ರದರ್ಶನ ಮಾಡಿದರು. ಮನವಿಯ ವಿಚಾರ ಮಾಡಲಾಗುವದೆಂದು ಶ್ರೀ. ಖೇರರು ವಿದ್ಯಾರ್ಥಿಗಳಿಗೆ ಆಶ್ವಾಸನ ವಿತ್ತರು.

...ವನ್ನು ...ಡಬೇಕೆಂದು ಮಿರಜ ಜಿಲ್ಲಾ ಬೋರ್ಡ ...

ಶಿವಮೊಗ್ಗೆಯ ಜೇಲಿನಲ್ಲಿರಿಸಲ್ಪಟ್ಟಿರುವ ಕಮ್ಯುನಿಸ್ಟರು ತಮಗೆ ಹವೆ ತಡೆಯುವದಿಲ್ಲೆಂದು ಅನ್ನತ್ಯಾಗ ಪ್ರಾರಂಭಿಸಿದ್ದಾರೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ...